Damage Book

THE BOOK WAS DRENCHED

TIGHT BINDING BOOK

TEXT FLY WITHIN THE BOOK ONLY

# ರೋಮ್ ಚಕ್ರಾಧಿಪತ್ಯದ ಚರಿತ್ರೆ

ಡಾ|| ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.

198552

UNIVERSAL LIBRARY
OU_198552
UNIVERSAL LIBRARY

OSMANIA UNIVERSITY LIBRARY

Call No. K923.1 Accession No. K.5273

Author S55R

Title

This book should be returned on or before the date last marked below.

# ರೋಮನ್ ಚಕ್ರಾಧಿಪತ್ಯದ ಚರಿತ್ರೆ

ಡಾ|| ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.

ಸಂಪಾದಕರು, ಪ್ರಕಾಶಕರು:

**ಎಚ್. ಎಂ. ಶಂಕರನಾರಾಯಣರಾವ್,** ಎಂ.ಎ.

**ಕೃಷ್ಣಮೂರ್ತಿಪುರಂ, ಮೈಸೂರು**

ಎಲ್ಲ ಹಕ್ಕುಗಳನ್ನು ಕಾದಿರಿಸಲಾಗಿದೆ

ಬೆಲೆ: [illegible]

ಮುದ್ರಕರು :

ಶ್ರೀ [illegible] ಪವರ್ ಪ್ರೆಸ್

ಸುಬ್ಬರಾಯನಕೆರೆ

ಮೈಸೂರು

# ಮುನ್ನುಡಿ

ಸ್ವತಂತ್ರ ಭಾರತದಲ್ಲಿ ಮಾತೃಭಾಷೆಯ ಮೂಲಕ ಶಿಕ್ಷಣವನ್ನು ಜ್ಞಾನಪ್ರಸಾರವನ್ನು ನಡೆಸಬೇಕಾದುದು ಆವಶ್ಯಕವೆಂಬ ತತ್ತ್ವವನ್ನಂಗೀಕರಿಸಿರುವುದರಿಂದ ಕನ್ನಡದಲ್ಲಿ ಕೂಡ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೂ ಸಾರ್ವಜನಿಕರಿಗೂ ಉಪಯುಕ್ತವಾಗುವ ಶಾಸ್ತ್ರಗ್ರಂಥಗಳನ್ನು ರಚಿಸುವುದು ಪ್ರಥಮ ಕರ್ತವ್ಯವಾಗಿರುತ್ತದೆ. ಆದುದರಿಂದ ವಿಶ್ವವಿದ್ಯಾಲಯದ ಪ್ರಾಥಮಿಕ ತರಗತಿಗಳಿಗೆ ಉಪಯೋಗವಾಗುವಂತೆ "ರೋಮನ್ ಚಕ್ರಾಧಿಪತ್ಯದ ಚರಿತ್ರೆ"ಯನ್ನು ರಚಿಸಿದೆ. ರೋಮನ್ನರ ಸಂಸ್ಕೃತಿಯನ್ನು ತಿಳಿಯಲಿಚ್ಛಿಸುವ ಇತರರಿಗೂ ಇದರಿಂದ ಉಪಯೋಗವುಂಟೆಂದು ನಂಬಿದೆ. ಈ ಉದ್ಯಮದಲ್ಲಿ ಸಹಕಾರವಿತ್ತ ನನ್ನ ಮಿತ್ರರಾದ ಶ್ರೀ ಎಚ್. ಎಂ. ಶಂಕರನಾರಾಯಣರಾಯರಿಗೂ, ಶ್ರೀ ಟಿ. ಎಸ್. ಶಾಮರಾಯರಿಗೂ, ಶ್ರೀ ಪರಿಮಳ ಶ್ರೀನಿವಾಸರಿಗೂ ನನ್ನ ವಂದನೆಗಳು.

**ಮೈಸೂರು** **ಎಸ್. ಶ್ರೀಕಂಠಶಾಸ್ತ್ರೀ.**

# ಅರಿಕೆ

ರೋಮನರ ಇತಿಹಾಸ ಬೋಧಪ್ರದವಾದುದು. ಅವರ ಸಂಸ್ಕೃತಿ ಹಿರಿದಾದುದು. ರೋಮ್ ವೀರರು ಸಾಧಿಸಿದ ವಿಜಯಗಳು ಇತಿಹಾಸಪ್ರಸಿದ್ಧವಾದುವು. ಅವರು ಕಟ್ಟಿದ ಚಕ್ರಾಧಿಪತ್ಯ ವಿಶ್ವದ ದೊಡ್ಡ ಚಕ್ರಾಧಿಪತ್ಯಗಳಲ್ಲಿ ಒಂದು. ಶಾಸನ ಪ್ರಪಂಚದಲ್ಲಿ ನಿಯಮ ಪಾಲನೆಯ ವಿಷಯದಲ್ಲಿ, ಈ ಜನಾಂಗ ಅಚ್ಚಳಿಯದ ಕೀರ್ತಿಯನ್ನು ಗಳಿಸಿದ್ದಾರೆ. ಇಂತಹ ಸತ್ವಶಾಲಿಗಳಾದ ಜನಾಂಗದ ಚರಿತ್ರೆಯನ್ನು ಪ್ರಸಿದ್ಧ ವಿದ್ವಾಂಸರಾದ ಡಾ॥ ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್. ಅವರು ಕನ್ನಡದಲ್ಲಿ ಬರೆದು, ನಮ್ಮ ಜನರಲ್ಲಿ ಆ ಜ್ಞಾನದ ಪ್ರಸಾರಕ್ಕೆ ತುಂಬ ಸಹಾಯಮಾಡಿದ್ದಾರೆ. ಇದಕ್ಕಾಗಿ ಕನ್ನಡಿಗರು ಶ್ರೀಮಾನ್ ಶಾಸ್ತ್ರಿಗಳಿಗೆ ಅತ್ಯಂತ ಕೃತಜ್ಞರು. ಈ ಗ್ರಂಥವನ್ನು ಪ್ರಕಟಿಸಲು ಅನುಮತಿಯಿತ್ತ ನಮ್ಮ ಗುರುಗಳಿಗೆ ಈ ಮೂಲಕ ವಂದನೆಗಳನ್ನು ಅರ್ಪಿಸುತ್ತೇವೆ.

ಶಾರದಾವಿಲಾಸ ಕಾಲೇಜು,<br>**ಮೈಸೂರು., ೧-೧೧-೪೯** } **ಎಚ್. ಎಂ. ಶಂಕರನಾರಾಯಣರಾವ್.**

# ರೋಮನ್ ಚಕ್ರಾಧಿಪತ್ಯದ ಚರಿತ್ರೆ

## ವಿಷಯ ಸೂಚನೆ

---

೧ (ಕ) ರೋಮನ್ ಸಾಮ್ರಾಜ್ಯ ಚರಿತ್ರೆಯ ಪ್ರಯೋಜನ ಮೂಲಾಧಾರಗಳು

(ಖ) ಇಟಾಲಿಯ; ರೋಮ್ ಜನಾಂಗಗಳು—ಎಟ್ರಸ್ಕನ್, ಅಂಬ್ರೈ, ಸಾಬಿಲ್ಲೈನ್, ಸಾಮ್ನೈಟ್, ಸಾಬೈನ್, ಲ್ಯಾಟಿಯಂ, ಲ್ಯಾಟಿನ್, ಈಕ್ವೈ, ವಾಲ್ಸೈ

(ಗ) ರೋಮನ್ ಪಟ್ಟಣದ ಚರಿತ್ರೆ ಚತುರಸ್ರ ರೋಮ್ ನಗರ—ಅದರ ಬೆಳವಣಿಗೆ.

೨ ರಾಜರ ಆಳಿಕೆ, ಪ್ರಜೆಗಳೂ, ಸರ್ಕಾರವು ರೋಮ್ ಪ್ರಜೆಗಳು (ಪಾಪ್ಯುಲಸ್ ರೊಮಾನಸ್) ಮೂರು ಜನಾಂಗ, ಮೂವತ್ತು ಕ್ಯೂರಿಯ, ಕಮಿಷಿಯ ಸೆಂಚೂರಿಯಾಟ, ರಾಜ, ತಾತ್ಕಾಲಿಕ ರಾಜ, ಪಿತೃವ್ಯರು (ಪ್ಯಾಟ್ರಿಸ್), ಸಾಮಾನ್ಯರು (ಪ್ಲೆಬ್ಸ್), ರಾಜರ ಪರಾಜಯ, ಮತ. ಸರ್ವಿಯಸ್ ಟಲ್ಲಿಯಸ್ಸಿನ ಸುಧಾರಣೆಗಳು.

೩. ಲ್ಯಾಟಿನ್ ಲೀಗ್, ಎಟ್ರಸ್ಕನ್ ಯುದ್ಧಗಳು, ವೈ. ವಾಲ್ಸೈ, ಈಕ್ವೈ, ಸಾಬೈನ್ ಯುದ್ಧಗಳು. ವರ್ಗಗಳ ಕಲಹ. ಟ್ರೈಬ್ಯೂನ್ (ಕ್ರಿ.ಪೂ. ೪೯೪). ಕಮಿಷ್ಯಿಯ ಟ್ರಿಬ್ಯೂಟ, ಡಿಸೆಂವೀರ್ಸ್, ೧೨ ಶಾಸನಗಳು (ಕ್ರಿ. ಪೂ. ೪೫೧–೪೫೦). ಅಂತರ್ವಿವಾಹ (ಕನ್ಯೂಬಿಯಂ). ಯುದ್ಧಾಧಿಕಾರಿಗಳು, ಸೆನ್ಸಾರ್ಗಳು.

ಗ್ವಾಲ್ ಜನರ ದಂಡಯಾತ್ರೆ (೩೯೦ ಕ್ರಿ.ಪೂ.)

೪ ಇಟಲಿ ಆಕ್ರಮಣ (ಕ) ವಾಲ್ಸೈ, ಈಕ್ವೈ, ಗಾಲ್ ಯುದ್ಧಗಳು. (ಖ) ಸಾಮ್ನೈಟ್ ಯುದ್ಧಗಳು—ಮೊದಲ ಯುದ್ಧ ೩೪೩-೩೪೧; ಲ್ಯಾಟಿನ್ ಲೀಗಿನ ಸಮಾಪ್ತಿ ೩೪೦-೩೩೮. ಎರಡನೆಯ ಯುದ್ಧ ೩೨೬-೩೦೪. ಮೂರನೆಯ ಯುದ್ಧ ೨೯೮-೨೯೦ (ಗ) ರಾಜಕೀಯ ಸುಧಾರಣೆಗಳು, "ನೆಕ್ಸಂ" ವಿಸರ್ಜನೆ, ಲೈಸೀನಿಯಸ್ ರೊಗೇಷನ್ಸ್, ಪ್ಲೆಬಿಯನ್ನರ ಸ್ಥಿತಿ. (ಘ) ಬೃಹತ್ ಗ್ರೀಸ್ (೨೮೯-೨೭೧), ಟಾರೆಂಟಂ, ಪೈರ್ಹಸ್ ನೊಡನೆ ಯುದ್ಧ—ಹೆರಾಕ್ಲೆಯ ಮತ್ತು ಆಸ್ಕ್ಯುಲಂ ಕದನಗಳು, ಪೈರ್ಹಸ್ಸಿನ ಪರಾಜಯ, ಬೆನೆವೆನ್ಟಂ, ಸಿಸಿಲಿ ಮತ್ತು ದಕ್ಷಿಣ ಇಟಲಿಯಲ್ಲಿ ದಿಗ್ವಿಜಯ

೫ (ಕ) ರೋಮ್ ಮತ್ತು ಕಾರ್ಥೇಜ್ ಸ್ಪರ್ಧೆ, ರೋಮಿನ ನೌಕಾಬಲ, ಸೇನಾಬಲ, ವ್ಯಾಪಾರ.

(ಖ) ರೋಮ್ ಸರ್ಕಾರಕ್ರಮ; ಕ್ಯೂರೂಲ್ ನ್ಯಾಯಾಧೀಶರು, ಇತರ ನ್ಯಾಯಾಧೀಶರು, ಸೆನೇಟ್.

೬. ಪ್ಯೂನಿಕ್ ಯುದ್ಧಗಳು, ಕಾರಣಗಳು, ಪ್ರಥಮ ಯುದ್ಧ (೨೬೪-೨೫೦)—ಸಿಸಿಲಿ, ಆಗ್ರಿಗೆಂಟಂ, ಹೈರೋ ಮಿತ್ರತ್ವ, ರೋಮಿನ ನೌಕಾಬಲ, ಮೈಕಲೆ ಮತ್ತು ಎಕ್ನೋಮಸ್ ಕದನಗಳು ರೆಗ್ಯುಲಸ್ ವಶ, (೨೬೨-೨೫೫). ಪನೋರ್ಮಸ್ ವಶ, (೨೫೪-೨೫೦) ಲಿಲಿಬೌಮ್ ಮುತ್ತಿಗೆ, ಎರಿಕ್ಸ್ ಮತ್ತು ಡ್ರೆಪನ ಕದನಗಳು, (೨೪೯-೨೪೨). ಹ್ಯಾಮಿಲ್ಕಾರ್, ಎಗ್ಯೂಸೆ ದ್ವೀಪಗಳ ಜಯ, ಸಿಸಿಲಿವಶ, ಶಸ್ತ್ರೋಪಜೀವಿಗಳ ಯುದ್ಧ ಮತ್ತು ಸಾರ್ಡಿನಿಯ ವಶ.

೭. ರೋಮನ್ನರ ಬೆಳವಣಿಗೆ (೨೪೧-೨೧೮). ಉತ್ತರ ಇಟಲಿ. ಇಲ್ಲಿರಿಯನ್ ನೀರ್ಗಳ್ಳರೊಡನೆ ಯುದ್ಧ. ರೋಮನ್ ಜನರು.

ಹೊಸ ಕುಲೀನರು (ನೋಬಲ್ಸ್) ಸಾರ್ವಜನಿಕ ಭೂಮಿಗಳು (ಆಗರ್ ಪಬ್ಲಿಕಸ್). ದಾಸರು. ಗ್ರೀಕ್ ಸಂಸ್ಕೃತಿಯ ಪ್ರಭಾವ. ಸೆನೇಟಿನ ಅಧಿಕಾರಕ್ಷಯ ಕಮಿಷಿಯ ಟ್ರಿಬ್ಯೂಟ. ಟ್ರಿಬ್ಯುನೇಟಿನಲ್ಲಿ ಬದಲಾವಣೆ

೮. ಎರಡನೆಯ ಪ್ಯೂನಿಕ್ ಯುದ್ಧ. ಕಾರಣಗಳು. ಸ್ಪೈನ್ ಮತ್ತು ಸಾಗುಂಟಂ ಇಟಲಿಯಲ್ಲಿ ಯುದ್ಧ (೨೧೮-೨೧೬). ಹ್ಯಾನಿ ಬಾಲನ ದಂಡಯಾತ್ರೆ. ಟೈಸಿನಸ್, ಟ್ರೆಬಿಯ, ಟ್ರಾಸಿಮೀನ್ ಸರೋವರ, ಕ್ಯಾನ್ನೈ ಯುದ್ಧಗಳು. ಇಟಲಿಯಲ್ಲಿ ಯುದ್ಧ (೨೧೬-೨೦೭). ಕ್ಯಾಪುವ ವಶ—ಟಾರೆಂಟಂ—ಮೆಟಾರಸ್ ಕದನ ಸಿಸಿಲಿಯಲ್ಲಿ ಯುದ್ಧ (೨೧೪-೨೧೨) ಸೈರಕ್ಯೂಸ್‌ವಶ. ಸ್ಪೈನಿನಲ್ಲಿ ಯುದ್ಧ-ಸಿಪಿಯೋ ಆಫ್ರಿಕಾನಸ್ (೨೧೦) ನ್ಯೂ ಕಾರ್ಥೇಜ್‌ವಶ. ಇಲಿಪ ಕದನ. ಸ್ಪೈನ್ ವಶ. ಸಿಸಿಲಿ ಮತ್ತು ಆಫ್ರಿಕದಲ್ಲಿ ಯುದ್ಧ (೨೦೭-೨೦೨). ಸಿಪಿಯೋ ದಂಡ ಯಾತ್ರೆ ಹ್ಯಾನಿಬಾಲಿನ ಹಿಂತಿರುಗುವಿಕೆ ಜಾಮ ಕದನ (೨೦೨) ಐದನೆಯ ಫಿಲಿಪ್ಪಿನೊಡನೆ ಮೊದಲನೇ ಮ್ಯಾಸಿಡೋನಿಯನ್ ಯುದ್ಧ (೨೧೪-೨೦೫)

೯. ಇಟಲಿಯ ಪರಿಸ್ಥಿತಿ. (ಕ) ರೋಮ್‌ನಗರದ ಪ್ರಾಬಲ್ಯ. ಸೆನೇಟಿನ ಅಧಿಕಾರ ವ್ಯಾಪ್ತಿ ಗ್ರೀಕ್ ಸಂಸ್ಕೃತಿಯ ಪ್ರಭಾವ ಜನ ಪದಭಾಗಗಳಲ್ಲಿ ನಿರ್ಜನತೆ (ಖ) ವಿದೇಶ ಸಂಬಂಧ. ೧. ಎರಡನೆಯ ಮ್ಯಾಸಿಡೋನಿಯನ್ ಯುದ್ಧ—ಸೈನೊಸೆಫಾಲಿ ಕದನ (೨೦೦-೧೯೫). ಗ್ರೀಕ್ ನಗರಗಳ ಸ್ವಾತಂತ್ರ್ಯ. ೨. ಸಿರಿಯನ್ ಯುದ್ಧ. ಮೂರನೆಯ ಆಂಟಿಯೋಕಸ್ ಮತ್ತು ಇಟೋಲಿಯನ್ನರು. ಥರ್ಮಾಪಿಲೆ ಮತ್ತು ಮ್ಯಾಗ್ನೀಸಿಯಂ ಕದನಗಳು (೧೯೩—೧೮೮) ಏಷ್ಯಾ ವ್ಯವಸ್ಥೆ ಮತ್ತು ಇಟೋಲಿಯ ನಾಶ. ೩. ಗಾಲ್ ಮತ್ತು ಲೈಗೂರಿಯ

ಯುದ್ಧಗಳು (೨೦೦-೧೭೮). ಸ್ಪೈನ್ ವ್ಯವಸ್ಥೆ. ೪. ಮೂರನೆ ಮ್ಯಾಸಿಡೋನಿಯ ಯುದ್ಧ-ಪೈಡ್ನ (೧೭೫-೧೬೮). ರೋಮಿನ ರಾಷ್ಟ್ರ (೧೪೭-೧೪೬) ೫. ಕಾರಿಂತ್ ವಶ ಮತ್ತು ಗ್ರೀಸ್ ದೇಶದ ಜಯ ೬. ಕಾರ್ಥೇಜಿನ ನಾಶ (೧೪೬). ೭. ಸ್ಪೈನಿನಲ್ಲಿ ನ್ಯೂಮಂಟೈನ್ ಯುದ್ಧ ರೋಮನ್ ಸಾಮ್ರಾಜ್ಯ.

೧೦ ಒಡಕು (೧೪೦-೧೨೦) ಸೆನೇಟಿನ ಪ್ರಾಬಲ್ಯ. ಸರ್ಕಾರಕ್ರಮ ಸಿಸಿಲಿಯಲ್ಲಿ ಗುಲಾಮರ ಯುದ್ಧ. ಗ್ರಾಕ್ಕೈ ಸಹೋದರರ ಸುಧಾರಣೆಗಳು ನ್ಯಾಯ ಮತ್ತು ನ್ಯಾಯಸ್ಥಾನಗಳು. ಏಷ್ಯಾ ಪ್ರಾಂತಗಳು—ಆಹಾರ, ಧಾನ್ಯ, ಸಿಪಾಯಿಗಳು, ಸಾರ್ವಜನಿಕ ಕಾರ್ಯಗಳು. ವಲಸೆ ರಾಷ್ಟ್ರಗಳು. ಅಶ್ವಿಕರ ಕೋಮು ಇತರ ಸುಧಾರಣೆಗಳು. ಗೇಯಸ್ ಗ್ರಾಕಸ್ಸಿನ ಖೂನಿ ಮತ್ತು ಅದರ ಪರಿಣಾಮ.

೧೧. ಮೇರಿಯಸ್ (೧೧೫-೧೦೦). ಗ್ಯಾಲ್ಲಿಯ ಟ್ರಾನ್ಸಾಲ್ಪೈನ. ಸಿಂಬ್ರೈ, ಟ್ಯೂಟನ್ ಮುಂತಾದವರು. ಸರಹದ್ದಿನಸ್ಥಿತಿ. ಮೇರಿಯಸ್ಸಿನ ದಿಗ್ವಿಜಯ.

೧೨. ಅಂತಃಕಲಹಗಳು. ಪ್ರಥಮಘಟ್ಟ ೧೦೦-೮೩. ರಾಜಕೀಯ ಪಕ್ಷಗಳು—ಆಪ್ಟಿಮೇಟ್ ಮತ್ತು ಪಾಪ್ಯುಲರ್ಸ್. ಸಾಟರ್ನೈನಸ್ಸಿನ ವ್ಯವಹಾರಪದ್ಧತಿ ಸಾಮಾಜಿಕ ಯುದ್ಧ ಮತ್ತು ಅದರ ಪರಿಣಾಮಗಳು ಸಲ್ಪೀಸಿಯಸ್ಸಿನ ನಿಬಂಧನೆಗಳು. ಮೇರಿಯಸ್ ಮತ್ತು ಸಲ್ಲರ ಸ್ಪರ್ಧೆ ಮೇರಿಯಸ್ಸಿನ ಮರಣ.

೧೩. ಸಲ್ಲನ ನಿರಂಕುಶಾಧಿಕಾರ. ಮಿತ್ರ ಡಾಟಿಸನೊಡನೆ ಯುದ್ಧ (೮೮-೮೪) ಗ್ರೀಸಿನಲ್ಲಿ ಸಲ್ಲನ ದಂಡಯಾತ್ರೆಗಳು (೮೭-೮೫). ಏಷ್ಯದಲ್ಲಿ ಶಾಂತಿಸ್ಥಾಪನೆ ರೋಮಿನಲ್ಲಿ ಸಲ್ಲನ ಸುಧಾರಣೆಗಳು (೮೩-೮೨) ಕ್ರಿಮಿನಲ್ ಕೋಡ್, ಹತ್ತು ರೋಮನ್ನರ

ಪ್ರಾಂತಗಳು. ಸೆನೇಟಿನ ಅಧಿಕಾರ ವ್ಯಾಪನೆ ಸಲ್ಲನ ಮರಣ (ಕ್ರಿ ಪೂ. ೭೮)

೧೪. ಪಾಂಪೆ ಮಹಾಪುರುಷ (೭೮–೬೨). ರೋಮಿನಲ್ಲಿ ಕೋಮು ಗಳು. ಲೆಪಿಡಸ್ಸಿನ ದಂಗೆ (೭೮–೭೭). ಸ್ಪಾರ್ಟಾಕಸ್ಸಿನ ದಂಗೆ (೭೩–೭೧) ಲ್ಯೂಸಲಸ್ ಮತ್ತು ಎರಡನೆ–ಮೂರನೆಯ ಮಿತ್ರ ಡಾಟಿಸ್ ಯುದ್ಧಗಳು. ಪೂರ್ವದಲ್ಲಿ ಪಾಂಪೆ–ಮಿತ್ರ ಡಾಟಿಸನೊಡನೆ ಯುದ್ಧ (೬೬). ಏಷ್ಯಾ ವ್ಯವಸ್ಥೆ ರೋಮಿನಲ್ಲಿ ಪಾಂಪೆ.

೧೫ ಪ್ರಜಾಪ್ರಭುತ್ವದ ಕ್ಷೀಣತೆ (೬೩–೬೧) ಕಾರಣಗಳು–ಇಟಲಿ ಯಲ್ಲಿ ಜನ ಹೀನತೆ, ಪ್ರಾಂತಗಳಲ್ಲಿ ಆಡಳಿತ, ಕೋಮುಗಳ ಜಗಳ, ಪಕ್ಷಗಳ ಸ್ಪರ್ಧೆ.

ಪಕ್ಷಗಳ ಮುಖಂಡರು—ಪಾಪ್ಯುಲರ್ ಪಕ್ಷದ ಸೀಸರ್; ಕ್ರಾಸಸ್; ಆಪ್ಟಿಮೇಟ್ ಪಕ್ಷದ ಕ್ಯಾಟುಲಸ್. ಲ್ಯೂಸುಲಸ್, ಕೇಟೊ. ಕ್ಯಾಟುಲಸ್ಸಿನ ಒಳಸಂಚು, ಆದರ ಪರಿಣಾಮ. ಸಿಸಿರೊ.

೧೬. ತ್ರಿಮೂರ್ತಿಗಳ ಅಧಿಕಾರ ಸೀಸರ್ ಮತ್ತು ಪಾಂಪೆಗಳ ಸ್ಪರ್ಧೆ (೬೬). ಸೀಸರಿನ ಪ್ರಾಂತಗಳು—ಗಾಲಿನಲ್ಲಿ ಒಂಬತ್ತು ದಂಡ ಯಾತ್ರೆಗಳು (೫೮–೫೦) ಹೆಲ್ವೀಷಿಯೈ ಮತ್ತು ಜರ್ಮನ್ನರು, ಬೆಲ್ಜೈ ಮತ್ತು ನೆವೈರ್, ವೆನಿಸೈ, ಜರ್ಮನಿ, ಇಂಗ್ಲೆಂಡ್, ನೆರ್ವೈ ಮತ್ತು ಟ್ರೆವಿರೈ, ವೆರ್ಸಿಂಜಿಟೋರಿಕ್ಸ್ ಮತ್ತು ಆರ್ವೆರ್ನೈ, ಇತರರು

೧೭ ಅಂತಃಕಲಹ—ಪಾಂಪೆ. ಸೀಸರ್, ಕ್ರಾಸಸ್. ಪಾಂಪೆಯ ಸರ್ವಾಧಿಕಾರ. ಅವನ ಸುಧಾರಣೆಗಳು ಸೀಸರನೊಡನೆ ಮನಸ್ತಾಪ. ಸೀಸರಿನ ಪುನರಾಗಮನ (ಕ್ರಿ. ಪೂ. ೪೯).

ಪಾಂಪೆಯ ಪರಾಜಯ ರೋಮಿನಲ್ಲಿ ಸೀಸರ್ (೪೯). ಮಾರ್ಸೈಲ್ಸ್ ಮತ್ತು ಸ್ಪೈನಿನಲ್ಲಿ ಪಾಂಪೆಯೊಡನೆ ಯುದ್ಧ. ಸೀಸರನ ನಿರಂಕುಶಾಧಿಕಾರ. ಪೂರ್ವದಲ್ಲಿ ಪಾಂಪೆಯೊಡನೆ ಯುದ್ಧ. ಫಾರ್ಸೇಲಿಯ ಕದನ. ಪಾಂಪೆಯ ಮರಣ ಸೀಸರನ ಈಜಿಪ್ಟ್ ದಂಡಯಾತ್ರೆ. ಅಲೆಕ್ಸಾಂಡ್ರೈನ್ ಯುದ್ಧ. ಫಾರ್ನಾಸಿಸ್‌ನೊಡನೆ ಯುದ್ಧ–ಸೇಲ ಕದನ (೪೭). ಥಾಪ್ಸಸ್ ಕದನ (೪೬) ಕ್ಯಾಟೋ ಮರಣ. ಸೀಸರಿನ ಸರ್ವಾಧಿಕಾರ.

೧೮ ಸೀಸರಿನ ಆಡಳಿತ (೪೫) ಸುಧಾರಣೆಗಳು ಒಳಸಂಚುಗಳು. ಸೀಸರನ ಹತ್ಯೆ ಆಂಟೋನಿ ಮತ್ತು ಆಕ್ಟೇವಿಯನ್ನರ ಸ್ಪರ್ಧೆ. ಮ್ಯೂಟಿನ ಕದನ (೪೪–೪೩) ಆಕ್ಟೇವಿಯನ್ನನ ಅಧಿಕಾರ. ತ್ರಿಮೂರ್ತಿಗಳ ಆಡಳಿತ ಫಿಲಿಪ್ಪೈ ಕದನ (೪೨). ಸಾಮ್ರಾಜ್ಯದ ಹಂಚಿಕೆ.

೧೯ ಆಕ್ಟೇವಿಯನ್ ಮತ್ತು ಆಂಟೋನಿಯ ವೈಮನಸ್ಯ. ಸೆಕ್ಸ್ಟಸ್ ಪಾಂಪೆಯೊಡನೆ ಮೈಸಿನಂ ಒಪ್ಪಂದ. ಪೂರ್ವದೇಶದಲ್ಲಿ ಆಂಟೊನಿ—ಕ್ಲಿಯೋಪಾಟ್ರ ಸಂಬಂಧ. ಆಕ್ಟಿಯಂ ಕದನ ಮತ್ತು ಆಂಟೊನಿ ಮರಣ.

೨೦. ಆಗಸ್ಟಸ್ ಪ್ರಿನ್ಸಿಪೇಟ್ (ಕ್ರಿ ಪೂ. ೩೦–೧೪). ರೋಮನ್ ಸಾಮ್ರಾಜ್ಯ. ಯುದ್ಧಗಳು—ಸ್ಪೈನ್, ಆಲ್ಪ್ಸ್, ರ್ಹೈನ್, ಡಾನ್ಯೂಬ್, ಇಲ್ಲಿರಿಯ ಮತ್ತು ಪೂರ್ವದೇಶ ಸಮಾಜ ಸುಧಾರಣೆ. ನಿಬಂಧನೆಗಳು. ಪ್ರಾಂತಾಡಳಿತ ರೋಮನ್ ಸಂಸ್ಕೃತಿಯ ಸುವರ್ಣಯುಗ. ಆಗಸ್ಟಸ್ಸಿನ ಮರಣ. ಗುಣಾವ ಗುಣಗಳು

# ಕಾ ಲ ಸೂ ಚಿ

ಕ್ರಿ. ಪೂ.—

## ರಾಜರ ಆಡಳಿತ

೭೫೩-೫೦೯

೭೫೩-೧೬ ರೋಮ್ಯುಲಸ್

೭೫೩ ನಗರಸ್ಥಾಪನೆ

೭೧೬-೬೭೨ ನ್ಯೂಮಪಾಂಪಿಲಿಯಸ್

ಟಲ್ಲಿಯಸ್ ಹಾಸ್ಟಿಲಿಯಸ್

ಆಂಕಸ್ ಮಾರ್ಸಿಯಸ್

ಟಾರ್ಕ್ವಿನಿಯಸ್ ಪ್ರಿಸ್ಕಸ್

೫೭೮-೫೩೪ ಸರ್ವಿಯಸ್ ಟಲಿಯಸ್ ಸುಧಾರಣೆಗಳು

೫೩೪-೫೧೦ ಟಾರ್ಕ್ವಿನಿಯಸ್ ಸುಪರ್ಬಸ್

## ಪ್ರಜಾಪ್ರಭುತ್ವ

೫೦೯ ಸ್ಥಾಪನೆ, ಕಾನ್ಸಲರ ನೇಮಕ

### ಯುದ್ಧಗಳು

೫೦೭-೪೯೬ ಎಟ್ರುಸ್ಕನ್ ಯುದ್ಧ

೪೯೫-೩೮೯ ವಾಲ್ಸ್ಕೈಸಾಬೈನ್ ಯುದ್ಧಗಳು

### ವರ್ಗಗಳ ಕಲಹ

೪೯೩.೫ ಟ್ರೈಬ್ಯೂನರು
೨ ಎಡೈಲರು

೪೮೬ ವ್ಯವಸಾಯ ಕಾನೂನು

೪೭೨ ಲೆಕ್ಸ್‌ಪಬ್ಲಿಲಿಯ
ಟ್ರೈಬ್ಯೂನ್ ಚುನಾವಣೆ

೪೫೭.೧೦ ಟ್ರೈಬ್ಯೂನರು

೪೫೧ ಪ್ರಥಮ ಡೆಸಂವಿರೇಟ್

೪೫೦ ಎರಡನೇ ಡೆಸಂವಿರೇಟ್
೧೨ ಕಾನೂನು ಕೋಷ್ಟಕ

೪೪೯ ವೆಲಿರಿಯೋ ಹೊರೇಷಿಯಸ್ ಕಾನೂನು

೪೪೫ ಲೆಕ್ಸ್ ಕ್ಯಾನೂಲಿಯ

| | |
|---|---|
| ಕ್ರಿ. ಪೂ.— | ಕ್ರಿ ಪೂ.— |
| ೩೮೯ ಸಾಮ್ನೈಟ್ ಯುದ್ಧ | ೪೪೪ ಸೈನ್ಯದ ಟ್ರೈಬ್ಯೂನರು |
| | ೪೨೧ ಕ್ವೆಸ್ಟರರ ನೇಮಕ |
| ೩೮೪ ಗಾಲ್ಲನರ ಧಾಳಿ | ೩೭೬-೩೬೭ ಲೈಸೀನಿಯನ್ ರೊಗೇಷನ್ಸ್ |
| | ೩೬೬ ಪ್ಲೆಬಿಯನ್ನರ ಕಾನ್ಸಲರು |
| | ೩೫೧ ,, ಸೆನ್ಸಾರರು |
| ೩೪೩-೩೪೦ ಪ್ರಥಮ ಸಾಮ್ನೈಟ್ ಯುದ್ಧ | ೩೩೯ ಲೆಜಿಸ್ ಪಬ್ಲಿಲಿಯ |
| ೩೪೦-೩೩೮ ಲ್ಯಾಟಿನ್ ಯುದ್ಧ | |
| ೩೨೮-೩೦೪. ೨ ನೇ ಸಾಮ್ನೈಟ್ ಯುದ್ಧ | ೩೩೪ ಪ್ರೇಟೊರರ ನೇಮಕ |
| ೨೯೮-೯೦. ೩ ನೇ ಸಾಮ್ನೈಟ್ ಯುದ್ಧ | ೩೨೯ ಲೆಕ್ಸ್‌ಪೊಯಿಟೇಲಿಯ |
| | ೨೯೬ ಲೆಕ್ಸ್ ಆಗುಲಿನ |
| ೨೮೧-೭೫ ಪೈರ್ಹಸ್‌ನೊಡನೆ ಯುದ್ಧ | ೨೮೬ ಲೆಕ್ಸ್‌ಹಾರ್ಟೆನ್ಸಿಯ |
| ೨೭೫-೬೬ ಎಲ್ಲ ಇಟಲಿ ವಿಜಯ | ೨೭೫-೬೬ ಸೆನೇಟ್ ಪ್ರವೇಶ |

## ಪ್ಯೂನಿಕ್ ಯುದ್ಧ

೨೬೪ ಪ್ರಥಮ ಯುದ್ಧಾರಂಭ

ಹಾಸ್ಡ್ರುಬಲ್.

೨೪೧ ಸಿಸಿಲಿ ವಶ. ಶಾಂತಿ

೨೩೫—೨೫ ಕಾರ್ಸಿಕ ಸಾರ್ಡಿನಿಯ ವಶ

ಹ್ಯಾಮಿಲ್ಕಾರ್ ಮತ್ತು ಹಾನಿಬಾಲ್

ಸ್ಪೈನ್ ಆಕ್ರಮಣ

ಕ್ರಿ. ಪೂ.—

೨೧೮–೨೨ ದ್ವಿತೀಯ ಪ್ಯೂನಿಕ್ ಯುದ್ಧ
ರೋಮನ್ನರ ಪರಾಜಯ
ಹ್ಯಾನಿಬಾಲ ದಂಡಯಾತ್ರೆ

[೨೧೫–೨೦೫ ಮ್ಯಾಸಿಡಾನ್ ಪ್ರಥಮ ಯುದ್ಧ]

೨೧೨ ಸಿಪಿಯೋ ವಿಜಯ

೨೦೨ ಸಾಮ ಕದನ

[೨೦೦–೧೯೭ ಎರಡನೆಯ ಮ್ಯಾಸಿಡಾನ್ ಯುದ್ಧ]

೨೦೦–೧೯೧ ಗಾಲರೊಡನೆ ಯುದ್ಧ

೧೯೦ ಸಿರಿಯ ಯುದ್ಧ

[೧೭೧–೧೬೮ ಮೂರನೆ ಮ್ಯಾಸಿಡಾನ್ ಯುದ್ಧ]

೧೫೫–೧೫೩ ಸ್ಪೈನ್ ಯುದ್ಧ

೧೪೯–೧೪೬ ಮೂರನೆ ಪ್ಯೂನಿಕ್ ಯುದ್ಧ
ಕಾರ್ಥೇಜ್ ನಾಶ

೧೪೩–೧೩೩ ನ್ಯೂಮಾಂಟೈನ್ ಯುದ್ಧ

೧೩೯–೧೦೩ ಗುಲಾಮರ ಯುದ್ಧ

೧೩೪–೧೩೨ ಸಿಸಿಲಿ ಗುಲಾಮರ ಯುದ್ಧ

೧೩೩ ಟೈಬೀರಿಯಸ್ ಗ್ರಾಕಸ್

೧೨೩–೨೧ ಗೇಯಸ್ ಗ್ರಾಕಸ್

೧೧೩–೧೦೧ ಸಿಂಬ್ರಿಯಸ್ ಯುದ್ಧ

೧೧೨–೧೦೬ ಜುಗುರ್ಥೈನ್ ಯುದ್ಧ

## ಅಂತರ್ಯುದ್ಧಗಳು

ಕ್ರಿ ಪೂ.—

೧೦೦–೮೩ ಪ್ರಥಮ ಘಟ್ಟ

೧೧೧–೧೦೬ ಮೇರಿಯಸ್

೯೦–೮೯ ಸಾಮಾಜಿಕ ಯುದ್ಧ

೮೮ ಸಲ್ಪಿಷಿಯಸ್ ಸುಧಾರಣೆಗಳು

೮೬ ಮೇರಿಯಸ್ ಮರಣ

೮೫ ಸಿನ್ನನ ಸುಧಾರಣೆ

೮೧–೭೯ ಸಲ್ಲನ ಅಧಿಕಾರ

೮೭–೮೪ ಪ್ರಥಮ ಮಿತ್ರಡಾಟಿಸ್ ಯುದ್ಧ
ಡಾರ್ಡನಸ್ ಕರಾರು

೮೧ ದ್ವಿತೀಯ ಮಿತ್ರಡಾಟಿಸ್ ಯುದ್ಧ

೭೭ ಮೂರನೆ ಮಿತ್ರಡಾಟಿಸ್ ಯುದ್ಧ

೭೩–೭೧ ಸ್ಪಾರ್ಟಕಸ್ ಗುಲಾಮರ ಯುದ್ಧ

೬೬–೬೩ ಪಾಂಪೆ ಏಷ್ಯದಲ್ಲಿ ವಿಜಯ

೬೩ ಸಿಸಿರೊ ಕ್ಯಾಟಲೈನ್ ಒಳಸಂಚು

೬೦ ತ್ರಿಮೂರ್ತ್ಯಧಿಕಾರ

೫೮–೫೦ ಜೂಲಿಯಸ್ ಸೀಸರನ ಯೂರೋಪ್ ದಂಡಯಾತ್ರೆಗಳು

೫೨–೪೯ ಅಂತರ್ಯುದ್ಧ

೪೯–೪೨ ಜೂಲಿಯಸ್ ಸೀಸರನ ಸುಧಾರಣೆಗಳು

೪೪–೪೨ ಅಂಟೋನಿ–ಅಕ್ಟೇವಿಯನ್ ಯುದ್ಧ

೪೨ ಫಿಲಿಪ್ಪೈ ಕದನ

ಕ್ರಿ.ಪೂ —

೪೧–೪೦ ಪೆರ್ರೂಸಿಯನ್ ಯುದ್ಧ
ಆಂಟೊನಿ–ಆಕ್ಟೇವಿಯನ್ನರ ಶಾಂತಿ
ಬ್ರುಂಡೂಸಿಯಂ ಒಪ್ಪಂದ

೩೫ ಸೆಕ್ಸ್ಟಸ್ ಪಾಂಪೆ ಮರಣ

೩೧ ಆಂಟೊನಿ ಪರಾಜಯ ಆಕ್ಟಿಯಂ ಕದನ

೩೦ ಆಂಟೊನಿ ಕ್ಲಿಯೋಪಾಟ್ರರ ಮರಣ

## ಆಗಸ್ಟಸ್ ಕ್ರಿ.ಪೂ. ೩೦—ಕ್ರಿ ಶ. ೧೪

೩೦ ಟ್ರೈಬ್ಯುನಿಷಿಯ ಪೊಟೆಸ್ಟಾಸ್
ಈಜಿಪ್ಟ್ ಪ್ರಾಂತವಾದದ್ದು

೨೯ ಇಲ್ಲಿರಿಕಂ ವಶ

೨೭ ಆಗಸ್ಟಸ್ ಬಿರುದು. ಪ್ರಾಂತಗಳ ವಿಭಜನೆ. ಪ್ರಿನ್ಸಿಪೇಟ್.

೨೭–೧೯ ಪ್ರಾಂತಾಡಳಿತ ವ್ಯವಸ್ಥೆ

೨೬ ಕಾಂಟಬ್ರೈಯುದ್ಧ

೨೫ ಗಲಾಟಿಯ ಮತ್ತು ಲೈಕೋನಿಯ ಪ್ರಾಂತಗಳು

೨೪ ಅರೇಬಿಯ ದಂಡಯಾತ್ರೆ

೨೩ ಆಜೀವ ಟ್ರೈಬ್ಯುನಿಷಿಯ ಪೊಟೆಸ್ಟಾಸ್ ಮತ್ತು
ಪ್ರೊಕಾನ್ಸುಲರ ಇಂಪೀರಿಯಂ

೨೨–೧೨ ನಗರ ಸುಧಾರಣೆ

೨೧ ಅಗ್ರಿಪ್ಪ ಕ್ಯಾಂಟಬ್ರೈ ಜನರನ್ನು ಗೆದ್ದದ್ದು
ಪಾರ್ಥಿಯದೊಡನೆ ಕರಾರು

೧೯ ವರ್ಜಿಲನ ಮರಣ

ಕ್ರಿ. ಪೂ.—

೧೯–೧೬ ಸಾಮಾಜಿಕ ಸುಧಾರಣೆ

೧೮ ಡ್ರೂಸಸನು ರ್ಹೇಟ್ಯೆ ಸೋಲಿಸಿದ್ದು

೧೬–೧೪ ಗಾಲಿನಲ್ಲಿ ಅಗಸ್ಟಸ್. ಗಾಲ್ ಪ್ರಾಂತ ವಿಭಜನೆ

೧೩–೧೨ ಜರ್ಮನರಮೇಲೆ ಡ್ರೂಸಸ್ಸನ ದಂಡಯಾತ್ರೆ
ಅಗ್ರಿಪ್ಪನ ಮರಣ

೧೧–೧೦ ರ್ಹೈನ್‌ನಿಂದ ಎಲ್ಬ್‌ವರೆಗೆ ಡ್ರೂಸಸ್ಸನ ವಿಜಯ

೯ ಡ್ರೂಸಸ್ಸನ ಮರಣ

೮ ಜರ್ಮನಿಯಲ್ಲಿ ಟೈಬೀರಿಯಸ್
ಮ್ಯೇಕ್ಸಿನಾಸ್ ಮತ್ತು ಹೊರೆಸರ ಮರಣ

೭ ಟೈಬೀರಿಯಸ್ಸಿಗೆ ಟ್ರಿಬ್ಯೂನಿಷಿಯ ಪೊಟೆಸ್ಟಾಸ್

ಕ್ರಿ. ಶ.—

೪ ಟೈಬೀರಿಯಸ್ಸನನ್ನು ಉತ್ತರಾಧಿಕಾರಿಯಾಗಿ ನೇಮಕ


೫–೬ ಜರ್ಮನಿಯಲ್ಲಿ ಟೈಬೀರಿಯಸ್

೭–೮ ಡಾಲ್ಮೇಷಿಯದಲ್ಲಿ ,,
ರ್ಹೈನ್‌ವರೆಗೆ ರೋಮನ್ ಸರಹದ್ದು

೧೦ ಪಾನೋನ್ನಿಯ ಪ್ರಾಂತವಾದದ್ದು

೧೧ ಟೈಬೀರಿಯಸ್ ರ್ಹೈನ್ ಆಚೆ ದಂಡಯಾತ್ರೆ

೧೪ ಆಗಸ್ಟ್ ೧೯, ಅಗಸ್ಟಸ್ಸನ ಮರಣ



ಗಲ್ಲಿಯ
ಏಟ್ರೂರಿಯ
ರೋಮ್
ಕಾಂಪೇನಿಯ
ಲುಕೇನಿಯ
ಕಲಾಬ್ರಿಯ
ಸಿಸಿಲಿ

# ರೋಮ್ ಚಕ್ರಾಧಿಪತ್ಯದ ಚರಿತ್ರೆ

## ಅಧ್ಯಾಯ ೧

ಪಾಶ್ಚಾತ್ಯದೇಶಗಳ ಸಂಸ್ಕೃತಿಗೆ ಗ್ರೀಸ್ ಮತ್ತು ರೋಮ್ ಚರಿತ್ರೆಗಳೇ ಹಿನ್ನೆಲೆಯಾಗಿರುವದರಿಂದ ಆಧುನಿಕ ಯೂರೋಪ್‌ಖಂಡದ ಪ್ರಗತಿಕ್ರಮವನ್ನು ತಿಳಿಯಬೇಕಾದರೆ ಗ್ರೀಕರಿಂದ ಬಂದ ವಿಜ್ಞಾನ, ಕಲಾಕೌಶಲ್ಯ, ತತ್ತ್ವವಿವೇಚನೆ, ಪ್ರಜಾಪ್ರಭುತ್ವಪದ್ಧತಿ, ರೋಮನ್ನರಿಂದ ಪಡೆದ ಸಾಮ್ರಾಜ್ಯಕ್ರಮ, ನ್ಯಾಯರೀತಿ, ಅಂತರರಾಷ್ಟ್ರೀಯ ವ್ಯವಹಾರಪದ್ಧತಿಗಳ ಜ್ಞಾನವು ಅವಶ್ಯಕ. ರೋಮನ್ನರು ಗ್ರೀಕರನ್ನು ಗೆದ್ದರೂ ಗ್ರೀಕ್‌ಸಂಸ್ಕೃತಿಗೆ ಅಧೀನರಾದರು. ಗ್ರೀಕ್‌ಸಂಸ್ಕೃತಿಯನ್ನು ತಾವು ರಕ್ಷಿಸಿಕೊಂಡುಬಂದು ಕ್ರೈಸ್ತಮತವು ಹುಟ್ಟಿ ಬೆಳೆದು ಪ್ರಬಲವಾದಾಗ ಮಧ್ಯಕಾಲೀನ ಯೂರೋಪ್ ಸಂಸ್ಕೃತಿಯಲ್ಲಿ ಗ್ರೀಕರ ಸಂಸ್ಕೃತಿ, ಕ್ರೈಸ್ತಮತತತ್ತ್ವಗಳು ಮತ್ತು ರೋಮನ್ ಸಾಮ್ರಾಜ್ಯಕ್ರಮ ಮಿಳಿತವಾಗುವದಕ್ಕೆ ಸಹಾಯಕರಾದರು. ಮತ್ತು ರೋಮನ್ನರ ವೈಶಿಷ್ಟ್ಯವು ಅವರು ಸ್ಥಾಪಿಸಿದ ಪೌರ ಮತ್ತು ಅಂತರರಾಷ್ಟ್ರೀಯ ನ್ಯಾಯಪದ್ಧತಿಯಲ್ಲಿ ಕಂಡುಬರುವುದು. ಆಧುನಿಕ ಪಾಶ್ಚಾತ್ಯದೇಶಗಳ ನ್ಯಾಯರೀತಿಯು ಪ್ರಜೆಗಳ ಮೂಲಭೂತಹಕ್ಕುಗಳು, ಪೌರಾಧಿಕಾರಗಳೆಲ್ಲ ರೋಮನ್ನರನ್ನು ಅನುಸರಿಸುತ್ತವೆ. ಅಲ್ಲದೆ ರೋಮ್‌ಚರಿತ್ರೆಯಲ್ಲಿ ಪ್ರಜಾಪ್ರಭುತ್ವ ಮತ್ತು ನಿರಂಕುಶಾಧಿಕಾರಗಳು ಹೇಗೆ ಬೆಳೆದು ಕ್ಷೀಣಿಸುವವೆಂದು ತಿಳಿಯಬಹುದು. ತಮ್ಮ ಚರಿತ್ರೆಯ ಆರಂಭದಲ್ಲಿಯೇ ರೋಮನ್ನರು ರಾಜಾಧಿಕಾರವನ್ನು ತೆಗೆದುಹಾಕಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದರು. ಆದರೆ ಪ್ರಜಾಪ್ರಭುತ್ವದಲ್ಲಿ ರಾಜಕೀಯಪಕ್ಷಗಳ ಸ್ಪರ್ಧೆಯು ಹೆಚ್ಚಾಗಿ ಅಂತಃಕಲಹಗಳು ಹುಟ್ಟಿ ಸರ್ವಾಧಿಕಾರಿಗಳು ಪ್ರಜಾಪ್ರಭುತ್ವವನ್ನು ನಾಮಾವಶೇಷವಾಗಿ ಮಾಡಿ ಚಕ್ರಾಧಿಪತ್ಯಗಳನ್ನು ಸ್ಥಾಪಿಸಿದರು.

ರೋಮನ್ ಜನರು ಇಂಗ್ಲೆಂಡ್–ಸ್ಕಾಟ್ಲೆಂಡಿನಿಂದ ಡಾನ್ಯೂಬ್ ಮತ್ತು ಪರ್ಶಿಯಾವರೆಗೂ ವಿಸ್ತರಿಸಿದ್ದ ತಮ್ಮ ಸಾಮ್ರಾಜ್ಯದಲ್ಲಿ "ರೋಮಿನ ಶಾಂತಿ" (Pax Romana) ಸ್ಥಾಪಿಸಿ ವಿವಿಧ ಜನಾಂಗಗಳನ್ನೂ ಮತಗಳನ್ನೂ ಭಾಷೆಗಳನ್ನೂ ಸಂಸ್ಕೃತಿಗಳನ್ನೂ ಏಕೀಕರಣ ಮಾಡಿ ಪಾಶ್ಚಾತ್ಯ ಸಂಸ್ಕೃತಿಯನ್ನು ರಕ್ಷಿಸಿದರು ರೋಮನ್ನರು ತಮ್ಮ ಪ್ರಾಚೀನ ಸಂಪ್ರದಾಯ, ಮತಗಳಲ್ಲಿ ನಂಬಿಕೆಯನ್ನು ಕಳೆದುಕೊಂಡರೂ ಅನಾಗರಿಕ ಜನಾಂಗಗಳನ್ನು ತಮ್ಮ ಸಂಸ್ಕೃತಿ, ನ್ಯಾಯಶಾಸ್ತ್ರಕ್ಕೆ ಅಧೀನಮಾಡಿಕೊಳ್ಳಲು ಕೇವಲ ರಾಜಕೀಯ ದೃಷ್ಟಿಯಿಂದ ತಮ್ಮ ಅಧಿಕಾರವನ್ನು ವಿಸ್ತರಿಸಿದರೂ ಪ್ರಪಂಚ ಸಂಸ್ಕೃತಿಗೆ ಪರೋಕ್ಷವಾಗಿ ಉಪಕಾರಮಾಡಿರುವರು

ರೋಮ್ ಪಟ್ಟಣದ ಉಚ್ಛ್ರಾಯ ಸ್ಥಿತಿಯಲ್ಲಿ ವ್ಯಾಪಾರವು ವಿಶೇಷವಾಗಿ ಬೆಳೆಯಿತು. ಅಗಸ್ಟಸ್, ಹಾಡ್ರಿಯನ್ ಮುಂತಾದ ರೋಮ್ ಚಕ್ರವರ್ತಿಗಳ ನಾಣ್ಯಗಳು ದಕ್ಷಿಣ ಇಂಡಿಯಾ ಅದೂ ಕರ್ಣಾಟಕದಲ್ಲಿ ವಿಶೇಷವಾಗಿ ಸಿಕ್ಕಿವೆ. ದಕ್ಷಿಣ ಪಥದ ಮತ್ತು ಕರ್ಣಾಟಕದ ಪಡುವಣ ಕರೆಯ ರೇವುಪಟ್ಟಣಗಳಿಂದ ರೋಮನ್ನರಿಗೆ ಮೆಣಸು, ಅಕ್ಕಿ, ಚಿನ್ನ ಮತ್ತು ಇತರ ಲೋಹವಸ್ತುಗಳು, ರೇಷ್ಮೆ ಮತ್ತು ಹತ್ತಿಯ ವಸ್ತ್ರಗಳು, ಶ್ರೀಗಂಧ, ನವಿಲು, ಕಪಿಗಳು ಇತ್ಯಾದಿ ಪದಾರ್ಥಗಳು ಕಳುಹಿಸಲ್ಪಡುತ್ತಿದ್ದವು. ರೋಮನ್ನರ ನೌಕೆಗಳು ಈ ರೇವುಪಟ್ಟಣಗಳಲ್ಲಿ ತಂಗುತ್ತಿದ್ದವು. ಈ ವ್ಯಾಪಾರದಿಂದ ವರ್ಷಕ್ಕೆ ೨೦೦೦೦೦ "ಸೆಸ್ಟೆರಿಸಸ್" ನಷ್ಟವಾಗುತ್ತಿದ್ದಿತೆಂದು ರೋಮನ್ ಹೆಂಗಸರ ಲಾಲಸೆಗಾಗಿ ರೋಮನ್ನರು ತೆರುತ್ತಿರುವ ದಂಡವೆಂದು ಪ್ಲಿನಿ ಹೇಳುವನು. ರೋಮನ್ನರ ನಾಣ್ಯದಲ್ಲಿ "ಡಿನೇರಿಯಸ್" ಭರತಖಂಡದಲ್ಲಿ ಪ್ರಚಾರವಾಗಿ "ದೀನಾರ" ಎಂದು ಸಂಸ್ಕೃತ ಸಾಹಿತ್ಯದಲ್ಲಿ ವ್ಯವಹರಿಸಲ್ಪಟ್ಟಿದೆ.

ರೋಮನ್ನರು ಕೈಗಾರಿಕೆ ಮರಾಮತ್ತು ಕೆಲಸಗಳಲ್ಲಿ ವಿಶೇಷ ಪ್ರತಿಭೆ ತೋರಿಸಿದರು. ಇಟಲಿಯಲ್ಲೇ ಅಲ್ಲದೆ ಸಾಮ್ರಾಜ್ಯವು ವಿಸ್ತರಿಸಿದಂತೆಲ್ಲ

ಸಿಪಾಯಿಗಳ ಸೌಕರ್ಯಕ್ಕಾಗಿ ಪ್ರಶಸ್ತವಾದ ನೂರಾರು ಮೈಲಿ ನೇರವಾದ ರಸ್ತೆಗಳು ನಿರ್ಮಿತವಾದವು. ಈ ರಾಜಮಾರ್ಗಗಳನ್ನನುಸರಿಸಿ ಹೊಸಪಟ್ಟಣಗಳು, ರೇವುಗಳು, ಕೋಟೆಗಳು, ವ್ಯಾಪಾರ ಸ್ಥಳಗಳು ಹುಟ್ಟಿ ಯೂರೋಪಿನ ಚರಿತ್ರೆಯಲ್ಲಿ ಪ್ರಸಿದ್ಧವಾದವು. ಲಂಡನ್ ಕೂಡ ಇಂತಹುದೊಂದು. ಅಲ್ಲದೆ ದೊಡ್ಡ ಪಟ್ಟಣಗಳಿಗೆ ನೀರನ್ನು ಸರಬರಾಜು ಮಾಡುವದಕ್ಕಾಗಿ ಆಫ್ರಿಕ ಮರುಭೂಮಿಗಳಲ್ಲೂ ಕೂಡ ಮೈಲಿಗಳ ಉದ್ದ ಭೂಮಟ್ಟಕ್ಕೆ ೨೦-೩೦ ಅಡಿ ಮೇಲೆ ಕಲ್ಲಿನಿಂದ ಭದ್ರವಾದ ನೀರ್ಗಾಲುವೆ(acqueducts) ಕಟ್ಟಿಸಿರುವರು ರೋಮನ್ನರ ಆಹಾರ ಉಡುಪು ಭಾಷೆಗಳು ಯೂರೋಪ್ ಖಂಡವನ್ನು ಮಾರ್ಪಡಿಸಿವೆ ಲ್ಯಾಟಿನ್ ಭಾಷೆಯು ರಾಜಕೀಯ ಭಾಷೆಯಾಗಿದ್ದುದರಿಂದ ಅದು ಅಂತರರಾಷ್ಟ್ರೀಯ ಭಾಷೆಯಾಯಿತು. ಕ್ರೈಸ್ತ ಮತದಲ್ಲಿಯೂ ಕೂಡ ಲ್ಯಾಟಿನ್ ಮುಖ್ಯ ಪವಿತ್ರಭಾಷೆಯೆನಿಸಿತು. ಲ್ಯಾಟಿನ್ ಗ್ರಂಥಗಳ ಅನುಕರಣೆ ಅನುವಾದಗಳೇ ಸಾಹಿತ್ಯದ ಚಿಹ್ನೆಯಾಯಿತು ಲ್ಯಾಟಿನ್ ಭಾಷೆ ಹರಡಿದಂತೆ ದಕ್ಷಿಣ ಯೂರೋಪಿನ ಪ್ರಾಂತೀಯ ಭಾಷೆಗಳು ಬೆಳದವು.

ರೋಮನ್ನರ ಚರಿತ್ರೆಯಲ್ಲಿ ಕೆಲವರು ಮಹಾ ವ್ಯಕ್ತಿಗಳು ಕಂಡು ಬರುವರು. ಪ್ರಜಾಪ್ರಭುತ್ವಕ್ಕಾಗಿ ಹೋರಾಡಿದ ಗ್ರಾಕ್ಕೈ, ಅದ್ವಿತೀಯ ಸೇನಾಪತಿಗಳಾದ ಹಾನಿಬಾಲ್, ಜೂಲಿಯಸ್ ಸೀಸರ್, ಸಾಮ್ರಾಜ್ಯ ಧುರಂಧರನಾದ ಅಗಸ್ಟಸ್ ಮುಂತಾದವರು ಯಾವ ದೇಶಕ್ಕಾದರೂ ಕೀರ್ತಿತರುವಂತಹವರು.

## ಆಧಾರಗಳು

ರೋಮ್ ಚರಿತ್ರೆಗೆ ಪ್ರಾಚೀನಾಧಾರಗಳು ಎಟ್ರುಸ್ಕನ್ ಮತ್ತು ರೋಮನ್ ಶಾಸನಗಳು ಮತ್ತು ನಾಣ್ಯಗಳು. ಭಾಷಾಶಾಸ್ತ್ರದಿಂದಲೂ ಕೆಲವು ಅಂಶಗಳನ್ನು ಊಹಿಸಬಹುದು ಸಿಕೆಲ್ಸ್ ಎಂಬ ಅನಾಗರಿಕರು ಬಹುಶಃ ಟೈಬರ್‌ದಡದಲ್ಲಿದ್ದರು. ಅವರನ್ನು ಅಪೆನ್ನೈನ್ಸ್ ಪರ್ವತಗಳಿಂದ

ಮತ್ತೊಂದು ಜನಾಂಗವು ಓಡಿಸಿ ಆ ಭಾಗವನ್ನು ಆಕ್ರಮಿಸಿದರು. ಅನಂತರ ಥೆಸಲಿಯಿಂದ ಬಂದ ಪೆಲಾಸ್ಜೈ ಮತ್ತು ಗ್ರೀಕರು ವಲಸೆ ಬಂದರು. ಟ್ರೋಜನ್ ಯುದ್ಧವಾದ ಮೇಲೆ ಲಾಟಿನಸ್ ಎಂಬ ರಾಜನು ಆಳುತ್ತಿದ್ದಾಗ ಈನಿಯಸ್ ಎಂಬುವನು ಟ್ರಾಯ್ ಪಟ್ಟಣದಿಂದ ಓಡಿ ಬಂದು ನೆಲಸಿದನೆಂದು, ಲಾಟಿನಸ್ ರಾಜನು ಸತ್ತಮೇಲೆ ಈನಿಯಸ್ಸಿನ ಮಗ ಆಸ್ಕಿನಸ್ ರಾಜನಾಗಿ ಆಲ್ಬನ್‌ವಂಶವನ್ನು ಸ್ಥಾಪಿಸಿದನೆಂದು ಹೇಳಲಾಗಿದೆ. ಲಾಟಿನಸ್ ರಾಜನಿಂದ ಲ್ಯಾಟಿನ್ ಜನವೆಂಬ ಹೆಸರು ಬಂದಿತೆಂದು ಐತಿಹ್ಯವಿದೆ. ಈ ಆಲ್ಬನ್ ವಂಶದ ಕೊನೆಯರಾಜ ನ್ಯುಮಿಟಾರ್ ಎಂಬುವನ ಮಗಳೇ ರೋಮ್ ಪಟ್ಟಣವನ್ನು ಸ್ಥಾಪಿಸಿದ ರೋಮ್ಯುಲಸ್ ಮತ್ತು ರೀಮಸ್ ಎಂಬ ಸಹೋದರರ ತಾಯಿ. ತನ್ನ ಮಕ್ಕಳನ್ನು ಗುಡ್ಡದ ಮೇಲೆ ಬಿಸಾಡಿರಲು ಒಂದು ಹೆಣ್ಣುತೋಳ ಆ ಮಕ್ಕಳನ್ನು ಪೋಷಿಸಿತು ಅವರು ಬೆಳೆದು ಪಾಲಟೈನ್ ಸಪ್ತಪರ್ವತಗಳ ಮೇಲೆ ಸಪ್ತ ಕೋಟೆಗಳುಳ್ಳ ರೋಮ್ ನಗರವನ್ನು ಸ್ಥಾಪಿಸಿದರು. ಈ ಪೌರಾಣಿಕ ಕಥೆಗೆ ಪ್ರಾಚೀನಾಧಾರಗಳಿಲ್ಲ. ಕ್ರಿ ಪೂ ೧ನೆಯ ಶತಾಬ್ದದ ಗ್ರೀಕ್ ಚರಿತ್ರಕಾರರು ರೋಮನ್ನರು ತಮ್ಮವರೆಂದು ತೋರಿಸಲು ಇಟಲಿಯ ಸ್ವದೇಶೀಯ ಕಥೆಗಳನ್ನು ಮಾರ್ಪಡಿಸಿದರು. ದಿಯೋನಿಸಿಯಸ್ ಹಾಲಿಕರ್ನಾಸಸ್ ಮತ್ತು ಲಿವಿ ಎಂಬ ಚರಿತ್ರಕಾರರು ಇದಕ್ಕೆ ಮುಖ್ಯಕಾರಣ. ಆದರೂ ಕ್ರಿ. ಪೂ. ೪೦೦ ಕ್ಕೆ ಮುಂಚೆ ರಾಜತ್ವವಿದ್ದಿತೆಂಬುದು ಚರಿತ್ರಾರ್ಹವಾಗಿದೆ. ಕಾಲಗಣನೆಯು ಹಿರಿಯ ಕ್ಯಾಟೋ ಮತ್ತು ವ್ಯಾರ್ರೊ ಎಂಬವರಿಂದ ನಿರ್ಧರಿಸಲ್ಪಟ್ಟಿತು. ಆದರೂ ಪ್ರಾಚೀನ ಚರಿತ್ರೆಗಳಲ್ಲಿ ಗ್ರೀಕರ ಕೈವಾಡವು ವಿಶೇಷವಾಗಿ ಕಂಡು ಬರುವದು. ಇಟಲಿಯ ಪುರಾತನ ಜನರು ಪೆಲಾಸ್ಜಿಗಳೆಂದೂ, ಪಾಲಿಟೈನ್ ಗುಡ್ಡವು ಆರ್ಕೇಡಿಯದಲ್ಲಿರುವ ಪಲ್ಲಾಂಟಿಯಂ ಸಂಬಂಧ ಹೊಂದಿದೆಯೆಂದೂ, ಹರ್ಕ್ಯುಲೀಸನು ಇಟಲಿಗೆ ಹೋಗಿದ್ದನೆಂದೂ, ನ್ಯೂಮರಾಜನು ಪೈಥಾಗೊರಾಸಿನ ಶಿಷ್ಯನೆಂದೂ, ಟಾರ್ಕ್ವಿನ್ ರಾಜರು

ಕಾರಿಂಥ್ ದೇಶದಿಂದ ಬಂದರೆಂದೂ, ರೋಮ್ಯುಲಸ್ಸನು ದೇವತಾಂಶ ದವನೆಂದೂ ಕಲ್ಪಿಸಿರುವರು.

## ಇಟಲಿ ಮೇಲ್ಮೈ ಲಕ್ಷಣ


ಇಟಲಿಯು ಮಧ್ಯಧರಾ ಸಮುದ್ರದೊಳಕ್ಕೆ ಆಲ್ಪ್ಸ್ ಪ್ರಾಂತ ದಿಂದ ವ್ಯಾಪಿಸಿದ ಯೂರೋಪ್ ಖಂಡದ ಭೂಮುಖವಾಗಿದೆ. ಇದು ಮನುಷ್ಯನ ಕಾಲಿನಂತೆ ಆಕೃತಿ ಹೊಂದಿ ಕಾಲುಬೆರಳ ಮುಂಭಾಗದಲ್ಲಿ ಸಿಸಿಲಿದ್ವೀಪವಿದೆ. ದೇಶದ ಮಧ್ಯಭಾಗದಲ್ಲಿ ಕಾಲಿನ ಮೂಳೆಯಂತೆ ಅಪೆನ್ನೈನ್ ಪರ್ವತಶ್ರೇಣಿಯಿರುವುದು. ಸ್ಥೂಲವಾಗಿ ಮೂರು ಭಾಗ ಗಳಿವೆ ಉತ್ತರದಲ್ಲಿ ಆಲ್ಪ್ಸ್ ಪರ್ವತಶ್ರೇಣಿಯ ತಪ್ಪಲು, ಪೋ ನದಿಯ ಬಯಲು ಅಥವಾ ಲಾಂಬಾರ್ಡಿ ಬಯಲ್ನಾಡು ಮತ್ತು ದಕ್ಷಿಣ ಇಟಲಿ. ಉತ್ತರದಲ್ಲಿ ಲಾಂಬಾರ್ಡಿ ಬಯಲ್ನಾಡು ಆಪೆನ್ನೈನ್ ಪರ್ವತ ಗಳಿರುವದರಿಂದ ಶೀತ ವಾತಾವರಣ ಹೊಂದಿದೆ. ದಕ್ಷಿಣದಲ್ಲಿ ಉಷ್ಣ ವಲಯದ ವಾತಾವರಣವಿದೆ ಆಲ್ಪ್ಸ್ ಪರ್ವತದ ಕಣಿವೆಗಳು ಬಹುಶಃ ಉತ್ತರದಿಂದ ದಕ್ಷಿಣಕ್ಕೆ ಹರಡಿವೆ ಮತ್ತು ನದಿಗಳು ವೇಗವಾಗಿ ಪ್ರವಹಿಸುತ್ತವೆ. ಪೋನದಿಯ ಬಯಲು ಬಹಳ ಫಲವತ್ತಾಗಿದೆ. ದಕ್ಷಿಣ ಇಟಲಿಯಲ್ಲಿ ಪರ್ವತಗಳು ಹೆಚ್ಚಾಗಿವೆ. ಮುಖ್ಯ ಪಟ್ಟಣವಾದ ರೋಮ್‌ನಗರವು ಟೈಬರ್‌ನದಿ ದಡದಲ್ಲಿ ಪಶ್ಚಿಮತೀರಕ್ಕೆ ಸಮೀಪವಾ ಗಿದೆ. ಪಶ್ಚಿಮತೀರದಲ್ಲಿ ಫಲವತ್ತಾದ ಬಯಲುಭೂಮಿಯು ಉತ್ತರ ದಲ್ಲಿರುವ ಎಟ್ರೂರಿಯ ಗುಡ್ಡಗಳವರೆಗೂ ವ್ಯಾಪಿಸಿದೆ. ಇದಕ್ಕೆ ಪೂರ್ವ ದಲ್ಲಿ ಆಪೆನ್ನೈನ್ಸ್ ಶ್ರೇಣಿ, ದಕ್ಷಿಣದಲ್ಲಿ ವಾಲ್ಷಿಯನ್ ಪ್ರಸ್ಥಭೂಮಿಗಳು ಇವೆ. ಈ ಬಯಲ್ನಾಡಿನಲ್ಲಿ ಮುಖ್ಯವಾದ ನದಿ ಟೈಬರ್ ಮತ್ತು ಅದರ ಉಪನದಿ ಆನಿಯೋ. ಟೈಬರ್ ನದಿಯ ಮುಖದಲ್ಲಿ ರೋಮ್ ಪಟ್ಟ ಣವು ನಿರ್ಮಿತವಾಯಿತು. ಟೈಬರ್‌ನದಿಯೇ ಉತ್ತರದ ಅಂಬ್ರಿಯನ್ ಮತ್ತು ಸಾಬೈನ್ ಪ್ರಸ್ಥಭೂಮಿಗಳನ್ನು ದಕ್ಷಿಣದ ತಗ್ಗು ದೇಶಗಳನ್ನು ಸಂಬಂಧಿಸುವುದರಿಂದ ರೋಮ್ ಸುತ್ತಮುತ್ತ ತಗ್ಗು ದೇಶವನ್ನೆಲ್ಲ

ಮೊದಲು ಆಕ್ರಮಿಸಿ ಅನಂತರ ಉತ್ತರದ ಏಟ್ರಿಸ್ಕನ್ ಜನರನ್ನೆದುರಿಸಲು ಸಾಧ್ಯವಾಯಿತು.

ಭಿನ್ನ ಭಿನ್ನ ಜನಾಂಗಗಳ ಗ್ರಾಮಗಳನ್ನು ಒಟ್ಟುಗೂಡಿಸಿ ರೋಮ್ ನಗರವು ಸ್ಥಾಪಿತವಾಯಿತೆಂಬ ಐತಿಹ್ಯಕ್ಕೆ ಪುರಾತತ್ತ್ವ ಶೋಧನೆಯ ಆಧಾರಗಳು ಇವೆ. ರೋಮನ್ ಚರಿತ್ರೆಯೆಲ್ಲ ಲ್ಯಾಟಿಯಂ ಪ್ರಾಂತದಲ್ಲಿದ್ದ ಒಂದು ನಗರದ ಚರಿತ್ರೆ ಎಂದು ಹೇಳಬಹುದು. ಇಟಾಲಿಯ ಎಂಬ ಹೆಸರು ಮೊದಲು ರೂಬಿಕನ್ ನದಿ ದಕ್ಷಿಣಭಾಗಕ್ಕೆ ಮಾತ್ರ ಅನ್ವಯಿಸುತ್ತಿತ್ತು. ಉತ್ತರಭಾಗಕ್ಕೆ ಸ್ವಿಸ್-ಆಲ್ಪೈನ್ ಗಾಲ್ ಎಂದೂ ಸಮುದ್ರತೀರ ಪ್ರದೇಶಕ್ಕೆ ಲೈಗೂರಿಯ ಎಂದೂ ಹೆಸರಿದ್ದಿತು

"ರೋಮ್" ಎಂಬ ಹೆಸರು ರೋಮ್ಯುಲಸ್ ಎಂಬವನಿಂದ ಬಂದಿತೆಂದು ರೋಮನ್ನರು ನಂಬಿದ್ದರು ಆದರೆ ಗ್ರೀಕ್ ಪದ "ರ್‍ಹೊಮೆ" = ಬಲ ಅಥವಾ ಇಟಾಲಿಕ್ "ರುಮೊನ್" = ನದಿ ಎಂಬುದರಿಂದಲೇ ಉತ್ಪನ್ನವಾಗಿರಬಹುದು. ಈ ಪ್ರಾಚೀನ ಪಟ್ಟಣದ ಸರಹದ್ದುಗಳನ್ನು ಈಗಲೂ ಗುರ್ತಿಸಬಹುದು. ಪ್ಯಾಲಟೈನ್ ಗುಡ್ಡದ ಮೇಲ್ಭಾಗದಲ್ಲಿ ಇತರ ಗುಡ್ಡಗಳ ಮೇಲೂ ಹಳೆಯ ಗೋಡೆಗಳು ಕಂಡುಬರುವದರಿಂದ ಮೊದಲು ರೋಮ್ಯುಲಸ್ಸಿನಿಂದ ಸ್ಥಾಪಿತವಾದ ನಗರವು ಪ್ಯಾಲಟೈನ್ ಗುಡ್ಡದ ಮೇಲೆ ಚತುರಸ್ರಾಕಾರವಾಗಿದ್ದಿತು. ಆದುದರಿಂದ ರೋಮಕ್ವಾಡ್ರಾಟ ಎಂಬ ಹೆಸರು ಬಂದಿತು. ಇದರ ಮಧ್ಯದಲ್ಲಿ ಮುಂಡಸ್ ಎಂಬ ವೇದಿಯೂ, ಅಗ್ನಿಹೋತ್ರಸ್ಥಾನವು (Focus) ಇದ್ದವು. ಐತಿಹ್ಯದ ಪ್ರಕಾರ ನಗರ ಸ್ಥಾಪನೆಯು ಏಪ್ರಿಲ್ ೨೧ ನೇ ತಾರೀಖು ಕ್ರಿ. ಪೂ. ೭೫೩ ರಲ್ಲಿ ನಡೆಯಿತು.

ಇತರ ನಗರಗಳೊಡನೆ ಮಿಳಿತವನ್ನು ಗುರ್ತಿಸಲು ಸಪ್ತಪರ್ವತ ಹಬ್ಬ (Septimontium) ಏರ್ಪಾಟಾಯಿತು ಅನಂತರ ನಗರದ ಪೂರ್ಣರೂಪವು ಸರ್ವಿಯಸ್ ರಾಜನ ಕೋಟೆಯಿಂದುಂಟಾಯಿತು. ಗುಡ್ಡಗಳ ಮೇಲಿನ ಅತ್ಯಂತ ಪ್ರಾಚೀನ ಸಮಾಧಿಗಳು ಕ್ರಿ. ಪೂ.


ರೋಮ್ ನಗರ
ಫೋರಂ
ಓಪ್ಪಿಯಸ್
ಕೈಲಿಯಸ್

೮ ನೆಯ ಶತಾಬ್ದಕ್ಕೂ, ಸರ್ವಿಯಸ್ಸಿನ ಗೋಡೆಯು ಕ್ರಿ. ಪೂ ೭ ನೆಯ ಶತಾಬ್ದಕ್ಕೂ ಸೇರಿವೆ ಇದೇ ಕಾಲದಲ್ಲಿ ಗ್ರೀಕ್ ವ್ಯಾಪಾರಿಗಳು ಇಟಲಿಯಲ್ಲಿ ಪಟ್ಟಣಗಳನ್ನು ಕಟ್ಟಿಕೊಳ್ಳುತ್ತಿದ್ದರು. ಹೀಗೆ ಏಳು ಗ್ರಾಮಗಳೂ ಒಟ್ಟಾದರೂ ಜನಾಂಗಗಳ ಮೇಳನೆಯು ಪೂರ್ಣವಾಗಿ ಆಗಲಿಲ್ಲ. ರೋಮನ್ನರು ಬಯಲುದೇಶದಲ್ಲಿದ ಅಂಬ್ರಿಯನ್ನರಂತೆ ಲಾ ಟಿ ನ್ ಜಾತಿಗೆ ಸೇರಿದವರು. ಇವರ ಸುತ್ತಲು ಈಕ್ವೈ ವಾಲ್ಸೈ ಎಂಬವರೂ ಉತ್ತರದಲ್ಲಿ ಎಟ್ರಿಸ್ಕನ್, ಅಂಬ್ರಿಯನ್, ಮತ್ತು ಎಟ್ರಿಸ್ಕನ್, ಸಾಬೈನ್ ಸಾಮ್ನೈಟ್ ಎಂಬವರನ್ನೊಳಗೊಂಡ ಸಾಬೆಲ್ಲಿಯನ್ನರೂ ಇದ್ದರು.

ಲ್ಯಾಟಿನ್ನೈ ಜನಾಂಗದ ಹೆಸರು ಲ್ಯಾಟಿನಸ್ ರಾಜನಿಂದ ಬಂದಿತೆಂದು ಐತಿಹ್ಯವಿದ್ದರೂ ಇವರು ಮೂಲ ಆರ್ಯಜಾತಿಗೆ ಸೇರಿದವರಾಗಿದ್ದು ಇಟಲಿಯನ್ನು ಪ್ರವೇಶಿಸಿ ಅಲ್ಲಿದ್ದವರನ್ನು ಓಡಿಸಿ ಸಮುದ್ರತೀರದ ಪ್ರಾಂತವನ್ನು ಆಕ್ರಮಿಸಿ ಆ ಸ್ಥಳದಿಂದ ನಾಮಧೇಯವನ್ನು ಪಡೆದರು. ಇವರು ಅಲ್ಲಲ್ಲಿ ಗ್ರಾಮಗಳನ್ನು ಸ್ಥಾಪಿಸಿ ಅವುಗಳ ರಕ್ಷಣೆಗಾಗಿ ಮರದ ಬೇಲಿಗಳನ್ನು ನಿರ್ಮಿಸಿ ಎಟ್ರಿಸ್ಕನ್ ಮತ್ತು ಸಾಬೈನರೊಡನೆ ಯುದ್ಧ ಮಾಡುತ್ತಿದ್ದರು ಪ್ರತಿಯೊಂದು ಗ್ರಾಮದಲ್ಲಿ ಒಬ್ಬ ಮುಖಂಡನು ಸಮಿತಿಯ ಸಲಹೆಯಂತೆ ಅಧಿಕಾರವನ್ನು ನಡೆಸುತ್ತಿದ್ದನು. ಹಾಗೆಯೇ ಪವಿತ್ರವಾದ ಆಲ್ಬನ್ ಗುಡ್ಡದಮೇಲೆ ಸ್ಥಾಪಿತವಾದ ಗ್ರಾಮಕ್ಕೆ ಪುರಾತನ ಲ್ಯಾಟಿಯಂ (ವೀಟಸ್ ಲ್ಯಾಟಿಯಂ) ಎಂದು ಹೆಸರಾಯಿತು. ರೋಮನ್ನರು ಲ್ಯಾಟಿನ್ ಜನಾಂಗದವರೆಂಬುದಕ್ಕೆ ಅನೇಕ ನಿದರ್ಶನಗಳಿವೆ. ಲ್ಯಾಟಿನ್ ಭಾಷೆ, ರಾಜರ ಹೆಸರು, ಜನಾಂಗಗಳ ಹೆಸರುಗಳು ಭಾಷಾದೃಷ್ಟಿಯಿಂದ ನಿದರ್ಶನಗಳು. ಮತದಲ್ಲಿಯೂ ಕೂಡ ಸಾಟರ್ನ್, ಜಾನಸ್, ಜುಪಿಟರ್, ಜೂನೊ, ಡಿಯಾನ ಇತ್ಯಾದಿ ದೇವತೆಗಳ ಪೂಜೆ ಮತ್ತು ಸಂಸ್ಥೆಗಳಲ್ಲಿ ರಾಜ (ರೆಕ್ಸ್), ಪ್ರೇಟಾರ್ ಸರ್ವಾಧಿಕಾರಿ (ಡಿಕ್ಟೇಟರ್), ಕ್ಯೂರಿಯ ಇತ್ಯಾದಿ ನಿದರ್ಶನಗಳಿವೆ. ಇವರಲ್ಲಿ ಬಹುಶಃ ಮೂಲನಿವಾಸಿಗಳು ಟ್ರೋಜನ್ನರು ಸೇರಿದ್ದರು. ಎಟ್ರಿಸ್ಕನ್ನರು ಹಿಂದೆ ರೋಮನ್ನು ಆಳುತ್ತಿದ್ದರೂ ರೋಮನ್ ಜನರಲ್ಲಿ

ಅವರ ಸಂಬಂಧವು ಕಂಡುಬರುವದಿಲ್ಲ. ಸಾಬೈನರೂಕೂಡ ರೋಮನ್ನು ಆಕ್ರಮಿಸಿ ಕ್ವಿರಿನಲ್ ಗುಡ್ಡದಮೇಲೆ ಇದ್ದರೆಂದು ಅನಂತರ ಪ್ಯಾಲಟೈನ್ ಗುಡ್ಡದವರೊಡನೆ ಮಿಳಿತರಾದರೆಂದು ಊಹಿಸಲಾಗಿದೆ.

---

# ಅಧ್ಯಾಯ ೨

## ರೋಮಿನಲ್ಲಿ ರಾಜರ ಆಳಿಕೆ

(ಕ್ರಿ ಪೂ. ೭೫೩-೫೦೯) ಪುರಾತನ ಚರಿತ್ರೆಗಳಪ್ರಕಾರ ರೋಮ್ಯುಲಸ್ ಕ್ರಿ.ಪೂ. ೭೫೩ ರಿಂದ ೭೧೬ ರ ವರೆಗೆ ಆಳಿದನು. ಇವನು ಏಳು ಗ್ರಾಮಗಳನ್ನು ಒಟ್ಟುಗೂಡಿಸಿ ಸಪ್ತಪರ್ವತ ಹಬ್ಬವನ್ನು ಸ್ಥಾಪಿಸಿದನು. ಮತ್ತು ಸಾಬೈನರೊಡನೆ ಮೈತ್ರಿ ಬೆಳಸಿದನು. ಅನಂತರ ನ್ಯೂಮ ಪಾಂಪಿಲಿಯಸ್ (ಕ್ರಿ.ಪೂ. ೭೧೬–೬೭೨) ಮತಸುಧಾರಣೆ ಮಾಡಿ ಹೊಸ ಪದ್ಧತಿಗಳನ್ನು ಆಚರಣೆಗೆ ತಂದನು. ಇವನ ಆಡಳಿತದಲ್ಲಿ ಶಾಂತಿ ಇದ್ದಿತು. ಮೂರನೆಯ ರಾಜನು ಟಲ್ಲಿಯಸ್ ಹಾಸ್ಟಿಲಿಯಸ್ ಆಲ್ಬ ಲಾಂಗವನ್ನು, ಸಾಬೈನರನ್ನು ಗೆದ್ದು ರೋಮ್ ವಿಸ್ತರಣೆ ಮಾಡಿದನು. ಆಂಕಸ್ ಮಾರ್ಸಿಯಸ್ ಹೆಚ್ಚು ಗ್ರಾಮಗಳನ್ನು ವಶಮಾಡಿಕೊಂಡು ಆಸ್ಟಿಯ ರೇವು ಪಟ್ಟಣವನ್ನು ಸ್ಥಾಪಿಸಿದನು. ಮತ್ತು ಆವೆಂಟೈನ್ ಗುಡ್ಡದಲ್ಲಿ ಪ್ಲೆಬ್ಸ್ ನೆಲಸುವಂತೆ ಮಾಡಿ ಪಾನ್ಸ್ ಪಬ್ಲಿಕಸ್ ಎಂಬ ಸೇತುವೆ ಕಟ್ಟಿಸಿದನು ಈ ನಾಲ್ಕು ದೊರೆಗಳು ರೋಮಿನ ಹನ್ನೆರಡು ಮೈಲಿ ಒಳಗೆ ಸಾಬೈನರೊಡನೆ ಯುದ್ಧಮಾಡುತ್ತಿದ್ದರು. ಸಾಬೈನರು ಎಟ್ರಸ್ಕನ್ನರು ಟೈಬರ್ ಮುಖ ಸಮುದ್ರತೀರ ಭಾಗಗಳನ್ನು ಬಿಟ್ಟು ಮಿಕ್ಕಭಾಗವನ್ನೆಲ್ಲ ಆಕ್ರಮಿಸಿದ್ದರು. ಆದುದರಿಂದ ರೋಮನ್ನರು ಜಾನಿಕ್ಯುಲಂ ಎಂಬ ಕೋಟೆಯನ್ನು ಕಟ್ಟಿ ಆಸ್ಟಿಯ ರೇವುಪಟ್ಟಣವನ್ನು ನಿರ್ಮಿಸಿ ಇತರ ಲ್ಯಾಟಿನ್ ಜನಗಳೊಡನೆ ಮಿಳಿತವಾಗಬೇಕಾಯಿತು.

ಐದನೆಯ ರಾಜನಾದ ಹಿರಿಯ ಟಾರ್ಕ್ವಿನಸಿಯಸ್ ಮತ್ತು ಅವನ ನಂತರ ಇಬ್ಬರು ರಾಜರು ಚಾರಿತ್ರಿಕ ಪುರುಷರೆನ್ನಬಹುದು. ಇವರು ವಿಂಗಡವಾಗಿದ್ದ ಗ್ರಾಮಗಳನ್ನೆಲ್ಲ ಕೂಡಿಸಿ ದೊಡ್ಡ ಕೋಟೆಯನ್ನು ನಿರ್ಮಿಸಿದರು. ಜೌಗು ನೆಲವನ್ನು ಉತ್ತಮಪಡಿಸಿ ದೇವಸ್ಥಾನ, ಸಭಾ ಮಂಡಪ (Forum), ಸರ್ಕಸ್ ಮಾಕ್ಸಿಮಸ್ ಇತ್ಯಾದಿ ಕಟ್ಟಡಗಳನ್ನು ನಿರ್ಮಿಸಿದರು. ರೋಮ್ ನಗರವು ಎಟ್ರೂರಿಯಾ ಮತ್ತು ಲಾಟಿಯಂ ವರೆಗೆ ವಿಸ್ತರಿಸಲ್ಪಟ್ಟಿತು. ನಗರವನ್ನು ನಾಲ್ಕು ಭಾಗಮಾಡಿ ಹೊಸ ಸೇನಾ ವ್ಯವಸ್ಥೆಯನ್ನು ಮಾಡಿದರು. ಸೆನೇಟಿನಲ್ಲಿ ಪಿತೃಗಳೆಂಬ (ಪೇಟ್ರಸ್ ಮೈನೋರಂ ಜೆಂಟಿಯಂ) ೨೦೦ ಹೊಸ ಮೆಂಬರುಗಳು ಸೇರಿಸಲ್ಪಟ್ಟರು.

ಈ ಅರಸರು ಎಟ್ರುಸ್ಕನ್ ಜನಾಂಗದವರಾಗಿರಬೇಕು ಈ ಜನರನ್ನು ಗ್ರೀಕರು ಟೈರ್ಹೇನಿಯನ್ನರೆಂದು ಕರೆಯುತ್ತಿದ್ದುದರಿಂದ ಬಹುಶಃ ಏಷ್ಯಾಖಂಡದಿಂದ ಸಮುದ್ರ ಮಾರ್ಗವಾಗಿ ಬಂದು ಇಟಲಿಯನ್ನಾಕ್ರಮಿಸಿ ಅಲ್ಲಿದ್ದ ಅಂಬ್ರಿಯನ್ನರನ್ನು ಗೆದ್ದು ರಾಜ್ಯವನ್ನು ಸ್ಥಾಪಿಸಿದರು ನೌಕಾಬಲದಿಂದ ಮಧ್ಯಧರಾಸಮುದ್ರವನ್ನೆಲ್ಲಾ ಆಕ್ರಮಿಸಿ ವ್ಯಾಪಾರವನ್ನು ನಡಿಸುತ್ತಲೂ ನೆಲವನ್ನು ಗೆದ್ದು ರಾಜ್ಯಗಳನ್ನು ಸ್ಥಾಪಿಸುತ್ತಲೂ ಇದ್ದರು. ಇವರ ಶಾಸನಗಳೂ, ಸಮಾಧಿಗಳೂ, ದೇವಾಲಯಗಳೂ ಸಿಕ್ಕಿದ್ದರೂ ಇವರ ಭಾಷೆ ಮತ್ತು ಲಿಪಿಗಳನ್ನು ತಿಳಿಯಲು ಕಷ್ಟವಾಗಿದೆ. ಇವರ ಸಂಸ್ಕೃತಿಯು ಕಾಂಸ್ಯಯುಗಕ್ಕೆ ಸೇರಿದೆ. ಕ್ರಿ.ಪೂ. ೬೫೦ ರಲ್ಲಿ ಇವರ ಪ್ರಾಬಲ್ಯವು ಅಧಿಕವಾಗಿದ್ದಿತು ರೋಮಿನಲ್ಲೂ ಅನೇಕ ಕುರುಹುಗಳಿವೆ. ಎಟ್ರುಸ್ಕನ್ ಭಾಷೆಯಲ್ಲಿ ತಾರ್ಖೋನ್ ಎಂದರೆ ಒಡೆಯ-ಸ್ವಾಮಿ ಎಂಬುದರಿಂದ ಟಾರ್ಕ್ವಿನ್ ರಾಜರೆಂದು ಹೆಸರು ಬಂದಿರಬಹುದು ಈ ರಾಜರು ದಕ್ಷಿಣ ಎಟ್ರೂರಿಯದಿಂದ ಜಯಿಸುತ್ತ ಬಂದರು. ಎಟ್ರೂರಿಯ ಪ್ರಾಂತವನ್ನು ಅತ್ಯುನ್ನತಸ್ಥಿತಿಗೆ ತಂದರು ರೋಮಿನಲ್ಲೂ ಅನೇಕ ಸುಧಾರಣೆಗಳಾದವು ಹೊಸ ಕಟ್ಟಡಗಳು ನಿರ್ಮಿಸಲ್ಪಟ್ಟವು. ರೋಮನ್ನರು ಗ್ರೀಕ್ ಪಟ್ಟಣಗಳೊಡನೆ ಸಂಬಂಧವನ್ನಾರಂಭಿಸಿದರು.

## ಪ್ರಾಚೀನ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆ

### ರೋಮನ್ ಜನತೆ (ಪಾಪ್ಯುಲಸ್ ರೊಮಾನಸ್)

ಪ್ರಾಚೀನ ಕಾಲದಲ್ಲಿ ರಾಮ್ನಿಸ್, ಟೈಟಿಸ್ ಮತ್ತು ಲುಕಿರೀಸ್ ಎಂಬ ಮೂರು ಪಂಗಡ (ಟ್ರೈಬ್)ಗಳನ್ನೊಳಗೊಂಡಿತ್ತು. ಒಂದೊಂದು ಪಂಗಡದಲ್ಲಿ ಹತ್ತು ಕ್ಯೂರಿಯ ಎಂಬ ಕುಟುಂಬಗಳಿದ್ದುದರಿಂದ ಒಟ್ಟು ಮುವ್ವತ್ತು ಕ್ಯೂರಿಯಗಳಿದ್ದವು. ಈ ಸಾಮಾಜಿಕ ವಿಭಾಗವೇ ರಾಜಕೀಯ ವ್ಯವಸ್ಥೆಗೆ ಆಧಾರವಾಯಿತು. ಕ್ಯೂರಿಯ ಎಂದರೆ ಸಹಭೋಜನ ಸಾಮಾನ್ಯ ದೇವತೆ ಮತ್ತು ಅರ್ಚಕರನ್ನು ಹೊಂದಿದ್ದ ಒಂದು ಕುಟುಂಬ ಅಥವಾ ಗೋತ್ರ ರೋಮನ್ ನಾಗರಿಕ ಹಕ್ಕುಗಳು ಇಂತಹ ಸಾಮಾನ್ಯ ಮತಾಚರಣೆ (ಕಮ್ಯೂನಿಯೊ ಸಾಕ್ರೋರಂ) ಹೊಂದಿದವರಿಗೆ ಮಾತ್ರ ಸಲ್ಲುತ್ತಿದ್ದವು ಎಂದರೆ ಎಲ್ಲ ಸ್ವತಂತ್ರ ಜನರು, ತಮ್ಮ "ಪಿತೃಗೋತ್ರದ ಜ್ಞಾತಿ" (ಪೇಟ್ರಿಷಿಯನ್ ಜೆಂಟಿಸ್) ನಿಯಮವನ್ನು ಮುಖ್ಯವಾಗಿ ಗಣಿಸದೆ, ಸಾಮಾನ್ಯ ಮತಾಚರಣೆ (ಕ್ಯೂರಿಯಲ್ ಸಾಕ್ರ) ಯಲ್ಲಿ ಭಾಗ ವಹಿಸುವ ಹಕ್ಕಿಗೆ ಅನುಸಾರವಾಗಿಯೇ ರಾಜಕೀಯ ಹಕ್ಕುಗಳನ್ನು ಹೊಂದಿದ್ದರು ಗ್ರೀಸಿನಲ್ಲಿ ಇದ್ದಂತೆ ಇಲ್ಲಿ ಗಣ (ಜೆನ್ಸ್) ಮತ್ತು ಕುಟುಂಬಗಳೆಂಬ ಉಪವಿಭಾಗಗಳು ಕ್ಯೂರಿಯಗಳಲ್ಲಿರಲಿಲ್ಲ

### ರಾಜ (ರೆಕ್ಸ್)

ಜನತೆಗೆಲ್ಲ ಮುಖಂಡನಾಗ ರಾಜನು ಪಿತೃಧಿಕಾರ ಸಮಾಜದ ಮುಖಂಡನಾಗಿಯೂ, ಮುಖ್ಯ ಪುರೋಹಿತನಾಗಿಯೂ, ಚುನಾಯಿತನಾದ ನ್ಯಾಯಾಧೀಶನಾಗಿಯೂ, ಯುದ್ಧ ಕಾಲದಲ್ಲಿ ಮುಖ್ಯ ಸೇನಾಪತಿಯಾಗಿಯೂ ಇದ್ದನು. ರಾಜತ್ವವು ವಂಶಾನುಗತವಾದ ಹಕ್ಕಲ್ಲ ರಾಜನನ್ನು ಆರಿಸುವದರಲ್ಲಿ ಚುನಾವಣೆ ಮತ್ತು ನಾಮಕರಣ ಪದ್ಧತಿಗಳೆರಡನ್ನೂ, ಮತಾಚಾರಗಳು ವಿಚ್ಛಿತ್ತಿ ಆಗದಂತೆ ಅನುಸರಿಸುತ್ತಿದ್ದರು. ಒಬ್ಬ ರಾಜನು ಗತಿಸಿದ ಮೇಲೆ ಆತನ ಪರಮಾಧಿಕಾರಸೂಚನೆಯಾದ ಆಸ್ಪಿಸಿಯ ಎಂಬುದನ್ನು ಪಿತೃಗಳ ಸಭೆಗೆ (Council of Elders-

-Patres) ಒಪ್ಪಿಸುತ್ತಿದ್ದರು ಇವರು "ಜೆಂಟಿಸ್" ಪ್ರತಿನಿಧಿಗಳು, ಈ ಪಿತೃಗಳು ತಮ್ಮವರಲ್ಲಿ ಒಬ್ಬನನ್ನು "ಮಧ್ಯಕಾಲೀನ ರಾಜ" (ಇಂಟರ್-ರೆಕ್ಸ್) ನಾಗಿ ಚುನಾಯಿಸುತ್ತಿದ್ದರು ಅವನು ಮತ್ತೊಬ್ಬನನ್ನು ನಾಮಕರಣ ಮಾಡುತ್ತಿದ್ದನು ಕೊನೆಗೆ ಪಿತೃಗಳು ಒಬ್ಬನನ್ನು ರಾಜನಾಗಿ ಆರಿಸಿ ಜನತೆಯ ಅನುಮೋದನೆಯನ್ನು ಪಡೆಯಬೇಕಾಗಿದ್ದಿತು ಅನಂತರ ಪಿತೃಗಳು ಪುನಃ ಈ ಜನತೆಯ ಚುನಾವಣೆಯನ್ನು ಅನುಮೋದಿಸಿ ಆ ರಾಜನು ಪವಿತ್ರ ಚಿಹ್ನೆ (ಸಾಕ್ರ) ಯನ್ನು ರಕ್ಷಿಸಿಕೊಂಡು ಬರಲು ಅವನಿಗೆ ಒಪ್ಪಿಸುತ್ತಿದ್ದರು ಹೀಗೆ ಪಿತೃಗಳು ಮೊದಲು ರಾಜನನ್ನು ಆರಿಸಿ ಕೊನೆಯಲ್ಲಿ ಅನುಮೋದಿಸಬೇಕಾಗಿದ್ದಿತು ಆದರೂ ಎಲ್ಲಾ ಸ್ವತಂತ್ರ ಜನರೂ ಪಿತೃಗಳ ಸೂಚನೆಯನ್ನು ಒಪ್ಪಲು ಅಥವಾ ನಿರಾಕರಿಸಲು ಅಧಿಕಾರ ಹೊಂದಿದ್ದರು

ರಾಜನು ಆಜೀವ ಅಧಿಕಾರ ಪಡೆದಿದ್ದನು ಹಿಂದಿನ ವ್ಯವಹಾರಕ್ಕನುಸಾರವಾಗಿ ನ್ಯಾಯತೀರ್ಮಾನದಲ್ಲಿ ಅವನೇ ಮುಖ್ಯ ನ್ಯಾಯಾಧೀಶನು. ಸೆನೇಟನ್ನು ಸಮಾವೇಶ ಮಾಡುವುದು ಅವನ ಕರ್ತವ್ಯವಾಗಿದ್ದಿತು. ಪ್ರಜಾಸಭೆಯನ್ನು ನೇರಿಸಿ ತಾನು ಮಾಡಿದ ತೀರ್ಮಾನಗಳನ್ನು ತಿಳಿಸುತ್ತಿದ್ದನು. ಯುದ್ಧದಲ್ಲಿ ಮುಖ್ಯ ಸೇನಾಪತಿಯಾಗಿ ಸೈನ್ಯವನ್ನು ನಡಿಸುವ ಜವಾಬ್ದಾರಿಯು ಅವನದು. ಪವಿತ್ರವಾದ ಅಗ್ನಿಹೋತ್ರವು ನಂದಿಹೋಗದಂತೆ ನೋಡಿಕೊಂಡು ಮುಖ್ಯ ಪುರೋಹಿತನಾಗಿ ಯಜ್ಞಗಳನ್ನು ಮಾಡಬೇಕಾಗಿದ್ದಿತು ಎಲ್ಲ ತೆರಿಗೆಗಳನ್ನು ತಾನೇ ವಿಧಿಸಿ ಅಧಿಕಾರಿಗಳನ್ನು ತಾನೇ ನಿಯಮಿಸಿಕೊಳ್ಳುತ್ತಿದ್ದನು.

## ಸೆನೇಟ್

ಸೆನೇಟಿನಲ್ಲಿ ಮುಖ್ಯ ಕುಟುಂಬ (ಜೆಂಟಿಸ್) ಗಳಿಂದ ಆರಿಸಲ್ಪಟ್ಟ ಇನ್ನೂರು ಜನ ಪಿತೃಗಳು (ಪ್ಯಾಟ್ರಸ್) ಜೀವಾವಧಿ ಮೆಂಬರುಗಳಾಗುತ್ತಿದ್ದರು. "ಸಾಕ್ರ" ಪವಿತ್ರ ಚಿಹ್ನೆಗಳನ್ನು ರಕ್ಷಿಸುವ ಕರ್ತವ್ಯ ಇವರದು. ಆದುದರಿಂದ ತಮ್ಮಲ್ಲಿಯೇ ಒಬ್ಬನನ್ನು ತಾತ್ಕಾಲಿಕ ರಾಜ

(ಇಂಟರ್‌ರೆಕ್ಸ್) ಮತ್ತು ಶಾಶ್ವತರಾಜನಾಗಿ ನಾಮಕರಣಮಾಡುವ ಮತ್ತು ಕೊನೆಗೆ ಅನುಮೋದಿಸುವ ಹಕ್ಕನ್ನು ಹೊಂದಿದ್ದರು. ಆದರೂ ಎಲ್ಲ ಕುಟುಂಬ (ಜೆಂಟಿಸ್) ಗಳ ಅನುಮೋದನೆಯು ಆವಶ್ಯಕವಾಗಿದ್ದುದರಿಂದ ಇವರ ಅಧಿಕಾರವು ನಿರಂಕುಶವಾಗಿರಲಿಲ್ಲ ಮತ್ತು ರಾಜನು ಚುನಾಯಿತನಾದಕೂಡಲೆ ಸೆನೇಟರುಗಳು ಅವನಿಗೆ ಅಧೀನರಾಗಿ ರಾಜನಿಗೆ ಸಲಹೆಗಳನ್ನು ಮಾತ್ರ ಮಾಡಬಹುದಾಗಿದ್ದಿತು ಸೆನೇಟಿನ ಖಾಲಿ ಸ್ಥಾನಗಳಿಗೆ ರಾಜನೇ ನಾಮಕರಣ ಮಾಡುತ್ತಿದ್ದನು.

## ಅಸೆಂಬ್ಲಿ

ಎಲ್ಲ ಸ್ವತಂತ್ರ ಜನರು ತಮ್ಮ ಕ್ಯೂರಿಯ ಪ್ರಕಾರ ಸಭೆಯ ಸದಸ್ಯರಾಗಲು ಹಕ್ಕು ಹೊಂದಿದ್ದರು. ಅಸೆಂಬ್ಲಿಯನ್ನು ರಾಜನು ಅಥವಾ ತಾತ್ಕಾಲಿಕ ರಾಜನು ಸಮಾವೇಶಗೊಳಿಸಿ ಅವರಿಗೆ ವಿಷಯವನ್ನು ತಿಳಿಸಿ ಅವರ ಮತ (ಓಟು)ಗಳನ್ನು ಕ್ಯೂರಿಯ ವಿಭಾಗಕ್ಕನುಸಾರವಾಗಿ ಲೆಕ್ಕಿಸುತ್ತಿದ್ದನು ಒಂದೊಂದು ಗುಂಪಿನಲ್ಲಿ ಆ ಕ್ಯೂರಿಯದಲ್ಲಿನ ಅಧಿಕಾಂಶ ಓಟುಗಳು ನಿರ್ಣಾಯಕವಾಗಿದ್ದವು ಮತ್ತು ಅಂತ್ಯದಲ್ಲಿ ಎಲ್ಲ ಕ್ಯೂರಿಯಗಳ ಸಮಷ್ಟಿ ಓಟುಗಳ ಅಧಿಕಾಂಶದಿಂದ ನಿರ್ಧಾರಣೆಯಾಗುತ್ತಿತ್ತು. ಆದರೂ ಅಸೆಂಬ್ಲಿಯು ಕೇವಲ ಸಲಹೆ ಮಾತ್ರ ಮಾಡಬಹುದಾಗಿದ್ದಿತು ಪಿತೃಗಳು ಮಾಡಿದ ನಾಮಕರಣಗಳನ್ನು ಅನುಮೋದಿಸುವದು, ಅಥವಾ ತಿರಸ್ಕರಿಸುವದು, ದತ್ತಾಧಿಕಾರ (adoptions) ಕೊಡುವದು, ಆಸ್ತಿಯನ್ನು ವಿಲ್ ಮೂಲಕ ಹಂಚುವದಕ್ಕೆ ಅನುಮತಿ ಕೊಡುವದು, ಪುರೋಹಿತರು ಅಧಿಕಾರ ವಹಿಸುವಾಗ ಸಮಾರಂಭದಲ್ಲಿ ಭಾಗ ವಹಿಸುವದು ಅಸೆಂಬ್ಲಿಯ ಕರ್ತವ್ಯಗಳಾಗಿದ್ದವು.

ಹೀಗೆ ರಾಜಕೀಯ ಪದ್ಧತಿಯು ಸ್ವಲ್ಪಮಟ್ಟಿಗೆ ಬೆಳೆದುಬಂದಿತ್ತು. ಸರ್ಕಾರವು ಭಿನ್ನಭಿನ್ನ ಪಂಗಡಗಳ ಮೇಲೆ ಅಧಿಕಾರ ವ್ಯಾಪ್ತಿಮಾಡಿ ಆ ಪಂಗಡಗಳನ್ನು ವೈಯುಕ್ತಿಕ ಸಂಸ್ಥೆಗಳನ್ನಾಗಿ ಮಾರ್ಪಡಿಸಿದ್ದಿತು ಸರ್ಕಾರದ ನ್ಯಾಯಾಧೀಶರೇ ನ್ಯಾಯವನ್ನು ತೀರ್ಮಾನಿಸುತ್ತಿದ್ದರು.

ಮತ್ತು ಸರ್ಕಾರವು ಕುಟುಂಬದಲ್ಲಿ ಪಿತೃವಿನ (ಪ್ಯಾಟ್ರಿಯು ಪೊಟೆಸ್ಟಾಸ್) ಸರ್ವಾಧಿಕಾರವನ್ನೂ ಕೊಂಚಮಟ್ಟಿಗೆ ಕಮಿಮೆಮಾಡಿದ್ದಿತು

## ಸರ್ವಿಯಸ್ ಟೆಲ್ಲಿಯಸ್ ಸುಧಾರಣೆಗಳು
## (ಕ್ರಿ. ಪೂ. ೫೭೮-೫೩೪)

ಆರನೆಯ ರಾಜನಾದ ಸರ್ವಿಯಸ್ ಟೆಲ್ಲಿಯಸ್ ಆಡಳಿತದಲ್ಲಿ ಬದಲಾವಣೆ ಮಾಡಿದನು (೧) ಹಿಂದಣ ಜನವಿಭಾಗಗಳನ್ನು ಲಕ್ಷಿಸದೆ ಆದಾಯವನ್ನನುಸರಿಸಿ ಐದು ಪಂಗಡಗಳನ್ನು ಮಾಡಿದನು. (೨) ಅವುಗಳನ್ನು ಪುನಃ ಭಾಗಿಸಿ ನೂರರಂತೆ ಕೂಡಿಸಿ **ಕಮಿಷಿಯ ಸೆಂಚುರಿ ಯಾಟ** ಎಂಬ ಸಭೆಯನ್ನು ಸ್ಥಾಪಿಸಿದನು (೩) ನಗರವನ್ನು ವಿಸ್ತರಿಸಿ ಸಾರ್ವಜನಿಕ ಕಟ್ಟಡಗಳನ್ನು ಮಾಡಿಸಿದನು (೪) ಪುನಃ ಜನತೆಯನ್ನೆಲ್ಲ ನಾಲ್ಕು ನಗರದ, ೧೭ ಜನಪದದ ಗುಂಪುಗಳನ್ನು ಮಾಡಿ ಒಟ್ಟು ೨೧ ಗುಂಪುಗಳುಳ್ಳ **ಕಮಿಷಿಯ ಟ್ರಿಬ್ಯೂಟ** ಎಂಬ ಮತ್ತೊಂದು ಸಭೆಯನ್ನು ಸ್ಥಾಪಿಸಿದನು.

ಪ್ರಾಚೀನ ಪಿತೃವಂಶಗಳಿಗೆ ಪ್ರಾಧಾನ್ಯಕೊಡದೆ ಅವರ ಸೆನೇಟ್ ಸಭೆಗೆ ೧೦೦ ಹೊಸ ಪ್ರತಿನಿಧಿಗಳನ್ನು ಸೇರಿಸಿ ಸೆನೇಟಿನಲ್ಲಿ ೩೦೦ ಮೆಂಬರುಗಳಿರುವಂತೆ ಮಾಡಿದನು ಹಿಂದಣ ಸೇನೆಯು ಪ್ರಾಚೀನ ಮೂರ ಜನಾಂಗಗಳಿಗನುಸಾರವಾಗಿ ನಿರ್ಮಿತವಾಗಿದ್ದಿತು ಒಂದೊಂದು ಜನಾಂಗದಿಂದ ೧೦೦೦ ಸಿಪಾಯಿಗಳನ್ನು ಲೀಜಿಯನ್ನೆಂಬ ಪಾದಚಾರಿಭಾಗಕ್ಕೂ ೧೦೦ ಅಶ್ವಾರೋಹಕರನ್ನು ಅಶ್ವದಳಕ್ಕೂ ಸೇರಿಸುವ ಪದ್ಧತಿ ಇತ್ತು ಇದನ್ನು ಬದಲಾಯಿಸಿ ಸರ್ವಿಯಸ್ ಟೆಲ್ಲಿಯಸ್ಸನು ಎಲ್ಲ ಭೂಮಿಯಜಮಾನರನ್ನು (ಅಸ್ಸಿಡ್ಯುಯೈ) ಹಿಂದಿನ ಕ್ಯೂರಿಯ ವಿಭಾಗಗಳನ್ನು ಲಕ್ಷಿಸದೆ, ಹೊಸ ತರಗತಿ ಮತ್ತು ಶತಕ (centuries) ಗಳಾಗಿ ವಿಭಾಗಿಸಿದನು ಒಂದೊಂದು ಶತಕದಲ್ಲಿ ನೂರು ಯೋಧರು, ಇಂತಹ ಶತಕಗಳು ಸೇರಿ ಒಂದು ತರಗತಿ ಎಂಬುದಾಗಿ ನೇಮಿಸಿ "ಫಾಲಾಂಕ್ಸ್" ವ್ಯೂಹದಂತೆ ರಚಿಸಿದನು ಎಲ್ಲ ಜಮೀನ್ದಾರರು ಜ್ಯೇಷ್ಠರು(Seniores)

ಮತ್ತು ಯುವಕರು (Juniores) ಎಂದು ವಿಂಗಡಿಸಿ, ಜ್ಯೇಷ್ಠರು ಆಪತ್ಕಾಲದಲ್ಲಿಯೂ ಯುವಕರು ನಿತ್ಯ ಯುದ್ಧದಲ್ಲಿಯೂ ಭಾಗ ವಹಿಸು ವಂತೆ ಮಾಡಿದನು ಹೀಗೆ ಐದು ತರಗತಿಗಳೂ ಎರಡುದಳ (ಲೀಜಿಯನ್) ಒಂದೊಂದು ಗುಂಪಿನಲ್ಲಿದ್ದವು. ಜ್ಯೇಷ್ಠರಲ್ಲಿ ಒಂದೊಂದು ಲೀಜಿಯನ್ನಲ್ಲಿ ೪೨ ಶತಕಗಳಿರುವಂತೆ ಎರಡು ಲೀಜಿಯನ್ ಅಥವಾ ೮೫ ಶತಕಗಳು ಇದ್ದವು ಹಾಗೆಯೇ ಯುವಕರಲ್ಲಿ ಎರಡು ಲೀಜಿಯನ್ ಅಥವಾ ೮೫ ಶತಕಗಳು. ಐದು ತರಗತಿಗಳಲ್ಲಿ ಮೊದಲು ಮೂರು ತರಗತಿಯ ಯೋಧರು ಉಚ್ಚಕುಲದವರಾಗಿದ್ದು, ತಮ್ಮದೇ ಬಲವಾದ ಆಯುಧ ಅಂಗರಕ್ಷಣೆ ಹೊಂದಿದವರು ೩೦೦೦ ಜನ ನಾಲ್ಕು ಐದನೆಯ ತರಗತಿಯವರು ಬಡ ಜಮೀನ್ದಾರರು ಹೆಚ್ಚು ಆಯುಧಗಳನ್ನು ಹೊಂದಿರಲಿಲ್ಲ ಇವರಲ್ಲದೆ ಪ್ರತಿದಳಕ್ಕು ಕಾಮಗಾರಿಯವರ ಸಹಾಯ ವಿದ್ದಿತು ಅಶ್ವದಳವು ಮೊದಲು ಆರು ಶತಕಗಳಾಗಿದ್ದು ೧೨ ಶತಕಗಳಿಗೆ ಏರಿಸಲ್ಪಟ್ಟಿತು. ಜನಪದ ಮತ್ತು ನಗರವನ್ನು ೨೧ ಭಾಗಗಳನ್ನಾಗಿ ಮಾಡಿ ಅದರಂತೆ ಸರ್ವಿಯಸ್ಸನು ಸೈನ್ಯಕ್ಕೆ ಸಿಪಾಯಿಗಳನ್ನು ಆರಿಸುತ್ತಿದ್ದನು. ಹೀಗೆ ಸರ್ವಿಯಸ್ಸಿನ ಸುಧಾರಣೆಗಳಿಂದ ರೋಮ್ ವಿಸ್ತರಿಸುವದೇ ಅಲ್ಲದೆ ಬಹುಳ ಪ್ರಬಲವಾಗಲು ಅವಕಾಶವಾಯಿತು.

## ರಾಜಾಧಿಕಾರ ಪತನ

ಕಡೆಯರಾಜನಾದ ಪ್ರೌಢ ಟಾರ್ಕ್ವಿನ್ (ಟಾರ್ಕ್ವಿನಸ್ ದಿ ಪ್ರೌಡ್) ಕ್ರಿ.ಪೂ. ೫೩೪ ರಿಂದ ೫೧೦ ರವರೆಗೆ ಆಳಿದನು ಇವನು ನಿರಂಕುಶನಾಗಿ ಕ್ಯೂಮೆ ಎಂಬ ಗ್ರೀಕ್ ನಗರದ ನಿರಂಕುಶರಾಜನಾದ ಅರಿಸ್ಟೋಡಿಮಸ್ ಎಂಬವನೊಡನೆ ಸ್ನೇಹ ಬೆಳಸಿದನು ಟಾರ್ಕ್ವಿನ್ನನು ಉತ್ತರದಲ್ಲಿದ್ದ ಜನಾಂಗಗಳನ್ನು ಗೆದ್ದು ರೋಮನ್ನು ರಕ್ಷಿಸಿದರೂ ಇವನ ಆಳಿಕೆಯು ಸಮರ್ಪಕವಾಗಿರಲಿಲ್ಲ. ಇವನ ಮಗ ಸೆಕ್ಸ್ಟಸ್ ಉನ್ನತಕುಲದ ಲುಕ್ರೀಷಿಯ ಎಂಬವಳ ಮಾನಭಂಗಮಾಡಿದುದರಿಂದ ಜನರು ಉದ್ರೇಕಗೊಂಡು ಟಾರ್ಕ್ವಿನ್ನನನ್ನು ಪದಚ್ಯುತನನ್ನಾಗಿ ಮಾಡಿ ಗಡೀ

ಪಾರು ಮಾಡಿದರು. ಟಾರ್ಕ್ವಿನ್ ಮತ್ತು ಅವನ ಮಕ್ಕಳು ರೋಮನ್ನು ಪುನಃ ಗೆಲ್ಲಲು ಮೂರುಸಲ ಪ್ರಯತ್ನಮಾಡಿದರು. ಆದರೆ ಕೊನೆಯಲ್ಲಿ **ಲೇಕ್ ರೆಜಿಲಸ್** ಯುದ್ಧದಲ್ಲಿ ಇವರು ಸೋತುದರಿಂದ ಟಾರ್ಕ್ವಿನ್ನನು ಕ್ಯೂಮೆಗೆ ಓಡಿಹೋಗಿ ಸತ್ತನು. ರಾಜನ ಬದುಲಾಗಿ ರೋಮನ್ ಜನರು ಇಬ್ಬರು ನ್ಯಾಯಾಧೀಶರನ್ನು ಚುನಾಯಿಸಿ ಅವರಿಗೆ ಸರ್ವಾಧಿಕಾರವನ್ನು ಕೊಟ್ಟರು. ಹೀಗೆ ರಾಜತ್ವವು ರೋಮಿನಿಂದ ಬಹಿಷ್ಕರಿಸಲ್ಪಟ್ಟು ಪ್ರಜಾಪ್ರಭುತ್ವವು ಸ್ಥಾಪಿತವಾಯಿತು.

---

## ಅಧ್ಯಾಯ ೩

ರಾಜತ್ವವನ್ನು ಬಹಿಷ್ಕರಿಸಿ ಎಟ್ರುಸ್ಕನ್ ಯುದ್ಧದಲ್ಲಿ ಗೆದ್ದು ರೋಮನ್ನರು ಪ್ರಜಾಪ್ರಭುತ್ವವನ್ನು ಕ್ರಿ.ಪೂ. ೫೦೯ ರಲ್ಲಿ ಸ್ಥಾಪಿಸಿದ ಕೂಡಲೆ ಅನೇಕ ಯುದ್ಧಗಳಲ್ಲಿಯೂ ಅಂತಃಕಲಹಗಳಲ್ಲೂ ನಿರತರಾಗಬೇಕಾಯಿತು. ಸುಮಾರು ಇನ್ನೂರು ವರ್ಷ ವಾಲ್ಸ್ಕೈ, ಸಾಬೈನ್, ಗಾಲ್, ಮತ್ತು ಸಾಮ್ನೈಟ್ ಜನಾಂಗಗಳೊಡನೆ ಯುದ್ಧ ಮಾಡಿ ರಾಜ್ಯವನ್ನು ವಿಸ್ತರಿಸಿದರು. ಆದರೆ ಅದೇ ಕಾಲದಲ್ಲಿ ರೋಮಿನ ಎರಡು ಪಂಗಡದವರಲ್ಲಿ ಸ್ಪರ್ಧೆಯುಂಟಾಗಿ ಕೊನೆಗೆ ಪಿತೃಗಳು ಸಾಮಾನ್ಯ ಜನರಾದ ಪ್ಲಿಬಿಯನ್ ಅಥವಾ ಪ್ಲೆಬ್ಸ್ ಜನಕ್ಕೆ ಸಮಸ್ತ ಹಕ್ಕುಗಳನ್ನು ಕೊಡಬೇಕಾಯಿತು. ಈ ಪೇಟ್ರೀಷಿಯನ್ ಮತ್ತು ಪ್ಲಿಬಿಯನ್ನರ ಘರ್ಷಣೆಗೆ ವರ್ಗಗಳ ಸ್ಪರ್ಧೆ (Struggle between the Orders) ಎಂದು ಹೆಸರು. ಇದರ ಚರಿತ್ರೆಗೆ ಆಧಾರಗಳು ಕ್ರಿ.ಪೂ. ನಾಲ್ಕನೆಯ ಶತಾಬ್ದದಿಂದ ಕಂಡುಬರುವದು. ಮೊದಲು ಸೀಮಾ ಸಂಬಂಧವಾದ ಕಲಹಗಳು ಪೇಟ್ರೀಷಿಯನ್ನರ ಸಾಹಸಕಾರ್ಯಗಳು ದಂತಕಥೆಗಳಾಗಿದ್ದವು. ಇವನ್ನೆಲ್ಲ ಚರಿತ್ರಕಾರರಾದ ಕಾಲ್ಪೂರ್ನಿಯಸ್ ಪೈಸೊ ಸೀಲಿಯಸ್ ಆಂಟಿಪೇಟರ್, ಸಿಸಿರೋ ಮುಂತಾದವರು ತಮ್ಮ ತಮ್ಮ ಅಭಿ

ಪ್ರಾಯಕ್ಕೆ ತಕ್ಕಂತೆ ಮಾರ್ಪಡಿಸಿ ರೂಪಕೊಟ್ಟರು. ಪ್ರಾಚೀನ ಪ್ರಜಾಪ್ರಭುತ್ವವು ಇವರು ಹೇಳುವಂತೆ ಅಷ್ಟು ವ್ಯವಸ್ಥಿತವಾಗಿರಲಿಲ್ಲ. ಇವರ ಚರಿತ್ರೆಗಳಲ್ಲಿ ಕೋಪಯುವಾದ ಘಟನೆಯು ಕಂಡುಬಂದರೂ ಒಟ್ಟಿನಲ್ಲಿ ಈ ವರ್ಗಗಳ ಪರಸ್ಪರ ಘರ್ಷಣೆ ಮತ್ತು ಅದೇ ಕಾಲದ ರೋಮಿನ ವಿಸ್ತರಣೆಗಳ ಇತಿಹಾಸವು ಸಮರ್ಪಕವಾಗಿದೆ.

ಕ್ರಿ. ಪೂ. ೫೦೯ ರಲ್ಲಿ ಪ್ರಜಾಪ್ರಭುತ್ವವು ಸ್ಥಾಪಿತವಾಯಿತು. ರಾಜನ ಸರ್ವಾಧಿಕಾರವು ಪ್ರತಿವರ್ಷವೂ ಚುನಾಯಿತರಾದ ಇಬ್ಬರು ನ್ಯಾಯಾಧೀಶರಿಗೆ ಒಪ್ಪಿಸಿ ಇವರನ್ನು ಪ್ರೇಟಾರ್ ಅಥವಾ ಕಾನ್ಸಲ್ ಎಂದು ಕರೆದರು. ಇವರು ಸರ್ವಾಧಿಕಾರ ಚಿಹ್ನೆಯಾದ "ಇಂಪೀರಿಯಂ" ವಹಿಸಿದ್ದರು. ಇಬ್ಬರಿಗೂ ಸಮನಾದ ಅಧಿಕಾರ ವ್ಯಾಪ್ತಿಯಿದ್ದರೂ ರಾಜತ್ವವು ಒಂದು ವರ್ಷ ಅವಧಿಗೆ ಮೀರಕೂಡದು. ಬಾಹ್ಯದಲ್ಲಿ ಅತ್ಯಂತ ಬದಲಾವಣೆ ಕಂಡುಬರಲಿಲ್ಲ. ಮತವಿಚಾರಗಳಲ್ಲಿ ಒಬ್ಬ ಕಾನ್ಸಲನು "ರಾಜ" (ರೆಕ್ಸ್) ಎಂದು ಕರೆಯಲ್ಪಡುತ್ತಿದ್ದನು. ಇವನನ್ನು ಶತಕಸಮಿತಿ (ಕಮಿಷಿಯ ಸೆಂಚುರಿಯಾಟ) ಚುನಾಯಿಸಿದರು. ಹಳೆಯ ಕಮಿಷಿಯ ಕ್ಯೂರಿಯಾಟ ಸಮಿತಿಯ ಅನುಮೋದನೆಯು ಅವಶ್ಯಕವಾಗಿದ್ದಿತು. ಈ ಕ್ಯೂರಿಯ ಸಮಿತಿಯ ಅನುಮೋದನೆಯನ್ನು ಕೂಡ ಪಿತೃಗಳು ಪುನಃ ಅಧಿಕರಿಸಬೇಕಾಗಿದ್ದಿತು. ಸೆನೇಟ್ ಹಿಂದೆ ಇದ್ದಂತೆಯೇ ಇದ್ದಿತು. ಆದರೆ ಹೊಸ ಪ್ಲಿಬಿಯನ್ ಉಮೇದುವಾರರನ್ನು ಸೇರಿಸಿದರು. ಪ್ರತಿನಿಧಿಸಭೆಯು ಶತಕಗಳಿಗನುಸಾರವಾಗಿ ಸೇರಿ ಕಾನ್ಸಲ್ಗಳನ್ನು ಚುನಾಯಿಸುವದು ಕಾನೂನುಮಾಡುವದು. ಆದರೂ ಪ್ರಾಚೀನ ಕ್ಯೂರಿಯ ಸಭೆಯು ಇದ್ದು ಕಾನ್ಸಲರಿಗೆ ಸರ್ವಾಧಿಕಾರ (ಇಂಪೀರಿಯಂ) ವಹಿಸುವ ಹಕ್ಕನ್ನು ಚಲಾಯಿಸುತ್ತಿತ್ತು.

ವರ್ಗಗಳ ಕಲಹವು ವಿದೇಶೀಯ ಸ್ವದೇಶೀಯರ ಕಲಹವಲ್ಲ, ಸ್ವತಂತ್ರ ಮತ್ತು ಸ್ವಾತಂತ್ರ್ಯರಹಿತ ಜನಗಳ ಕಲಹವೂ ಅಲ್ಲ. ಪ್ಯಾಟ್ರೀಷಿಯನ್ ಮತ್ತು ಪ್ಲಿಬಿಯನ್ನರಿಬ್ಬರೂ ಒಂದೇ ಜಾತಿ ಭಾಷೆ

ಮತ ನಾಗರೀಕ ಹಕ್ಕುಗಳನ್ನು ಹೊಂದಿದವರು, ರಾ ಜಾ ಧಿ ಕಾ ರ ನಿರ್ಮೂಲವಾದ ಮೇಲೆ ಹೆಚ್ಚು ಜ್ಞಾನ ಅನುಭವ ಐಶ್ವರ್ಯಹೊಂದಿದ್ದ ಪ್ಯಾಟ್ರೀಷಿಯನ್ನರೇ ಅಧಿಕಾರವನ್ನಾಕ್ರಮಿಸಿದರು. ಲಿ ಖಿ ತ ನ್ಯಾ ಯ ಗ್ರಂಥಗಳಿಲ್ಲದುದರಿಂದ ಕೇವಲ ಸ್ಮೃತಿರೂಪದಲ್ಲಿದ್ದ ಧರ್ಮಶಾಸ್ತ್ರಗಳನ್ನೆಲ್ಲ ಪ್ಯಾಟ್ರೀಷಿಯನ್ನರು ಮಾತ್ರ ತಿಳಿದಿದ್ದುದರಿಂದಲೂ, ನ್ಯಾಯಾಧೀಶರು ತಮ್ಮ ಪಂಗಡದಲ್ಲಿಯೇ ಚುನಾಯಿತರಾಗುತ್ತ ಇದ್ದುದರಿಂದಲೂ. ಪುರೋಹಿತರು ಅರ್ಚಕರು ತಮ್ಮವರಾದುದರಿಂದಲೂ, ಪ್ಲಿಬಿಯನ್ನರು ಮಾಡಿದ ಸಲಹೆಗಳಿಗೆಲ್ಲ ತಮ್ಮ ಅನುಮೋದನೆ ಆಗಬೇಕಾದುದರಿಂದ ಪ್ಯಾಟ್ರೀಷಿಯನ್ನರ ಅ ಧಿ ಕಾ ರ ವು ಬೆ ಳೆ ಯು ತ್ತ ಬಂದಿತು. ಈ ರಾಜಕೀಯ ಕಾರಣಗಳಲ್ಲದೆ ಸಾಮಾಜಿಕ ಮತ್ತು ಆರ್ಥಿಕಕಾರಣಗಳೂ ಇದ್ದವು. ಪ್ಲಿಬಿಯನ್ನರಿಗೆ ಚುನಾವಣೆ ಹಕ್ಕು ಇದ್ದರೂ ಅವರು ಉನ್ನತಾಧಿಕಾರಗಳನ್ನು ಪಡೆಯುವಹಾಗಿರಲಿಲ್ಲ. ಸಹಭೋಜನ ಅ ಂ ತ ರ್ವಿ ವಾ ಹ ಗ ಳೂ ನಿಷೇಧಿಸಲ್ಪಟ್ಟಿದ್ದವು. ಪ್ಯಾಟ್ರೀಷಿಯನ್ ಮತ್ತು ಪ್ಲಿಬಿಯನ್ನರ ವಿವಾಹಸಂಬಂಧಗಳು ಕಾನೂನಿಗೆ ವಿರುದ್ಧವೆಂದು ರದ್ದುಮಾಡುತ್ತಿದ್ದವು. ಪ್ಲಿಬಿಯನ್ನರು ರೋಮ್ ವಿಸ್ತರಿಸಿದಂತೆಲ್ಲ ಸಂಖ್ಯೆಯಲ್ಲೂ ಐಶ್ವರ್ಯದಲ್ಲೂ ಹೆಚ್ಚುತ್ತಿದ್ದರು. ನೆಪಮಾತ್ರಕ್ಕೆ ಕಮಿಷಿಯ ಸೆಂಚುರಿಯಾಟ ಸಭೆಯಲ್ಲಿ ಓಟುಮಾಡುವ ಹಕ್ಕನ್ನು ಹೊಂದಿದ್ದರು. ಆದರೆ ಆ ಸಭೆಯಲ್ಲಿ ಇವರು ಅಲ್ಪಸಂಖ್ಯಾತರಾಗಿದ್ದು, ಪ್ಯಾಟ್ರೀಷಿಯನ್ನರು ನಾಮಕರಣಮಾಡಿದ ಉಮೇದುವಾರನಿಗೇ ಮತವನ್ನು ಕೊಡಬೇಕಾಗಿದ್ದಿತು. ಹೊಸ ಕಾನೂನುಗಳನ್ನು ಸೂಚಿಸಲು ಇವರಿಗೆ ಅಧಿಕಾರವಿರಲಿಲ್ಲ. ಪ್ಯಾಟ್ರೀಷಿಯನ್ನರು ಸೂಚಿಸಿದ ಕಾನೂನುಗಳಿಗೆ ಅನುಮತಿಕೊಡುವದು ಮಾತ್ರ ಇವರಿಗೆ ಹಕ್ಕು. ಪ್ಲಿಬಿಯನ್ನರ ಆರ್ಥಿಕಸ್ಥಿತಿಯು ವಿಷಾದಕರವಾಗಿದ್ದಿತು. ರೋಮನ್ನರು ಸುತ್ತುಮುತ್ತಿನ ದೇಶಗಳನ್ನು ಗೆದ್ದಂತೆಲ್ಲ ಫಲವತ್ತಾದ ಭೂಮಿಗಳು ವಶವಾದವು. ಆದರೆ ಈ ಸಾರ್ವಜನಿಕ ಭೂಮಿಯು (ಆಗರ್ ಪಬ್ಲಿಕಸ್) ಪೇಟ್ರೀಷಿಯನ್ನರಿಗೆ ಮಾತ್ರ ಹಂಚ

ಲ್ಪಟ್ಟು ಯುದ್ಧದಲ್ಲಿ ಪ್ರಾಣಗಳನ್ನರ್ಪಿಸಿದ ಅಸಂಖ್ಯಾತರಾದ ಪ್ಲಿಬಿಯನ್ನರಿಗೇ ಇಲ್ಲದಂತೆ ಆಯಿತು. ಅಲ್ಲದೆ ಪೇಟ್ರೇಷಿಯನ್ನರು ದೊಡ್ಡ ಜಮೀನ್ದಾರರಾಗಿ ಪ್ಲಿಬಿಯನ್ ರೈತರನ್ನು ಸಾಲದಲ್ಲಿ ಮುಳುಗಿಸಿ ಅಂತಹ ಸಾಲಗಾರರನ್ನು (ನೆಕ್ಸಸ್) ಗುಲಾಮಗಿರಿಗೆ ತಂದು ಹಿಂಸೆ ಕೊಡುತ್ತಿದ್ದರು ಸಾಲದಲ್ಲಿ ಸಿಕ್ಕಿಕೊಂಡ ಇಂತಹ ರೈತರ ಅವಸ್ಥೆಯೇ ಪರಿಸ್ಥಿತಿಯನ್ನು ಉತ್ಕಟಾವಸ್ಥಿತಿಗೆ ತಂದಿತು. ಸರ್ವಾಧಿಕಾರ ಹೊಂದಿದ ಕಾನ್ಸಲ್ಗಳು ಕೂಡ ಪೇಟ್ರೇಷಿಯನ್ ಕೋಮಿನವರಾದ್ದರಿಂದ ನ್ಯಾಯ ದೊರಕುವದೆಂಬ ಆಶೆಯನ್ನೇ ತೊರೆಯಬೇಕಾಯಿತು. ಆದುದರಿಂದ ಪ್ಲಿಬಿಯನ್ನರು ತಮ್ಮ ಸ್ವಾತಂತ್ರ್ಯ, ಪ್ರಾಣ ಮತ್ತು ಹಕ್ಕುಗಳಿಗಾಗಿ ಪೇಟ್ರಿಷಿಯನ್ನರೊಡನೆ ಹೋರಾಡಬೇಕಾಯಿತು

ಈ ಪೇಟ್ರೇಷಿಯನ್ ಪ್ಲಿಬಿಯನ್ನರ ಹೋರಾಟವು ಸುಮಾರು ಇನ್ನೂರು ವರ್ಷ ನಡೆಯಿತು. ಇದರ ಚರಿತ್ರೆಯನ್ನು ನಾಲ್ಕು ಘಟ್ಟಗಳಾಗಿ ವಿಭಾಗಿಸಬಹುದು. (೧) ಕ್ರಿ.ಪೂ. ೫೦೯ ರಿಂದ ೪೭೨. (೨) ೪೫೭-೪೫೦. (೩) ೪೪೯-೩೫೬ (೪) ೩೫೬-೨೮೭.

## ಪ್ರಥಮ ಘಟ್ಟ (ಕ್ರಿ ಪೂ. ೫೦೯-೪೭೨)

**ಟ್ರಿಬ್ಯುನೇಟ್ ಸ್ಥಾಪನೆ.** (೧) ಕ್ರಿ ಪೂ ೫೦೯ರಲ್ಲಿ ವಾಲೇರಿಯಸ್ ಪಾಪ್ಲಿಕೋಲ ಎಂಬವನು ಅರ್ಜಿಹಾಕುವ ಹಕ್ಕನ್ನು ಕೊಡಲು ಅರ್ಜಿ ಕಾನೂನು (Law of Appeal) ಜಾರಿಗೆ ತಂದನು ಇದರಂತೆ ಯಾವ ನ್ಯಾಯಾಧೀಶನೂ ಮರಣದಂಡನೆಗೆ ಗುರಿಯಾದ ಯಾವ ನಾಗರಿಕನನ್ನು ಅಸೆಂಬ್ಲಿಯು ಅವನ ಅರ್ಜಿಯಮೇಲೆ ತೀರ್ಪನ್ನು ಖಾಯಂ ಮಾಡುವವರೆಗೂ ಗತಪ್ರಾಣನಾಗಿ ಮಾಡಕೂಡದು. ಆದರೆ ಈ ಅರ್ಜಿ ಹಕ್ಕು ನಗರ ಸರಹದ್ದಿನಾಚೆ ಜಾರಿಯಲ್ಲಿರಲಿಲ್ಲ. ಮತ್ತು ನಗರದಲ್ಲೂ ಈ ಕಾನೂನನ್ನು ಉಲ್ಲಂಘಿಸಿದ ಕಾನ್ಸಲ್ಗಳಿಗೆ ಯಾವ ಕಾನೂನಿನಂತೆ ಶಿಕ್ಷೆ ವಿಧಿಸಬೇಕೆಂಬುದು ನಿರ್ಧರಮಾಡಿರಲಿಲ್ಲ. ಕ್ರಿ ಪೂ. ೪೯೫ ರಲ್ಲಿ

ರೋಮನ್ನರು ಶತ್ರುಗಳೊಡನೆ ಯುದ್ಧಮಾಡುತ್ತಿದ್ದ ಸಮಯದಲ್ಲಿ ಪ್ಲಿಬಿಯನ್ನರು ಸತ್ಯಾಗ್ರಹಮಾಡಿ ಒಟ್ಟಿಗೆ ಸೈನ್ಯವನ್ನು ಬಿಟ್ಟು ನಗರದ ಮಧ್ಯದಲ್ಲಿದ್ದ ಪವಿತ್ರಗಿರಿ (Sacred Mount) ಯಲ್ಲಿ ಸಮಾವೇಶ ವಾದರು. ಆಗ ಗಾಬರಿಗೊಂಡು ಪೇಟ್ರೀಷಿಯನ್ನರು ಸುಧಾರಣೆಗಳನ್ನು ಮಾಡುವೆವೆಂದು ಭಾಷೆಕೊಡಬೇಕಾಯಿತು. (೨) ಕ್ರಿ.ಪೂ ೪೯೩ ರಲ್ಲಿ **ಲೆಕ್ಸ್ ಸಾಕ್ರಾಟ** ಎಂಬ ಕಾನೂನು ಪ್ಲಿಬಿಯನ್ನರಿಗೆ ತಮ್ಮವರೇ ಆದ ನ್ಯಾಯಾಧೀಶರನ್ನು ಪ್ರತಿವರ್ಷವೂ ಚುನಾಯಿಸುವ ಹಕ್ಕನ್ನು ಕೊಟ್ಟರು. ಈ ಪ್ಲಿಬಿಯನ್ ನ್ಯಾಯಾಧೀಶರಿಗೆ **ಟ್ರೈಬ್ಯೂನ**ರೆಂದು ಹೆಸರು. ಇವರು ಪ್ಲಿಬಿಯನ್ ನಾಗರೀಕನನ್ನು ಪೇಟ್ರೀಷಿಯನ್ ನ್ಯಾಯಾಧೀಶನ ಅಧಿಕಾರದಿಂದ ರಕ್ಷಿಸಬೇಕಾಗಿದ್ದಿತು. ಬರುತ್ತ ಟ್ರೈಬ್ಯೂನಿನ ಅಧಿಕಾರವು ಹೆಚ್ಚುತ್ತ ಬಂದಿತು. ಇವನಿಗೆ ನಿಷೇಧ (ವೀಟೊ) ಅಧಿಕಾರವಿದ್ದುದರಿಂದ ಆಡಳಿಕೆಯ ಎಲ್ಲ ಅಂಶಗಳಲ್ಲಿಯೂ ಕೈವಾಡ ವಿದ್ದಿತು. ಇವನ ದೇಹವು ಪವಿತ್ರವೆಂದು ಲೆಕ್ಕಿಸಲ್ಪಟ್ಟುದರಿಂದ ಕಾನ್ಸಲ್ಗಳು ಇವನ ಮೇಲೆ ಅತ್ಯಾಚಾರ ಮಾಡಲಾಗುತ್ತಿದ್ದಿಲ್ಲ. ಟ್ರೈಬ್ಯೂನನು ಪ್ಲಿಬಿಯನ್ನರ ಸಭೆಗಳನ್ನು ಆಹ್ವಾನಿಸಿ ನಿರ್ಣಯ ಗಳನ್ನು ಮಾಡಿಸುತ್ತಿದ್ದನು. ಟ್ರಿಬ್ಯುನೇಟಿನಲ್ಲಿ ಹತ್ತು ಟ್ರೈಬ್ಯೂನ ರಿದ್ದರು. ಇವರನ್ನು ಕಮಿಷಿಯ ಟ್ರಿಬ್ಯೂಟ ಸಭೆಯು ಪ್ರತಿವರ್ಷವು ಚುನಾಯಿಸುತ್ತಿತ್ತು. ಹೀಗೆ ಪ್ಲಿಬಿಯನ್ನರು ತಮ್ಮ ಸಭೆಯಿಂದಲೇ ತಮ್ಮ ವರ್ಗದ ಟ್ರೈಬ್ಯೂನರನ್ನು ಚುನಾಯಿಸಿ ಠರಾವು (ಪ್ಲೆಬಿಸೈಟ) ಮಾಡುವ ಹಕ್ಕನ್ನು ಪಡೆದರು. (೩) ಕ್ರಿ ಪೂ ೪೮೬ ರಲ್ಲಿ ವ್ಯವಸಾಯದ ಕಾನೂನು ರೈತರಿಗೆ ಸ್ವಲ್ಪಮಟ್ಟಿಗೆ ಉಪಕಾರಮಾಡಿತು. ಕ್ರಿ.ಪೂ. ೪೮೫ ರಿಂದ ೪೭೯ ವರೆಗೆ ಫ್ಯಾಬಿಯೈ ಎಂಬವರು ಕಾನ್ಸಲ್ಗಳಾಗಿದ್ದಾಗ ಚಳುವಳಿಯು ಪ್ರಬಲವಾಯಿತು. (೪) ಕ್ರಿ ಪೂ. ೪೭೨ ರಲ್ಲಿ **ಲೆಕ್ಸ್ ಪಬ್ಲಿಲಿಯ** ಕಾನೂನಿನ ಪ್ರಕಾರ ಕಮಿಷಿಯ ಟ್ರಿಬ್ಯೂಟದಿಂದ ಚುನಾಯಿತರಾದ ಟ್ರೈಬ್ಯೂನರು ಪ್ಲಿಬಿಯನ್ ಸಂಸ್ಥೆಗಳಲ್ಲಿ ಠರಾವು ಮಾಡುವ ಹಕ್ಕು ಪೇಟ್ರೀಷಿಯನ್ನರಿಂದ ಅಂಗೀಕೃತವಾಯಿತು. ಆದರೂ ಈ

ಕಮಿಷಿಯ ಟ್ರಿಬ್ಯೂಟ ಸಭೆಯು ಕೇವಲ ಸಲಹೆ ಮಾಡುವದಾಗಿತ್ತು (ಕಂಸೀಲಿಯಂಪ್ಲಿಬಿಸ್).

## ದ್ವಿತೀಯ ಘಟ್ಟ (ಕ್ರಿ.ಪೂ. ೪೫೭-೪೫೦)

**ಡಿಸೆಂವಿರೇಟ್ ಸ್ಥಾಪನೆ.** ಕ್ರಿ ಪೂ. ೪೫೭ ರಲ್ಲಿ ಟ್ರೈಬ್ಯೂನರು ಚುನಾಯಿತರಾದರು. ಕ್ರಿ ಪೂ. ೪೫೧ ರಲ್ಲಿ ಈ ಹತ್ತು ಟ್ರೈಬ್ಯೂನರು ಮೊದಲನೆ ದಶವರ (ಡಿಸೆಂವಿರೇಟ್) ಎಂಬ ಸಂಸ್ಥೆಯಾಗಿ ಅದುವರೆಗೂ ಕೇವಲ ಸ್ಮೃತಿರೂಪದಲ್ಲಿದ್ದ ಕಾನೂನುಗಳನ್ನೆಲ್ಲ ಕ್ರೋಡೀಕರಿಸಲು ಆರಂಭಿಸಿದರು. ನ್ಯಾಯಶಾಸ್ತ್ರವನ್ನೆಲ್ಲ ಹತ್ತುಕೋಷ್ಟಕ(**ಟೆನ್ ಟೇಬಲ್ಸ್**) ಗಳಲ್ಲಿ ಸೇರಿಸಿದರು. ಕ್ರಿ.ಪೂ. ೪೫೦ ರಲ್ಲಿ ಪ್ಲಿಬಿಯನ್ನರು ಹತ್ತು ಜನರ ಸಮಿತಿಯೊಂದನ್ನು ನೇಮಿಸಿ, ಇವರು ಒಂದು ವರ್ಷ ಸರ್ವಾಧಿಕಾರ ಪಡೆಯುವಂತೆ ಪೇಟ್ರೇಷಿಯನ್ನರನ್ನು ಪುನಃ ಒತ್ತಾಯಪಡಿಸಿದರು. ಈ ದ್ವಿತೀಯ ಡಿಸೆಂವಿರೇಟ್ ಮತ್ತೆರಡು ಕೋಷ್ಟಕಗಳನ್ನು ಸೇರಿಸಿ ದ್ವಾದಶ ಕೋಷ್ಟಕ (**ಟ್ವೆಲ್ವ್ ಟೇಬಲ್ಸ್**) ಗಳೆಂಬ ಕಾನೂನು ಸಂಗ್ರಹ ವನ್ನು ಪ್ರಚಾರಮಾಡಿದರು. ಇದರಲ್ಲಿ ಬಹುಭಾಗವು ಪ್ರಾಚೀನ ವ್ಯವ ಹಾರ ರೀತಿಗಳೇ ಆಗಿದ್ದವು. ಆದರೂ ಬಾಯಿಪಾಠವಾಗಿದ್ದ ಧರ್ಮ ಶಾಸ್ತ್ರವು ಲಿಖಿತರೂಪವಾದುದರಿಂದ ಪೇಟ್ರೇಷಿಯನ್ನರ ಅಧಿಕಾರವು ಕಡಿಮೆಯಾಗಿ ಪ್ಲಿಬಿಯನ್ನರಿಗೆ ರಕ್ಷಣೆ ದೊರಕಿತು. ಪ್ಲಿಬಿಯನ್ನರ ನ್ಯಾಯ ವ್ಯವಹಾರಗಳಲ್ಲಿ ಸಹಾಯಮಾಡಲು "**ಎಡೈಲ್**" ಎಂಬ ಹೊಸ ಅಧಿಕಾರಿಗಳು ನೇಮಿಸಲ್ಪಟ್ಟರು. ಈ ಎರಡನೆಯ ಡಿಸೆಂವಿರೇಟಿನವರು ನಿರಂಕುಶರಾಗಿ ತಮ್ಮ ಅಧಿಕಾರವನ್ನು ಒಂದು ವರ್ಷಕ್ಕಿಂತ ಹೆಚ್ಚಾಗಿ ನಡೆಸಲು ಯತ್ನಿಸಿದರು. ಆದರೆ ಪ್ಲಿಬಿಯನ್ನರು ಅವರನ್ನು ಪದಚ್ಯುತ ಮಾಡಿ ತಮ್ಮ ಕೋಮಿನ ಟ್ರೈಬ್ಯೂನ್ ಮತ್ತು ಕಾನ್ಸಲರನ್ನು ಚುನಾಯಿ ಸಿದರು.

## ತೃತೀಯ ಘಟ್ಟ (ಕ್ರಿ.ಪೂ. ೪೪೯-೩೫೬)

**ಡಿಸೆಂವಿರೇಟಿನ ಪತನದಿಂದ ಪ್ಲಿಬಿಯನ್ನರ ಅಧಿಕಾರ ಹೆಚ್ಚಿತು.**

ಕ್ರಿ ಪೂ. ೪೪೯ರಲ್ಲಿ ಪ್ಲಿಬಿಯರ್ಸ ಕಾನ್ಸಲ್ಗಳು ಹೊಸ ಕಾನೂನುಗಳನ್ನು ಮಾಡಿ ಅರ್ಜಿ ಹಕ್ಕನ್ನು ಪುನಃ ಸ್ಥಾಪಿಸಿದರು. ಪ್ಲಿಬಿಯನ್ನರು ತಮ್ಮ ಸಭೆಗಳಲ್ಲಿ ಮಾಡಿದ ನಿರ್ಣಯ (ಪ್ಲೆಬಿಸೈಟ) ಗಳು ಎಲ್ಲ ಜನರಿಗೂ ಅನ್ವಯಿಸಬೇಕು ಹೀಗೆ ಪ್ಲಿಬಿಯರ್ಸ ನ್ಯಾಯಾಧೀಶರು, ಸಭೆಗಳು, ಸರ್ಕಾರದ ಅಂಗಗಳಾದವು. ಟ್ರಿಬ್ಯೂನೇಟ್ ಶಾಶ್ವತ ಸಂಸ್ಥೆಯಾಯಿತು. ಟ್ರೈಬ್ಯೂನರು ಪೇಟ್ರೀಷಿಯರ್ಸ ನ್ಯಾಯಾಧೀಶರ ಸಮವಾದರು. ಈ ಕಾನೂನುಗಳಿಗೆ **ವೆಲೇರಿಯೋ ಹೊರೇಷಿಯರ್ಸ** ಕಾನೂನೆಂದು ಹೆಸರು. ಕ್ರಿ.ಪೂ ೪೪೫ರಲ್ಲಿ **ಲೆಕ್ಸ್ ಕಾನೂಲಿಯ** ಕಾನೂನಿನಂತೆ ಪೇಟ್ರೀಷಿಯರ್ಸ ಮತ್ತು ಪ್ಲಿಬಿಯನ್ನರ ಅಂತರ್ವಿವಾಹವು ನ್ಯಾಯಬದ್ಧವೆಂದು ತೀರ್ಮಾನವಾಯಿತು. ಹೀಗೆ ಸಮಾಜ ಸಂಘಟನೆಯು ನಡೆಯಿತು ಆದರೆ ಪೇಟ್ರೀಷಿಯನ್ನರು ಜನಗಣನೆ (ಸೆನ್ಸಸ್) ಮಾಡುವ ಮತ್ತು ಸೆನೇಟಿನ ಮೆಂಬರುಗಳ ಪಟ್ಟಿಯನ್ನು ತಯಾರಿಸುವ "ಸೆನ್ಸಾರ"ರೆಂಬ ಇಬ್ಬರು ಪೇಟ್ರೀಷಿಯರ್ಸ ಅಧಿಕಾರಿಗಳನ್ನು ಐದು ವರ್ಷಕ್ಕೊಮ್ಮೆ ಚುನಾಯಿಸುವ ಹಕ್ಕನ್ನು ಪಡೆದರು. ಪ್ಲಿಬಿಯನ್ನರು ತಮ್ಮ ಕಮಿಷಿಯ ಟ್ರಿಬ್ಯೂಟ ಸಭೆಯಿಂದ ಕಾನ್ಸುಲರ್ ಟ್ರಿಬ್ಯೂನರನ್ನು "ಕ್ವೆಸ್ಟಾರ"ರೆಂಬ ಹಣಕಾಸಿನ ಅಧಿಕಾರಿಗಳನ್ನು ನೇಮಿಸುವ ಹಕ್ಕು ಪಡೆದರು ಕ್ರಿ.ಪೂ ೪೨೧ರಲ್ಲಿ ಈ ಕ್ವೆಸ್ಟಾರರ ಸಂಖ್ಯೆಯು ದ್ವಿಗುಣಿತವಾಯಿತು ಮತ್ತು ಈ ಪದವಿಗಳಿಗೆ ಪ್ಲೆಬಿಯನ್ನರು ಅರ್ಹರು.

ಕ್ರಿ ಪೂ ೩೬೭ ರಲ್ಲಿ "**ಲೈಸೀನಿಯರ್ಸ ರೊಗೇಷನ್ಸ್**" ಎಂಬ ಕಾನೂನುಗಳು ಜಾರಿಗೆ ಬಂದವು ಇವು ರಾಜಕೀಯ ಮತ್ತು ಆರ್ಥಿಕ ಸುಧಾರಣೆಮಾಡಿದವು. **ರಾಜಕೀಯ** (೧) ಇನ್ನುಮುಂದೆ ಪ್ಲಿಬಿಯನ್ನರು ಕೇವಲ ಕಾನ್ಸುಲರ್ ಟ್ರೈಬ್ಯೂನರನ್ನಲ್ಲವೆ ಕಾನ್ಸಲ್ಗಳನ್ನೇ ಚುನಾಯಿಸಬಹುದು. (೨) ಒಬ್ಬ ಕಾನ್ಸಲ್ಲಾದರೂ ಪ್ಲಿಬಿಯನ್ ವರ್ಗದವನಾಗಿರಬೇಕು. (೩) ಅರ್ಚಕರಲ್ಲಿ ಅರ್ಧಮಂದಿ ಪ್ಲಿಬಿಯನ್ನರಾಗಿರಬೇಕು. (೪) ಪೇಟ್ರೀಷಿಯನ್ನರು "ಪ್ರೇಟಾರ್ ಅರ್ಬನಸ್" ಎಂಬ ನ್ಯಾಯಾಧೀಶನನ್ನು ಚುನಾಯಿಸಬಹುದು. (೫) ಪೇಟ್ರೀಷಿಯನ್ನರು ತಮ್ಮ ವರ್ಗ

ದಿಂದ ಇನ್ನಿಬ್ಬರು "ಎಡೈಲರನ್ನು" ನೇಮಿಸಬೇಕೆಂದು ಯತ್ನಿಸಿದರು ಆದರೆ ಈ ಪ್ರಯತ್ನವು ಸಫಲವಾಗಲಿಲ್ಲ. (೬) ಪವಿತ್ರವಸ್ತುಗಳ ರಕ್ಷಣೆಗಾಗಿ "ಡೆಸೆಂವಿರೈ ಸಾಕ್ರೋರಂ" ಎಂಬ ಹತ್ತು ಅಧಿಕಾರಿಗಳು ನೇಮಿತರಾಗಿ ಅವರಲ್ಲಿ ಐದುಜನ ಪ್ಲಿಬಿಯನ್ನರಾಗಿರಬೇಕು. (೭) ಕಮಿಷಿಯ ಟ್ರಿಬ್ಯೂಟಸಭೆಯು ಮಾಡಿದ ಕಾನೂನುಗಳು ರಾಜ್ಯದಲ್ಲಿ ಎಲ್ಲರಮೇಲೂ ವ್ಯಾಪ್ತಿಹೊಂದಿರಬೇಕು **ಆರ್ಥಿಕ** (೧) ಪ್ಯಾಟ್ರೇಷಿಯನ್ನರು ಭಾರಿ ಜಮಿನ್ದಾರರಾಗಿ ಪ್ಲಿಬಿಯನ್ನರಿಗೆ ಭೂಮಿಗಳನ್ನೇ ಕೊಡುತ್ತಿರಲಿಲ್ಲವಾದ್ದರಿಂದ ಯಾವ ನಾಗರಿಕನೂ ೫೦೦ ಜುಗೇರ (೩೦೦ ಎಕರೆ)ಗಿಂತ ಅಧಿಕವಾಗಿ ಭೂಮಿಯನ್ನು, ೧೦೦ ಪಶು, ೫೦೦ ಕುರಿಗಳಿಗಿಂತ ಅಧಿಕವಾಗಿ ಪಡೆಯಲು ಅವಕಾಶವಿಲ್ಲದಂತೆ ಕಾನೂನು ಮಾಡಲಾಯಿತು. (೨) ಎಲ್ಲ ಜಮಿನ್ದಾರರೂ ಸಾಗುವಳಿ ಕೆಲಸದಲ್ಲಿ ಗುಲಾಮರಲ್ಲದೆ ಕೂಲಿಕೊಟ್ಟು ಆಳುಗಳನ್ನು ನೇಮಿಸಿಕೊಳ್ಳಬೇಕು. (೩) ಸಾಲದ ಹೊರೆಯನ್ನು ಕಡಮೆಮಾಡಲು ಮೂಲಧನದಲ್ಲಿ ಅದುವರೆಗೂ ಸಲ್ಲಿಸಿದ ಬಡ್ಡಿಯನ್ನು ಖೋತಹಾಕಿಕೊಂಡು ಉಳಿದಿದ್ದು ಮೂರುವರ್ಷಗಳಲ್ಲಿ ತೀರಿಸುವಂಥ ಕಾನೂನು ಮಾಡಲ್ಪಟ್ಟಿತು.

## ನಾಲ್ಕನೆಯ ಘಟ್ಟ (ಕ್ರಿ.ಪೂ. ೩೫೬–೨೮೭)

ಮುಂದೆ ಎಂಬತ್ತುವರ್ಷಗಳ ಹೋರಾಟದಿಂದ ಪ್ಲಿಬಿಯನ್ನರು ಅನೇಕ ಜಯಗಳನ್ನು ಪಡೆದರು. ಕ್ರಿ ಪೂ. ೩೫೬ ರಲ್ಲಿ ಒಬ್ಬ ಪ್ಲಿಬಿಯನ್ನನು "ಡಿಕ್ಟೇಟರ್"ಆದನು. ಕ್ರಿ ಪೂ. ೩೫೧ ರಲ್ಲಿ ಸೆನ್ಸಾರ್ ಪದವಿಯು, ೩೩೬ ರಲ್ಲಿ ಪ್ರೇಟಾರ್ ಅಧಿಕಾರವು ಸಿಕ್ಕಿದವು ಕ್ರಿ ಪೂ. ೩೦೦ ರಲ್ಲಿ "ಲೆಕ್ಸ್ ಆಗ್ಯುಲಿನ" ಎಂಬ ಕಾನೂನಿನಿಂದ ಎಲ್ಲ ಅಧಿಕಾರಗಳೂ ಸಿಕ್ಕಿದವು ಕ್ರಿ ಪೂ. ೩೧೨–೩೦೮ ರಲ್ಲಿ ಅಪ್ಪಿಯಸ್ ಕ್ಲಾಡಿಯಸ್ಸನು ಪ್ಲೆಬಿಯನ್ನರನ್ನು ಸೆನೇಟಿಗೆ ಸೇರಿಸಲು ಯತ್ನಿಸಿದನು. ಆದರೆ ಇದು ಜಾರಿಗೆ ಬರಲಿಲ್ಲ. ಪ್ರತಿನಿಧಿಸಭೆಗಳು ಹೆಚ್ಚು ಪ್ರಬಲವಾದವು. ಪೇಟ್ರೇಷಿಯನ್ನರು ಕಾನೂನುಗಳಿಗೆ ಅನುಮೋದನೆಮಾಡುವ ಹಕ್ಕು

ಕಡಿಮೆ ಮಾಡಲ್ಪಟ್ಟಿತು. ಕ್ರಿ.ಪೂ ೩೩೯ ರಲ್ಲಿ ಪಬ್ಲಿಯಸ್ ಫೈಲೊ ಕಮಿಷಿಯ ಸೆಂಚುರಿಯಾಟ ಸಭೆಯಲ್ಲಿ ಸೂಚಿಸಿದ ಕಾನೂನುಗಳಿಗೆ ಮುಂಚಿತವಾಗಿಯೇ ಪೇಟ್ರೀಷಿಯನ್ನರು ಅನುಮತಿಕೊಡಬೇಕೆಂದು ಕಾನೂನು ಮಾಡಿದನು. ಕ್ರಿ ಪೂ. ೩೦೪ರಲ್ಲಿ ಫ್ಲೇವಿಯಸ್ಸನು ನ್ಯಾಯ ತೀರ್ಪನ್ನು ಮಾಡುವರೀತಿ ಮತ್ತು ಸರ್ಕಾರ ಕೆಲಸ ನಡೆಯುವ ದಿನಗಳ (ಫಾಸ್ಟೈ) ಪಂಚಾಂಗವನ್ನು ಪ್ರಚುರಪಡಿಸಿದನು ಕ್ರಿ ಪೂ. ೩೯೭ ರಲ್ಲಿ ಪಾಂಟಿಫಿಸೆಸ್ ಮತ್ತು ಆಗರ್ಸ್ ಎಂಬ ಪುರೋಹಿತರೆಲ್ಲರೂ ಪ್ಲೆಬಿಯನ್ನರಾಗಬಹುದೆಂದು ನಿರ್ಣಯವಾಯಿತು. ಕೊನೆಗೆ ಕ್ರಿ.ಪೂ ೨೮೭ ರಲ್ಲಿ **ಹಾರ್ಟೆನ್ಸಿಯನ್ ಕಾನೂನಿನಿಂದ** ಪ್ರತಿನಿಧಿ ಸಭೆಗಳು ಸಂಪೂರ್ಣ ಸ್ವಾತಂತ್ರ್ಯ ಪಡೆದು ಪ್ಲಿಬಿಯನ್ನರ ಸರ್ವಾಧಿಕಾರವು ಅಂಗೀಕೃತವಾಯಿತು ಹೀಗೆ ಪೇಟ್ರೀಷಿಯನ್ ಪ್ಲೀಬಿಯನ್ ಕೋಮುಗಳ ಹೋರಾಟವು ಸಂಪೂರ್ಣ ಪ್ರಜಾಪ್ರಭುತ್ವದಲ್ಲಿ ಕೊನೆಗೊಂಡಿತು

ಈ ಹೋರಾಟದ ಪರಿಣಾಮವಾಗಿ ಪ್ರಾಚೀನ ಪೇಟ್ರೀಷಿಯನ್ ವಂಶಗಳು ನಗರದ ಸಮಾಜದಲ್ಲಿ ಗೌರವಹೊಂದಿದ್ದರೂ ಇತರ ಹಕ್ಕುಗಳನ್ನು ಕಳೆದುಕೊಂಡರು. ಪ್ಲಿಬಿಯನ್ನರು ಐಶ್ವರ್ಯದಲ್ಲೂ ಸಂಖ್ಯೆಯಲ್ಲೂ ಹೆಚ್ಚಿ ಪೇಟ್ರೀಷಿಯನ್ನರೊಡನೆ ವಿವಾಹಸಂಬಂಧ ಬೆಳೆಸಿದರು. ಆದರೂ ಕೆಲವು ಸಾಮಾಜಿಕ ವ್ಯತ್ಯಾಸಗಳು ಇದ್ದವು ಯಾವ ಪೇಟ್ರೀಷಿಯನ್ನನು ಒಂದು ಪ್ಲಿಬಿಯನ್ ಗುಂಪನ್ನು ಸೇರದಿದ್ದರೆ ಟ್ರೈಬ್ಯೂನ್ ಆಗಲು ಅವಕಾಶವಿರಲಿಲ್ಲ ಸಂಪೂರ್ಣ ಪ್ರಜಾಪ್ರಭುತ್ವವು ಬಂದಿತೆಂದು ಹೇಳುವದಕ್ಕೂ ಆಗದು ಪ್ಲಿಬಿಯನ್ನರಲ್ಲೇ ಧನಿಕರು ಬಡವರೆಂಬ ವಿಭಾಗಗಳಾಗಿ ಪುನಃ ಇವರಲ್ಲಿ ಘರ್ಷಣೆಯುಂಟಾಗಿ ಅಂತಃಕಲಹಗಳು ಹೆಚ್ಚಿದವು. ಇದರ ಪರಿಣಾಮವಾಗಿ ಸೀಸರರ ನಿರಂಕುಶಾಧಿಕಾರವು ಸ್ಥಾಪಿತವಾಯಿತು.

# ಅಧ್ಯಾಯ ೪

ವರ್ಗಗಳ ಹೋರಾಟವು ನಡೆಯುತ್ತಿದ್ದ ಇನ್ನೂರು ವರ್ಷಗಳಲ್ಲಿ ರೋಮ್ ನಗರವು ಇಟಲಿಯಲ್ಲೆಲ್ಲ ರಾಜ್ಯವನ್ನು ವಿಸ್ತರಿಸುತ್ತಿತ್ತು. ಈ ವಿಸ್ತರಣೆಯಲ್ಲಿ **ನಾಲ್ಕು ಮುಖ್ಯ ಘಟ್ಟಗಳಿವೆ.** ೧ ಕ್ರಿ.ಪೂ ೫೦೭–೩೯೦ (ಗಾಲರು ರೋಮ್‌ನಗರವನ್ನು ಆಕ್ರಮಿಸಿದುದು). ೨. ಕ್ರಿ ಪೂ. ೩೪೯–೨೯೦ ಸಾಮ್ನೈಟ್ ಯುದ್ಧಗಳು. ೩. ಕ್ರಿ.ಪೂ. ೨೮೯–೨೭೧ ಸಿಸಿಲಿ ಮತ್ತು ದಕ್ಷಿಣ ಇಟಲಿಯಲ್ಲಿ ಪೈರ್ಹಸ್‌ನೊಡನೆ ಯುದ್ಧ. ೪. ಕ್ರಿ.ಪೂ. ೨೭೫–೨೬೬ ರೂಬಿಕನ್ ನದಿ ದಕ್ಷಿಣಭಾಗದ ಎಲ್ಲ ಇಟಲಿ ಆಕ್ರಮಣ.

## ಪ್ರಥಮ ಘಟ್ಟ (ಕ್ರಿ.ಪೂ. ೫೦೭–೩೯೦)

ಎಟ್ರುಸ್ಕನ್ ರಾಜರನ್ನು ಬಹಿಷ್ಕರಿಸಿ ಪ್ರಜಾಪ್ರಭುತ್ವ ಸ್ಥಾಪನೆಯಾದ ಕೂಡಲೆ ಸುತ್ತಮುತ್ತಲಿದ್ದ ಸಾಬೈನ್ ಮತ್ತು ವಾಲ್ಷಿಯನ್ ಜನಾಂಗಗಳು ರೋಮಿಗೆ ಮುತ್ತಿಗೆ ಹಾಕಿದರು. ಇವರೊಡನೆ ರೋಮನ್ನರು ೧೫೦ ವರ್ಷ ಹೋರಾಡಬೇಕಾಯಿತು. ಸಾಬೈನರೂ, ಈಕ್ವೈ ಮತ್ತು ವಾಲ್ಷೈಗುಡ್ಡನಾಡಿನ ಜನರು ಬಯಲು ಮತ್ತು ತೀರ ಪ್ರದೇಶವನ್ನೆಲ್ಲ ಆಕ್ರಮಿಸಿಕೊಂಡು ಬಂದರು. ಕ್ರಿ.ಪೂ. ೪೯೩ ರಲ್ಲಿ ಲ್ಯಾಟಿನರನ್ನು ರೆಜಿಲಸ್ ಸರೋವರದ ಬಳಿ ಸೋಲಿಸಿದ ಮೇಲೆ ರೋಮನ್ನರು ಲ್ಯಾಟಿನ್ನರೊಡನೆ ಒಪ್ಪಂದಮಾಡಿಕೊಂಡು ಅವರಿಗೆ ಸಮವಾದ ಹಕ್ಕುಗಳನ್ನು ಕೊಟ್ಟರು. ಅನಂತರ ಕ್ರಿ.ಪೂ. ೪೮೬ ರಲ್ಲಿ ಟ್ರೀರಸ್ ಕಣಿವೆಯಲ್ಲಿದ್ದ ಹೆರ್ನ್ನಿಸೈ ಎಂಬವರೊಡನೆಯೂ ಕರಾರು ಮಾಡಿಕೊಂಡು ಒಂದು ಒಕ್ಕೂಟವನ್ನು ನಿರ್ಮಿಸಿದರು. ಈ ಒಕ್ಕೂಟವು ಕ್ರಿ ಪೂ. ೩೪೦ ವರೆಗೂ ನಡೆದುಬಂದಿತು. ಆದರೂ ಕ್ರಿ.ಪೂ. ೪೪೯ ವರೆಗೂ ಸಾಬೈನ್, ಈಕ್ವೈ ಮತ್ತು ವಾಲ್ಷೈ ಜನರ ದಾಳಿಗಳು ನಡೆಯುತ್ತಲೇ ಇದ್ದವು. ಕ್ರಿ.ಪೂ. ೪೯೯–೩೯೦ ರಲ್ಲಿ ದಕ್ಷಿಣ ಎಟ್ರೂರಿಯ ಮತ್ತು ಟೈಬರ್ ಪಾತ್ರದಲ್ಲಿ ವೈ ಎಂಬವರನ್ನು ಕ್ರಿ.ಪೂ. ೩೯೬ ರಲ್ಲಿ ಗೆದ್ದು

ರೋಮನ್ನರು ಪ್ರಬಲರಾದರು. ಕ್ರಿ.ಪೂ. ೪೪೬ ರಲ್ಲಿ ಈಕ್ವೈ ಜನರು ರೋಮಿಗೆ ಮುತ್ತಿಗೆ ಹಾಕಿದ್ದರು ಆದರೆ ಕ್ರಿ.ಪೂ. ೪೧೮ ರಲ್ಲಿ ಇವರನ್ನು ಪೂರ್ತಿ ಸೋಲಿಸಲಾಯಿತು. ಕ್ರಿ.ಪೂ. ೩೯೩ ರಲ್ಲಿ ವಾಲ್ಸ್ಕೈ ಜನರು ಹತೋಟಿಗೆ ಬಂದರು ಉತ್ತರದಲ್ಲಿದ್ದ ಎಟ್ರಸ್ಕನ್ನರನ್ನು ಕೆಲ್ಟ್ (ಗಾಲ್) ಗ್ರೀಕ್ ಮತ್ತು ಸಾಮ್ನೈಟ್ ಜನರು ಗೆದ್ದರು. ಮತ್ತು ಗ್ರೀಕರು ಕ್ಯಾಪುವ ಪಟ್ಟಣವನ್ನು ಕ್ರಿ.ಪೂ. ೪೨೩ ರಲ್ಲಿ ವಶಮಾಡಿಕೊಂಡರು. ಕ್ರಿ.ಪೂ. ೩೯೦ ರಲ್ಲಿ ಉತ್ತರದಿಂದ ಗಾಲ್ ಅಥವಾ ಕೆಲ್ಟ್ ಎಂಬವರು ಹಟಾತ್ತಾಗಿ ರೋಮಿಗೆ ಧಾಳಿಮಾಡಿ ರೋಮನ್ನರನ್ನು "ಅಲ್ಲಿಯ" ಎಂಬ ಸ್ಥಳದಲ್ಲಿ ಸೋಲಿಸಿ ರೋಮ್ ನಗರಕ್ಕೆ ಏಳು ತಿಂಗಳು ಮುತ್ತಿಗೆ ಹಾಕಿದರು. ರೋಮನ್ನರು ಇವರಿಗೆ ಭಾರಿ ಲಂಚವನ್ನು ಕೊಟ್ಟು ಹಿಂತಿರುಗುವಂತೆ ಮಾಡಿದರು. ರೋಮನ್ನರು ಪ್ರಯಾಸಪಟ್ಟು ರೋಮ್ ನಗರವನ್ನು ಪುನಃ ಸುಧಾರಿಸಿ ಕೋಟೆ-ಕೊತ್ತಳ ಕಟ್ಟಿ ದಕ್ಷಿಣ ಎಟ್ರೂರಿಯ ಉತ್ತರದಲ್ಲಿದ್ದ ಎಟ್ರಸ್ಕನ್ನರ ಧಾಳಿಗೆ ಸಿಕ್ಕದಂತೆ ವ್ಯವಸ್ಥೆ ಮಾಡಿದರು

## ದ್ವಿತೀಯ ಘಟ್ಟ (ಕ್ರಿ.ಪೂ. ೩೮೯–೨೯೦)

ಗಾಲರ ಹಾವಳಿಯಿಂದ ಪಾರಾದ ರೋಮನ್ನರು ನವಚೈತನ್ಯವನ್ನು ಹೊಂದಿ ಕ್ರಿ ಪೂ. ೩೮೭ ರಲ್ಲಿ ವೈಜನರನ್ನು ಸೋಲಿಸಿ ಅವರ ಒಗ್ಗಟ್ಟನ್ನು ಮುರಿದು ನಾಲ್ಕು ಪಂಗಡಗಳಾಗಿ ವಿಂಗಡಿಸಿದರು. ಕ್ರಿ.ಪೂ. ೩೫೩ ರಲ್ಲಿ ದಕ್ಷಿಣ ಎಟ್ರೂರಿಯ ವಶವಾಯಿತು ಕ್ರಿ.ಪೂ. ೩೮೯ ರಲ್ಲಿ ಈಕ್ವೈ ಜನರೂ ಶರಣಾಗತರಾದರು ಕ್ಯಾಮಿಲ್ಲಸ್ ಎಂಬ ರೋಮನ್ ಸೇನಾಪತಿಯು ಕ್ರಿ ಪೂ. ೩೮೯ ರಲ್ಲಿ ವಾಲ್ಸ್ಕೈ ಜನರನ್ನು ಪೂರ್ತಿ ಸೋಲಿಸಿದನು. ಲ್ಯಾಟಿನ್ನರ ವಲಸೆ (ಕಾಲೊನಿ) ಗಳು ಕ್ರಿ.ಪೂ. ೩೮೫ ರಲ್ಲಿ ಸಾಟ್ರಿಕಂ, ಕ್ರಿ ಪೂ. ೩೮೨ ರಲ್ಲಿ ಸೇಲಿಯ, ಕ್ರಿ.ಪೂ. ೩೫೮ ರಲ್ಲಿ ಎರಡು ಹೊಸ ಜನಾಂಗಗಳು ನಿರ್ಮಿತವಾದವು. ಕ್ರಿ.ಪೂ. ೩೮೩–೩೫೮ ರಲ್ಲಿ ಟಸ್ಕ್ಯುಲಂ ಮತ್ತು ಹೆರ್ನಿಸೈ ಜನರು ಅಧೀನರಾದರು. ಈ ಸಮಯದಲ್ಲಿ

ರೋಮನ್ನರು ಸಾಮ್ನೈಟರೊಡನೆ ಕ್ರಿ.ಪೂ. ೩೮೪ ರಲ್ಲೂ, ಕಾರ್ಥೇಜಿನೊಡನೆ ಕ್ರಿ.ಪೂ. ೩೪೮ ರಲ್ಲೂ ಕರಾರು ಮಾಡಿಕೊಂಡರು. ಕ್ರಿ.ಪೂ. ೩೪೩ ರಲ್ಲಿ ರೋಮನ್ನರು ಆಲ್ಪನ್ ಪರ್ವತದವರೆಗೂ ವ್ಯಾಪಿಸಿ ಸಮುದ್ರ ತೀರದಲ್ಲಿ ವಲಸೆಗಳನ್ನು ಸ್ಥಾಪಿಸಿದ್ದರು.

## ಸಾಮ್ನೈಟ್ ಯುದ್ಧಗಳು (ಕ್ರಿ.ಪೂ. ೩೪೩–೨೯೦)

ಮೊದಲನೆ ಯುದ್ಧ (೩೪೩–೪೧) ಲ್ಯಾಟಿನ್ ಯುದ್ಧ, ಎರಡನೆ ಸಾಮ್ನೈಟ್ ಯುದ್ಧ (೩೨೭–೩೦೪), ಮೂರನೆಯ ಯುದ್ಧ (೨೯೮–೨೯೦).

**ಕಾರಣಗಳು:** ಸಾಮ್ನೈಟರು ಸಾಬಿಲ್ಲೈನ್ ಜನಾಂಗಗಳಿಗೆ ಸೇರಿದವರು. ಕಾಂಪೇನಿಯ ಬಯಲ್ನಾಡಿನಲ್ಲಿದ್ದ ಗ್ರೀಕರ ಕ್ಯಾಪುವ ಮತ್ತು ಕ್ಯೂಮೆನಗರಗಳನ್ನು ೪೨೩–೪೨೦ ರಲ್ಲಿ ವಶಮಾಡಿಕೊಂಡಿದ್ದರು. ಹತ್ತಿರದಲ್ಲಿದ್ದ ಟಿಯಾನಂ ಎಂಬ ಪಟ್ಟಣದವರು ಇವರನ್ನು ಎದುರಿಸಲು ಲ್ಯಾಟಿನ್ನರ ಸಹಾಯವನ್ನು ಕೋರಿದರು ಆದುದರಿಂದ ರೋಮನ್ನರು ಕ್ರಿ ಪೂ. ೩೪೩ ರಲ್ಲಿ ಸಾಮ್ನೈಟರ ಮೇಲೆ ಯುದ್ಧ ಘೋಷಣೆ ಮಾಡಬೇಕಾಯಿತು. ಆದರೂ ಇತರ ಯುದ್ಧಗಳು ನಡೆಯುತ್ತಿದ್ದುದರಿಂದ ಕ್ರಿ.ಪೂ ೩೪೧ ರಲ್ಲಿ ಕರಾರುಮಾಡಿಕೊಂಡರು. ಸಾಮ್ನೈಟರು ಬಯಲ್ನಾಡನ್ನು ಬಿಟ್ಟು ಹದಿನೈದು ವರ್ಷ ಶಾಂತರಾಗಿದ್ದರು. ಇದರಿಂದ ಕ್ಯಾಂಪೇನಿಯದಲ್ಲಿ ಲ್ಯಾಟಿನ್ನರ ಮೇಲೆ ರೋಮನ್ನರ ಅಧಿಕಾರವು ಅಧಿಕವಾಯಿತು.

ಇದನ್ನು ಪ್ರತಿಭಟಿಸಲು ಲ್ಯಾಟಿನ್ನರು ಕ್ರಿ.ಪೂ. ೩೪೦–೩೩೮ ರಲ್ಲಿ ಕ್ಯಾಂಪೇನಿಯ ಜನರ ಸಹಾಯಪಡೆದು ರೋಮಿನಮೇಲೆ ಯುದ್ಧವನ್ನಾರಂಭಿಸಿದರು. ರೋಮನ್ನರು ವೆಸೇರಿಸ್, ಟ್ರೈಫೆರ್ನಂ ಮತ್ತು ಪೆಡಂ ಎಂಬ ಕದನಗಳಲ್ಲಿ ಲ್ಯಾಟಿನ್ನರನ್ನು ಸೋಲಿಸಿದರು. ಪ್ರಾಚೀನ ಲ್ಯಾಟಿನ್ ಒಕ್ಕೂಟವನ್ನು ವಜಾಮಾಡಿ ರೋಮನ್ನರು ಲ್ಯಾಟಿನ್

ಜನರನ್ನು ಪಂಗಡಗಳಾಗಿ ವಿಭಾಗಿಸಿ ಇವು ಒಗ್ಗಟ್ಟಾಗದಂತೆ ಮಾಡಿದರು. ಈ ಪಂಗಡಗಳ ಅಂತರ್ವಿವಾಹ (ಕನ್ಯೂಬಿಯಂ) ವ್ಯಾಪಾರ (ಕಮರ್ಸಿಯಂ) ಹಕ್ಕುಗಳನ್ನು ಕಿತ್ತುಕೊಂಡರು. ಲ್ಯಾಟಿನ್ನರ ಒಕ್ಕೂಟದ ಸಭೆಗಳು ವಜಾಮಾಡಲ್ಪಟ್ಟವು ಪ್ರತಿಯೊಂದು ಪಂಗಡವು ರೋಮಿನೊಡನೆ ಪ್ರತ್ಯೇಕವಾಗಿ ಒಪ್ಪಂದಮಾಡಿಕೊಂಡಿತು. ಈ ಪಂಗಡದ ಜನರಿಗೆ ರೋಮನ್ ನಾಗರೀಕ ಹಕ್ಕುಗಳೆಲ್ಲ ಕೊಡಲ್ಪಟ್ಟರೂ ವಿದೇಶೀಯ ವ್ಯವಹಾರಗಳಲ್ಲಿ ಸ್ವಾತಂತ್ರ್ಯವಿರಲಿಲ್ಲ. ಹೀಗೆ "ಭೇದಿಸಿ ಆಳು" ಎಂಬ ರಾಜಕೀಯ ತತ್ತ್ವವು ಸ್ಥಾಪಿತವಾಯಿತು. ಕೆಲವು ಲ್ಯಾಟಿನ್ ಪಟ್ಟಣಗಳು ಸಂಪೂರ್ಣವಾಗಿ, ಮತ್ತೆ ಕೆಲವು ಸ್ವಲ್ಪಾಂಶಮಾತ್ರ ರೋಮನ್ ನಾಗರೀಕ ಹಕ್ಕನ್ನು ಪಡೆದವು. ಲ್ಯಾಟಿನ್ನರ ಭೂಮಿಗಳು ರೋಮನ್ನರ ವಶವಾದವು. ಅಲ್ಲಿ ರೋಮನ್ ಜನರು ವಲಸೆಮಾಡಿದರು. ಲ್ಯಾಟಿನ್ನರು ಬಲವಂತವಾಗಿ ಸೈನ್ಯದಲ್ಲಿ ಸೇರಿಸಲ್ಪಟ್ಟರು ಕ್ರಿ. ಪೂ. ೩೩೮-೩೩೪ರಲ್ಲಿ ಲ್ಯಾಟಿಯಂ ವ್ಯವಸ್ಥೆಯಾಗಿ ಫ್ರಜೆಲ್ಲ ಮತ್ತು ಕಾಲಿಸ್ ಎಂಬ ಸ್ಥಳಗಳಲ್ಲಿ ಸಾಮ್ನೈಟರನ್ನು ಎದುರಿಸಲು ಎರಡು ಹೊಸ ವಲಸೆಗಳು ನಿರ್ಮಿತವಾದವು.

## ಎರಡನೆಯ ಸಾಮ್ನೈಟ್ ಯುದ್ಧ (ಕ್ರಿ. ಪೂ. ೩೨೭-೩೦೪)

ನೇಪಲ್ಸ್ ಬಳಿಯಲ್ಲಿದ್ದ ಪೆಲಿಯೋಪಾಲಿಸ್(ಹಳೆಯನಗರ)ಎಂಬ ಗ್ರೀಕರಪಟ್ಟಣವು ರೋಮನ್ನರಮೇಲೆ ಧಾಳಿ ಮಾಡಿದ್ದಿತು. ಸಾಮ್ನೈಟರು ಇದರಲ್ಲಿ ಭಾಗವಹಿಸಿದ್ದರು. ಆದ್ದರಿಂದ ಎರಡನೆಯ ಸಾಮ್ನೈಟ್ ಯುದ್ಧವು ಆರಂಭವಾಯಿತು. ಉತ್ತರದ ಜನಾಂಗಗಳೊಡನೆ ರೋಮನ್ನರು ತಾಟಸ್ಥ್ಯ ಒಪ್ಪಂದಗಳನ್ನು ಮಾಡಿಕೊಂಡರು ಆದರೂ ಕ್ರಿ.ಪೂ. ೩೨೧ರಲ್ಲಿ **ಕಾಡೈನ್ ಫೋರ್ಕ್ಸ್** ಎಂಬ ಕದನದಲ್ಲಿ ರೋಮನ್ನರು ಸೋತು ಕ್ರಿ.ಪೂ ೩೧೮ರಲ್ಲಿ ಎರಡು ವರ್ಷ ತಾತ್ಕಾಲಿಕ ಕರಾರನ್ನು ಮಾಡಿಕೊಳ್ಳಬೇಕಾಯಿತು ರೋಮನ್ನರು ಅಪೂಲಿಯ ಎಂಬ ಸಾಮ್ನಿಯಂ ಹಿಂಭಾಗದಲ್ಲಿದ್ದ ಪ್ರಾಂತವನ್ನು ವಶಮಾಡಿಕೊಂಡು

ಸಾಮ್ನೈಟರನ್ನು ಸುತ್ತುಗಟ್ಟಲು ಯತ್ನಿಸಿದರು. ಕ್ರಿ.ಪೂ. ೩೧೬ ರಲ್ಲಿ ಸಾಮ್ನೈಟರು ಈ ವ್ಯೂಹದಿಂದ ತಪ್ಪಿಸಿಕೊಳ್ಳಲು ಯುದ್ಧವನ್ನಾರಂಭಿಸಿದರು ರೋಮನ್ನರು ಕ್ಯಾಂಪೇನಿಯ ದಂಗೆಗಳನ್ನಡಗಿಸಿ, ವಯಾ ಅಪ್ಪಿಯಾ ಎಂಬ ರಾಜಮಾರ್ಗವನ್ನು ನಿರ್ಮಿಸಿ ನೋಲ ಪಟ್ಟಣವನ್ನು ವಶಮಾಡಿಕೊಂಡರು ಕ್ರಿ ಪೂ. ೩೧೧ ರಲ್ಲಿ ಸಾಮ್ನೈಟರು ಎಟ್ರಸ್ಕನ್ನರೊಡರೆ ಸೇರಲು ಯತ್ನಿಸಿದರು. ಆದರೆ ರೋಮನ್ನರು ಎಟ್ರಸ್ಕನ್ನರನ್ನು ೩೧೯ ರಲ್ಲಿ **ವಾಡಿಮೋನಿಯನ್ ಸರೋವರದ** ಬಳಿಯಲ್ಲಿ ಸೋಲಿಸಿ. ೩೦೫ ರಲ್ಲಿ ಸಾಮ್ನಿಯಂ ಪ್ರವೇಶಿಸಲು ಸಾಮ್ನೈಟರು ಇಪ್ಪತ್ತೆರಡು ವರ್ಷ ಹೋರಾಡಿ ರೋಮನ್ನರೊಡನೆ ಕ್ರಿ ಪೂ. ೩೦೪ ರಲ್ಲಿ ಕರಾರು ಮಾಡಿಕೊಂಡರು

ಕ್ರಿ ಪೂ ೩೦೪ ರಿಂದ ೨೯೮ ವರೆಗೆ ಶಾಂತಿಯಿದ್ದಿತು. ಈ ಸಮಯದಲ್ಲಿ ರೋಮನ್ನರು ಏಡ್ರಿಯಾಟಿಕ್ ಸಮುದ್ರದವರೆಗೂ ವ್ಯಾಪಿಸಿ ಹೆರ್ನಿಸೈ, ಈಕ್ವೈ, ಮುಂತಾದವರನ್ನು ತಮ್ಮ ಮಿತ್ರರನ್ನಾಗಿ ಮಾಡಿಕೊಂಡು ಹೊಸ ವಲಸೆಗಳನ್ನು ಸ್ಥಾಪಿಸಿದರು

## ಮೂರನೆಯ ಸಾಮ್ನೈಟ್ ಯುದ್ಧ (ಕ್ರಿ.ಪೂ. ೨೯೮–೨೯೦)

ಕ್ರಿ ಪೂ ೨೯೮ ರಲ್ಲಿ ಸಾಮ್ನೈಟರು ರೋಮಿನ ಮಿತ್ರರಾದ ಲುಕೇನಿಯನ್ನರ ಮೇಲೆ ಬೀಳಲು ರೋಮನ್ನರು ಸಾಮ್ನಿಯಂ ಪ್ರವೇಶಿಸಿದರು ಸಾಮ್ನೈಟರ ಸಹಾಯಕರಾಗಿದ್ದ ಎಟ್ರಸ್ಕನ್ನರು ಅಧಿಕವಾದ ದಂಡವನ್ನು ತೆತ್ತು ಕ್ರಿ.ಪೂ. ೩೦೮ ರಲ್ಲಿ ಒಪ್ಪಂದಮಾಡಿಕೊಂಡರು. ಆದರೆ ಪುನಃ ೨೯೫ ರಲ್ಲಿ ಸಾಮ್ನೈಟ್, ಕೆಲ್ಟ್ ಮತ್ತು ಎಟ್ರಸ್ಕನ್ನರು ಒಟ್ಟಿಗೆ ರೋಮಿನ ಮೇಲೆ ಬೀಳಲು ರೋಮನ್ ಸೇನಾಪತಿಯಾದ ಕ್ಯೂರಿಯಸ್ ಡೆಂಟಾಟಸ್ ಇವರನ್ನು **ಸೆಂಟಿನಂ** ಕದನದಲ್ಲಿ ಸೋಲಿಸಿದನು ಕೆಲ್ಟರು ಹಿಂತಿರುಗಿದರು. ಎಟ್ರಸ್ಕನ್ನರು ರಾಜಿಮಾಡಿಕೊಂಡರು ಸಾಮ್ನೈಟರು ಮತ್ತೆ ನಾಲ್ಕು ವರ್ಷ ಹೋರಾಡಿ ಕ್ರಿ ಪೂ. ೨೯೦ ರಲ್ಲಿ ರೋಮಿನೊಡನೆ ಕರಾರುಮಾಡಿಕೊಂಡರು. ಇದರಿಂದ ರೋಮನ್ನರ

ಪ್ರಭಾವವು ಕಾಂಪೇನಿಯ, ಅಪೂಲಿಯ, ಲ್ಯುಕೇನಿಯ ಭಾಗಗಳಲ್ಲಿ ವಿಸ್ತರಿಸಿತು.

## ಮೂರನೆಯ ಘಟ್ಟ (ಕ್ರಿ.ಪೂ. ೨೮೯–೨೬೧)

**ಪೈರ್ಹಸ್‌ನೊಡನೆ ಯುದ್ಧ** (ಕ್ರಿ ಪೂ ೨೮೧–೨೬೧). ಇಟಲಿ ದಕ್ಷಿಣತೀರದಲ್ಲಿದ್ದ ಗ್ರೀಕರ ಪಟ್ಟಣಗಳನ್ನು ಸಾಬಿಲ್ಲೈನರು ಮುತ್ತಲು ಗ್ರೀಕರು ರೋಮನ್ನರ ಸಹಾಯ ಕೇಳಿದರು. ರೋಮನ್ನರು ಸಾಬಿಲ್ಲೈನರನ್ನು ಗೆದ್ದು ಲಾಕ್ರೈ, ಕ್ರೋಟಾನ್, ರ್ಹೀಜಿಯಂ, ಥ್ಯೂರೈ ಎಂಬ ಸ್ಥಳಗಳಲ್ಲಿ ದಂಡನ್ನಿಟ್ಟರು. ಪ್ರಾಯಶಃ ಗ್ರೀಕ್ ಪಟ್ಟಣಗಳೆಲ್ಲ ರೋಮನ್ನರ ಆಳಿಕೆಯನ್ನಂಗೀಕರಿಸಿದವು ಆದರೆ ಟಾರೆಂಟಂ ನಗರವು ಇದಕ್ಕೆ ಒಪ್ಪದೆ ಯುದ್ಧವನ್ನಾರಂಭಿಸಿತು ಅದರ ರಾಜನಾದ ಪೈರ್ಹಸ್ಸನು ಅಲೆಕ್ಸಾಂಡರಿನಂತೆ ದಿಗ್ವಿಜಯಮಾಡಬೇಕೆಂಬ ಅಭಿಲಾಷೆಯಿಂದ ಕ್ರಿ.ಪೂ. ೨೮೦ರಲ್ಲಿ ರೋಮನ್ನರನ್ನು **ಸೈರಿಸ್** ನದಿ ಬಳಿ ಸೋಲಿಸಿದನು. ಇತರ ಗ್ರೀಕ್ ಪಟ್ಟಣಗಳೂ ಇವನ ಕಡೆ ಸೇರಿದವು. ಪೈರ್ಹಸ್ಸನು ಕಾರ್ಥೇಜಿನ ಮೇಲೆ ಯುದ್ಧಮಾಡಲು ರೋಮಿನೊಡನೆ ಒಪ್ಪಂದ ಮಾಡಿಕೊಳ್ಳಲು ಯತ್ನಿಸಿದನು. ಆದರೆ ರೋಮಿನ ಸೆನೇಟ್ ಮೊದಲು ಪೈರ್ಹಸ್ಸನು ದಕ್ಷಿಣ ಇಟಲಿಯಿಂದ ಹಿಂತಿರುಗಬೇಕೆಂದು ಕೇಳಿದುದರಿಂದ ಪೈರ್ಹಸ್ಸನು ಯುದ್ಧವನ್ನು ಮುಂದುವರಿಸಿದನು. ಕ್ರಿ.ಪೂ ೨೭೮ ರಲ್ಲಿ ಪೈರ್ಹಸ್ಸನು ರೋಮನ್ನರನ್ನು ಹೆರಾಕ್ಲಿಯ ಮತ್ತು ಅಸ್ಕ್ಯುಲಂ ಯುದ್ಧಗಳಲ್ಲಿ ಸೋಲಿಸಿ ಗ್ರೀಕ್ ಪಟ್ಟಣಗಳಲ್ಲಿ ತನ್ನ ದಂಡನ್ನು ಬಿಟ್ಟು ಸಿಸಿಲಿಗೆ ಹಿಂತಿರುಗಿದನು. ಸಿಸಿಲಿಯಲ್ಲಿ ಮೆಸ್ಸಾನ್ನ ನಗರದಲ್ಲಿದ್ದ ಮ್ಯಾಮೆರ್ಟೈನರೆಂಬ ಸಿಪಾಯಿಗಳ ದಂಗೆಯನ್ನು ಅಡಗಿಸಿ, ಕಾರ್ಥಜೀನಿಯರನ್ನು ಸಿಸಿಲಿ ಪಶ್ಚಿಮಭಾಗಕ್ಕೆ ಅಟ್ಟಿದನು ಆದರೆ ಕಾರ್ಥಜೀನಿಯನ್ನರು ಆ ಭಾಗವನ್ನು ಪುನಃ ವಶಮಾಡಿಕೊಳ್ಳಲು ಪೈರ್ಹಸ್ಸನು ಕ್ರಿ ಪೂ. ೨೭೬ ರಲ್ಲಿ ಇಟಲಿಗೆ ಹಿಂತಿರುಗಿದನು. ಅವನನ್ನು ರೋಮ್ ಸೇನಾಪತಿಯಾದ ಕ್ಯೂರಿಯಸ್ ಡೆಂಟಾಟಸ್ಸನು **ಬೆನೆವೆಂಟಂ** ಯುದ್ಧದಲ್ಲಿ (೨೫೫)

ಸಂಪೂರ್ಣವಾಗಿ ಸೋಲಿಸಲು ಪೈರ್ಹಸ್ಸನು ಗ್ರೀಸ್‌ದೇಶಕ್ಕೆ ಹೊರಟು ಹೋದನು. ಕ್ರಿ.ಪೂ. ೨೭೨ ರಲ್ಲಿ ಟಾರೆಂಟಂ ೨೭೦ ರಲ್ಲಿ ರ್ಹೀಜಿಯಂ ರೋಮನ್ನರಿಗೆ ಶರಣಾಗತವಾದವು ಕ್ರಿ ಪೂ. ೨೬೯ ರಲ್ಲಿ ಸಾಮ್ನೈಟರನ್ನು ಪೂರ್ತಿ ಸೋಲಿಸಿ ರೋಮನ್ನರು ಏಡ್ರಿಯಾಟಿಕ್ ಸಮುದ್ರದಿಂದ ಸಿಸಿಲಿವರೆಗೂ ಹೊಸ ವಲಸೆ, ನಗರ, ಮುನಿಸಿಪಾಲಿಟಿ ಮುಂತಾದುವನ್ನು ಸ್ಥಾಪಿಸಿದರು.

### ನಾಲ್ಕನೆಯ ಘಟ್ಟ (ಕ್ರಿ.ಪೂ. ೨೭೫-೨೬೬)

ಪೈರ್ಹಸ್ ಪರಾಜಯವಾದನಂತರ ಒಂಭತ್ತು ವರ್ಷದಲ್ಲಿ ರೋಮನ್ನರು ರೂಬಿಕನ್ ನದಿಯ ದಕ್ಷಿಣದಲ್ಲಿರುವ ಎಲ್ಲ ಇಟಲಿ ಭಾಗಗಳನ್ನು ವಶಮಾಡಿಕೊಂಡರು. ಹೀಗೆ ಒಂದು ಸಣ್ಣ ನಗರವಾಗಿದ್ದ ರೋಮ್ ಇಟಲಿದೇಶಕ್ಕೆಲ್ಲ ಸ್ವಾಮಿಯಾಯಿತು.

---

## ಅಧ್ಯಾಯ ೫

### ರೋಮ್ ವಿಸ್ತರಣ ಕಾಲದಲ್ಲಿ ಆಡಳಿತ ವಿಧಾನ

ರೋಮನ್ನರ ರಾಜ್ಯವು ಉತ್ತರದಲ್ಲಿ ರೂಬಿಕನ್‌ನದಿ, ಪಶ್ಚಿಮದಲ್ಲಿ ಆರ್ನೋನದೀಮುಖ, ಪೂರ್ವದಲ್ಲಿ ಎಡ್ರಿಯಾಟಿಕ್ ಸಮುದ್ರ, ಏಸಿಸ್, ದಕ್ಷಿಣದಲ್ಲಿ ಸಿಸಿಲಿವರೆಗೂ ವ್ಯಾಪಿಸಿದ್ದಿತು ರೋಮನ್ ಆಡಳಿತವು ನಿರಂಕುಶವಾಗಿರದೆ ಮಿತ್ರಜನಾಂಗಗಳ ಒಕ್ಕೂಟವಾಗಿತ್ತು. ಆದರೆ ಭೇದೋಪಾಯವನ್ನನುಸರಿಸಿ ರೋಮನ್ನರು ನಗರಗಳಲ್ಲಿ ಉಚ್ಚವರ್ಗದವರಿಗೆ ಅನುಕೂಲಗಳನ್ನು ಕಲ್ಪಿಸಿ ತಮ್ಮ ಪರವಾಗಿ ಮಾಡಿಕೊಳ್ಳುತ್ತಿದ್ದರು. ಅನಾಗರಿಕ ಜನಾಂಗಗಳನ್ನು ಬೇರ್ಪಡಿಸಿ ತಮ್ಮ ಮೇಲೆ ಬೀಳದಂತೆ ಮಾಡಿಕೊಂಡರು. ಕೆಲವೆಡೆಗಳಲ್ಲಿ ನಗರಗಳನ್ನು ಮತ್ತೆ ಕೆಲವು ಸ್ಥಳಗಳಲ್ಲಿ ಜನಾಂಗಗಳನ್ನು ಬಲಪಡಿಸಿದರು. ಲ್ಯಾಟಿನ್

ಜನರಿಗೂ ಇತರ ಇಟಾಲಿಯನ್ನರಿಗೂ ಬಹಳ ವ್ಯತ್ಯಾಸವಿದ್ದಿತು. ಲ್ಯಾಟಿನ್ನರಿಗೆ ಸಮಾನ ಹಕ್ಕುಗಳೂ ಸ್ವಾತಂತ್ರ್ಯವೂ ಇದ್ದವು. ಆದರೆ ವಿದೇಶೀಯ ವ್ಯವಹಾರಗಳಲ್ಲಿ ರೋಮಿಗೆ ಅಧೀನ. ಮಿತ್ರರಲ್ಲಿ ಗ್ರೀಕರಿಗೆ ಹೆಚ್ಚು ಅನುಕೂಲಗಳಿದ್ದವು. ಮಿತ್ರರಾಷ್ಟ್ರಗಳಿಲ್ಲ ಒಳಾಡಳಿತದಲ್ಲಿ ಸ್ವತಂತ್ರವಾಗಿದ್ದುದರಿಂದ ಪ್ರಾಂತಗಳಂತೆ ಕಪ್ಪವನ್ನು ಕೊಟ್ಟು ರೋಮ್ನ ನ್ಯಾಯಾಧೀಶರನ್ನು ನೇಮಿಸಿಕೊಳ್ಳಬೇಕಾಗಿರಲಿಲ್ಲ ವಿದೇಶೀಯ ಸಂಬಂಧಗಳಲ್ಲಿ ರೋಮ್ ಸರ್ವಾಧಿಕಾರ ಪಡೆದು ಯುದ್ಧ ಕಾಲದಲ್ಲಿ ಮಿತ್ರರಾಷ್ಟ್ರಗಳಿಂದ ಸೈನ್ಯವನ್ನು ತರಿಸಿಕೊಳ್ಳುತ್ತಿತ್ತು. ಈ ಸೈನ್ಯಗಳಿಗೆ ರೋಮನ್ನರು ಅಧಿಕಾರಿಗಳಾಗುತ್ತಿದ್ದರು.

ಸುಮಾರು ೨೯೦೦೦೦ ಜನ ಸಂಖ್ಯೆಯುಳ್ಳ ೧೨ ಹೊಸ ಜನಾಂಗಗಳು ಸ್ಥಾಪಿತವಾದವು. ಇವುಗಳಲ್ಲಿ ಮೂರು ವರ್ಗಗಳಿದ್ದವು ೧. ತೀರಪ್ರದೇಶವನ್ನು ರಕ್ಷಿಸಲು ಸ್ಥಾಪಿತವಾದ ರೋಮನ್ನರ ವಲಸೆಗಳು (ಕಾಲೊನಿಯೆ ಸಿವಿಯಂ ರೋಮನೋರಂ). ೨. ಸಂಪೂರ್ಣ ನಾಗರಿಕ ಹಕ್ಕುಗಳುಳ್ಳ ಲ್ಯಾಟಿನ್ ಪಟ್ಟಣಗಳು. ೩. ಪೂರ್ತಿಹಕ್ಕುಗಳಿಲ್ಲದ ಪಟ್ಟಣಗಳು (ಸಿವಿಟಾಸ್ ಸೈನೆ ಸಫ್ರೇಜಿಯೆ). ಇವು ಯುದ್ಧಕಾಲದಲ್ಲಿ ಬೇರೆಬೇರೆ ದಳಗಳಲ್ಲಿ ಕೆಲಸಮಾಡಬೇಕು. ಇದಲ್ಲದೆ ಸಾರ್ವಜನಿಕ ಜಮೀನುಗಳಲ್ಲಿ ರೋಮನ್ ಜನರೂ, ಪ್ರಸ್ಥಭೂಮಿಗಳಲ್ಲಿ ಗ್ರಾಮಿಕರೂ ಇದ್ದರು. ವಲಸೆ (ಕಾಲೊನಿ) ನಗರಗಳು (ಮುನಿಸಿಪಿಯ) ತಮ್ಮ ಸ್ಥಳೀಯ ಸಭೆಗಳನ್ನೂ ಅಧಿಕಾರಿಗಳನ್ನೂ ನೇಮಿಸಿಕೊಳ್ಳುವ ಹಕ್ಕನ್ನು ಹೊಂದಿದ್ದವು. ಆದರೆ ರೋಮ್ ಇವುಗಳ ಆಡಳಿತ ಪದ್ಧತಿಯನ್ನು ಮಾರ್ಪಡಿಸಬಹುದು. ದೌರ್ಜನ್ಯ ವ್ಯವಹಾರಗಳಲ್ಲಿ (ಕ್ರಿಮಿನಲ್ ಕೇಸ್) ರೋಮಿಗೆ ಅಪೀಲು ಮಾಡಬಹುದು. ನ್ಯಾಯ ತೀರ್ಪಿಗಾಗಿ ರೋಮಿನ ಪ್ರೇಟಾರನು ಪ್ರಿಫೆಕ್ಟ್ ಎಂಬ(Prefecti juridicundo) ನ್ಯಾಯಾಧೀಶರನ್ನು ನೇಮಿಸುತ್ತಿದ್ದನು. ಈ ಮುನಿಸಿಪಾಲಿಟಿ ಮತ್ತು ಪ್ರಿಫೆಕ್ಟ್ ವ್ಯವಸ್ಥೆಯೇ ಮುಂದಣ ರೋಮನ್ ಸಾಮ್ರಾಜ್ಯದ ವ್ಯವಸ್ಥೆಗೆ ಪೀಠಿಕೆಯಾಯಿತು.

**ಸೈನ್ಯ**—ಇನ್ನೂರು ವರ್ಷದ ಯುದ್ಧಗಳ ಫಲವಾಗಿ ರೋಮನ್ನರು ಶಾಶ್ವತ ಸೇನೆಯ ಉಪಯೋಗವನ್ನು ಮನಗಂಡರು ಸೇನೆಯು ಬೆಳೆದು ವೇತನ ಪದ್ಧತಿಯೂ ಜಾರಿಗೆ ಬಂದಿತು. ರೋಮನ್ನರ "ಲೀಜಿಯನ್" ಬದಲಾವಣೆಯಾಗಿ ಜಮೀನ್ದಾರರ (assiduus) ನಾಗರಿಕ ಹಕ್ಕುಗಳು ಕಳೆದುಹೋಗುತ್ತ ಬಂದವು. ಹಿಂದೆ ಸೇನಾಪತಿಗಳನ್ನು ನ್ಯಾಯಾಧೀಶರನ್ನಾಗಿಯೂ ಕಾನ್ಸಲ್ಗಳನ್ನಾಗಿಯೂ ಒಂದು ವರ್ಷಕ್ಕೆ ಮಾತ್ರ ನೇಮಿಸುವ ಪದ್ಧತಿ ಇದ್ದಿತು. ಆದರೆ ಯುದ್ಧಕಾಲದಲ್ಲಿ ಅಧಿಕಾರಾವಧಿ ಹೆಚ್ಚಿಸಬೇಕಾಗಿ ಬಂದಿತು. (ಪ್ರೊರೋಗೇಷಿಯೋ ಇಂಪೀರಿಯ್ಯೈ). ಈ ಪದ್ಧತಿಯೇ ಸೀಸರುಗಳ ಕಾಲದಲ್ಲಿ ಪ್ರಜಾಪ್ರಭುತ್ವಕ್ಕೆ ಹಾನಿ ತಂದಿತು ನಗರದ ಅಧಿಕಾರವು ವ್ಯಾಪಿಸಿದಂತೆಲ್ಲ ನಾಗರಿಕರ ಬಲಾತ್ಕಾರ ಸೇನಾ ಕರ್ತವ್ಯವು ಹೆಚ್ಚಿತು ಹದಿನೇಳರಿಂದ ನಲ್ವತ್ತಾರು ವರ್ಷ ವಯಸ್ಸಿನವರನ್ನೆಲ್ಲ ತರಪೇತು ಪಡೆಯಬೇಕಾಗಿದ್ದಿತು. ಲೀಜಿಯನ್ಗಳಿಗೆ ಸಿಪಾಯಿಗಳನ್ನು ಸೇರಿಸಲು ಕಾನ್ಕ್ವಿಸ್ಟಾರ್ಸ್ ಎಂಬ ಜಮಾವಣೆ ಅಧಿಕಾರಿಗಳು ನೇಮಿತರಾದರು ಪ್ರತಿ ಕಾನ್ಸಲಿಸಿಗೂ ಎರಡೆರಡು ಲೀಜಿಯನ್ಗಳಂತೆ ನಾಲ್ಕು ಲೀಜಿಯನ್ಗಳಿದ್ದವು. ಪ್ರತಿ ಲೀಜಿಯನ್ನಿಗೂ ನಾಮಕರಣಮಾಡಿದ ಮತ್ತು ಚುನಾಯಿತರಾದ ಆರು ಸೈನಿಕ ಟ್ರೈಬ್ಯೂನರಿದ್ದರು ಮತ್ತು ಸೆಂಟೂರಿಯನ್ನರೆಂಬ ೬೦ ಅಧಿಕಾರಿಗಳೂ ಇದ್ದರು. ಶಿಪಾಯಿಗಳನ್ನು ವಯಸ್ಸು ಮತ್ತು ಆಸ್ತಿಗನುಸಾರವಾಗಿ ನಾಲ್ಕು ವರ್ಗಗಳನ್ನಾಗಿ (ಹಸ್ತಾಟೈ, ಪ್ರಿನ್ಸಿಪಿಸ್, ಟ್ರೈಯಾರಿಯ್ಯೈ, ರೋರಾರಿಯ್ಯೈ) ವಿಂಗಡಿಸಿದ್ದರು. ಇವರು ಗುರಾಣಿ, ಕತ್ತಿ, ಕವಚ ಮತ್ತು ಶೂಲಗಳಿಂದ ಯುದ್ಧ ಮಾಡುತ್ತಿದ್ದರು

**ನೌಕಾಬಲ**—ಬಹುಕಾಲದವರೆಗೂ ರೋಮನ್ನರಿಗೆ ನೌಕಾಬಲವಿರಲಿಲ್ಲ. ಆಸ್ಟಿಯ ರೇವನ್ನು ಸ್ಥಾಪಿಸಿದ ಮೇಲೆ ಕ್ರಿ.ಪೂ. ೩೩೮ ರಲ್ಲಿ ಯುದ್ಧನೌಕೆಗಳು ನಿರ್ಮಿತವಾದವು. ೩೧೨ ರಲ್ಲಿ ಡ್ಯುಯೋವಿರ್ರೈ ನಾವಲಿಸ್ ಎಂಬ ಅಧಿಕಾರಿಯು, ೩೧೧ ರಲ್ಲಿ ತೀರವನ್ನು ಕಾಯುವುದಕ್ಕೆ ಒಬ್ಬ ಪ್ರಿಫೆಕ್ಟ್ ನೇಮಿತರಾದರು ಕ್ರಿ ಪೂ ೫೮೨ ರಲ್ಲಿ ಫ್ಯೂರಿಯ್ಯೈ

ಮೇಲೆ ಯುದ್ಧ ಮಾಡುವಾಗ ಒಬ್ಬ ಡ್ಯುಯಂವೀರನನ್ನೂ ಹತ್ತು ಯುದ್ಧ ಹಡಗುಗಳನ್ನೂ ಕಳುಹಿಸಲಾಯಿತು. ಆದರೂ ಪ್ಯೂನಿಕ್ ಯುದ್ಧದ ವರೆಗೂ ರೋಮನ್ನರು ನೌಕೆಗಳ ಪ್ರಾಮುಖ್ಯತೆಯನ್ನು ಮನಗಾಣಲಿಲ್ಲ.

ರೋಮ್ ಪ್ರಜಾಪ್ರಭುತ್ವ ಹೊಂದಿದ್ದುದರಿಂದ ವಂಶಪರಂಪರಾಗತ ಅಧಿಕಾರಗಳಾವುವು ಇರಲಿಲ್ಲ. ಎಲ್ಲ ಸ್ಥಾನಗಳಿಗೂ ಚುನಾವಣೆ ನಡೆಯ ಬೇಕಾಗಿದ್ದಿತು. ಆದರೆ ಅಧಿಕಾರಿಗಳು ವೇತನಗಳಿಲ್ಲದೆ ಗೌರವಕ್ಕಾಗಿ ಕೆಲಸಮಾಡಬೇಕಾದುದರಿಂದ ಐಶ್ವರ್ಯವಂತರು ಮಾತ್ರ ಚುನಾವಣೆಗೆ ನಿಲ್ಲಬಹುದಾಯಿತು. ಅಲ್ಲದೆ ಒಂದೇ ವಂಶದವರೇ ಪ್ರಾಯಃ ಕಾನ್ಸಲ್ ಪದವಿಗೆ ಬರುತ್ತಿದ್ದರು. ಸೆನೇಟನಲ್ಲೂ ನಿವೃತ್ತ ನ್ಯಾಯಾಧೀಶರೇ ಅಧಿಕರಾಗಿದ್ದರು. ಆದ್ದರಿಂದ ವಾಸ್ತವಿಕವಾಗಿ ಆಡಳಿತವು ಉಚ್ಚಕುಲ ದವರದೇ ಆಗಿತ್ತು. ಇವರು ನ್ಯಾಯರೀತಿಯಲ್ಲಿ ವರ್ತಿಸಿದರೆ ದೇಶಕ್ಕೆ ಕ್ಷೇಮ. ಲಂಚಕೋರರಾಗಿ ಕೋಮುಗಳ ವೈಮನಸ್ಸನ್ನು ಬೆಳಸುವವ ರಾದರೆ ಅಪಾಯಕರ

ಅಧಿಕಾರಿಗಳಲ್ಲಿ ಕ್ಯೂರೂಲ್ ನ್ಯಾಯಾಧೀಶರೆಂಬುವರು ಮುಖ್ಯರು. ಇವರೇ ಸರ್ಕಾರವನ್ನು ನಡೆಸಿಕೊಂಡು ಹೋಗುವವರು.

೧. **ಇಬ್ಬರು ಕಾನ್ಸಲ್ಗಳು** ಪ್ರತಿ ವರ್ಷ ಚುನಾಯಿತರಾಗಿ ನಗರಾಡಳಿತ, ಯುದ್ಧದಲ್ಲಿ ಸೈನ್ಯಾಧಿಕಾರಿಗಳು, ನ್ಯಾಯಾಧೀಶರು, ಖಜಾನೆಯ ಅಧಿಕಾರಿಗಳು ಆಗಿದ್ದರು. ಇವರಿಗೆ ಗೌರವ ಸೂಚಿಸಲು "ಫಾಸಿಸ್" ಎಂಬ ಬೆತ್ತಗಳ ಕಟ್ಟಿನಲ್ಲಿ ಕೊಡಲಿಯನ್ನು ಸಿಕ್ಕಿಸಿದ ಚಿಹ್ನೆಯನ್ನು ಹಿಡಿದು ಹನ್ನೆರಡು ಜನ "ಲಿಕ್ಟರ್" ಎಂಬವರು ಇವರ ಮುಂದೆ ನಡೆಯುತ್ತಿದ್ದರು. ಈ ಕಾನ್ಸಲ್ಗಳ ಅಧಿಕಾರಕ್ಕೆ ಕೆಲವು ಹತೋಟಿಗಳಿದ್ದವು. ಒಬ್ಬನು ಮತ್ತೊಬ್ಬ ಕಾನ್ಸಲನನ್ನು ಅಡ್ಡಿ ಮಾಡ ಬಹುದು. ಸೆನೇಟರರು ಇವರಲ್ಲಿ ಒಬ್ಬನು ಸರ್ವಾಧಿಕಾರಿ (ಡಿಕ್ಟೇಟರ್) ಯಾಗಿ ನಾಮಕರಣ ಮಾಡುವಂತೆ ಇವರನ್ನು ಬಲಾತ್ಕಾರಮಾಡ ಬಹುದು. ಟ್ರೈಬ್ಯೂನರು ಇವರ ಸಲಹೆಗಳಿಗೆ ನಿಷೇಧ ಪ್ರಯೋಗ

(ವೀಟೋ) ಮಾಡಬಹುದು. ಇವರಿಂದ ಶಿಕ್ಷೆ ವಿಧಿಸಲ್ಪಟ್ಟವರು ಜನತಾ ಸಭೆಗಳಿಗೆ ಅರ್ಜಿ ಮಾಡಬಹುದು. ಇತರ ನ್ಯಾಯಾಧೀಶರು ಇವರ ಕೆಲವು ಜವಾಬ್ದಾರಿಗಳನ್ನು ವಹಿಸಬಹುದು.

೨. **ಇಬ್ಬರು ಸೆನ್ಸಾರರು**—ಸೆನೇಟ್ ಮೆಂಬರುಗಳ ಪಟ್ಟಿಯನ್ನು ಕಾನೂನುಗಳನ್ನು ಸಿದ್ಧಪಡಿಸುವದು, ಐದು ವರ್ಷಕ್ಕೊಮ್ಮೆ ನಗರಕ್ಕೆಲ್ಲ ಪುಣ್ಯಾಹ (ಲಸ್ಟ್ರಂ) ಮಾಡುವದು. ಜನಗಣನೆ, ರಸ್ತೆ ಮತ್ತು ಸಾರ್ವಜನಿಕ ಕೆಲಸಗಳ ಮೇಲ್ವಿಚಾರಣೆ ಮಾಡುತ್ತಿದ್ದರು

೩. **ಪ್ರೇಟಾರನು ನ್ಯಾಯಸ್ಥಾನಗಳಲ್ಲಿ ಅಧ್ಯಕ್ಷ**—ಈ ಐದು ಅಧಿಕಾರಿಗಳು (೨ ಕಾನ್ಸಲ್, ೨ ಸೆನ್ಸಾರ್, ೧ ಪ್ರೇಟಾರ್) ಸೆನೇಟಿನ ಆಜೀವ ಸದಸ್ಯರು ಮತ್ತು ಸರ್ಕಾರದ ಕಾರ್ಯಾಂಗ (ಎಕ್ಸಿಕ್ಯೂಟಿವ್.)

೪. **ನಾಲ್ಕುಜನ ಕ್ವೆಸ್ಟಾರರು** ಖಜಾನೆಯ ಅಧಿಕಾರಿಗಳು. ಇಬ್ಬರು ರೋಮಿನಲ್ಲಿ ಭಂಡಾರವನ್ನು ರಕ್ಷಿಸುವದಕ್ಕೂ ಇನ್ನಿಬ್ಬರು ಇಬ್ಬರು ಕಾನ್ಸಲ್ಗಳೊಡನೆ ಯುದ್ಧ ಕಾಲದಲ್ಲಿ ಹೋಗಿ ಸೈನ್ಯದ ಭಂಡಾರವನ್ನು ಕಾಯುತ್ತಿದ್ದರು. ವಲಸೆಗಳು ಹೆಚ್ಚಾದಂತೆ ಕ್ವೆಸ್ಟಾರರ ಸಂಖ್ಯೆಯು ಹೆಚ್ಚಿತು.

೫. **ಏಡೈಲ್ಸ್**—ನಾಲ್ಕುಜನ ನಗರದ ರಕ್ಷಣೆ, ಧಾನ್ಯದ ಮಾರ್ಕೆಟ್, ವ್ಯಾಯಾಮ ವಿನೋದಗಳು ಮತ್ತು ಸಣ್ಣ ನ್ಯಾಯವ್ಯವಹಾರಗಳಲ್ಲಿ ನ್ಯಾಯಾಧೀಶರಾಗಿ ಜವಾಬ್ದಾರರಾಗಿದ್ದರು.

೬. **ಡಿಕ್ಟೇಟರ್**—ಆಪತ್ಕಾಲದಲ್ಲಿ ಕಾನ್ಸಲರಲ್ಲಿ ಒಬ್ಬನನ್ನು ಸರ್ವಾಧಿಕಾರಿಯಾಗಿ ನೇಮಿಸುತ್ತಿದ್ದರು. ಇವನ ಅಧಿಕಾರಾವಧಿ ಆರು ತಿಂಗಳು. ಯುದ್ಧದಲ್ಲಿ ಮುಖ್ಯ ಸೇನಾಪತಿ ಮತ್ತು ಅಶ್ವದಳದ ಅಧಿಕಾರಿ ಚುನಾವಣೆಗಳ ಕಾಲದಲ್ಲಿ ನಗರದಲ್ಲೂ ಮುಖ್ಯಾಧಿಕಾರಿ. ಕಾನ್ಸಲ್ಲನೂ ಸೆನೇಟಿನವರೂ ಇವನನ್ನು ನಾಮಕರಣ ಮಾಡುತ್ತಿದ್ದರು.

**ಸೆನೇಟ್**—ಇದರಲ್ಲಿ ೩೦೦ ಮೆಂಬರುಗಳಿದ್ದರು ನ್ಯಾಯವಾಗಿ ಕೇವಲ ಸಲಹೆ ಮಾಡುವ ಸಭೆಯಾಗಿದ್ದರೂ ವ್ಯವಹಾರದಲ್ಲಿ ಪ್ರಬಲ

ವಾಗಿದ್ದಿತು. (೧) ಭಂಡಾರವು ಸೆನೇಟಿನ ಅಧಿಕಾರಕ್ಕೆ ಒಳಪಟ್ಟಿತ್ತು. (೨) ಸೆನೇಟು ನ್ಯಾಯಾಧೀಶರ ಕಾರ್ಯಕ್ರಮವನ್ನು ನಿರ್ಧರಿಸುತ್ತಿತ್ತು. (೩) ವಿಜಯಿಗಳಾದ ಸೇನಾಪತಿಗಳಿಗೆ "ಟ್ರೈಯಂಫ್" ಎಂಬ ಗೌರವವನ್ನು ಕೊಡುವರು. (೪) ಪ್ರಾಂತಗಳಿಗೂ ಪಟ್ಟಣಗಳಿಗೂ ಕಮಿಷನರರನ್ನು ನೇಮಿಸುವದು. (೫) ಹೊಸ ಕಾನೂನುಗಳನ್ನು ಅನುಮೋದಿಸುವದು. (೬) ಚುನಾವಣೆ ತಕರಾರುಗಳನ್ನು ತೀರ್ಮಾನ ಮಾಡುವದು. (೭) ಸೈನ್ಯಾಧಿಕಾರಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವದು. (೮) ವಿದೇಶಗಳಿಗೆ ರಾಯಭಾರಿಗಳನ್ನು ಕಳುಹಿಸುವದು. ಮತ್ತು ಕೌಲು ಕರಾರು ಮಾಡುವದು. ಹೀಗೆ ಸೆನೇಟಿನ ಪ್ರಾಬಲ್ಯವು ಹೆಚ್ಚುತ್ತಿದ್ದರೂ ನ್ಯಾಯಾನುಸಾರವಾಗಿ ಪ್ರಜೆಗಳ ಅಭಿಮತ(ವೋಟ್) ವಾಗಲಿ ಅಥವಾ ಯಾವ ನ್ಯಾಯಾಧೀಶನಾಗಲಿ ಸೆನೇಟಿನ ತೀರ್ಮಾನಗಳನ್ನು ರದ್ದುಮಾಡಬಹುದಾಗಿದ್ದಿತು.

---


## ಅಧ್ಯಾಯ ೬

**ಪ್ಯೂನಿಕ್ ಯುದ್ಧ—ಕ್ರಿ.ಪೂ.** ೨೬೪ರಲ್ಲಿ ರೋಮ್ ಇಟಲಿಯನ್ನೆಲ್ಲ ಸ್ವಾಧೀನಪಡಿಸಿಕೊಂಡು ಉನ್ನತಸ್ಥಿತಿಗೆ ಬರುತ್ತಿತ್ತು. ಆದರೆ ಪಶ್ಚಿಮದಲ್ಲಿ ರೋಮಿನ ಅಭ್ಯುದಯಕ್ಕೆ ಪ್ರತಿಬಂಧಕವಾದ ಕಾರ್ಥೇಜ್ ಪ್ರಬಲವಾಗುತ್ತಿತ್ತು ಕಾರ್ಥೇಜಿನ ಜನರು ಪ್ಯೂನಿಕ್ ಅಥವಾ ಫಿನೀಷಿಯನ್ನರೆಂಬ ಸೆಮಿಟಿಕ್ ಜಾತಿಯವರು. ರೋಮನ್ನರು ಆರ್ಯಜಾತಿಯವರು ಕಾರ್ಥೇಜಿನವರ ಪೌರ್ವಾತ್ಯ ಸಂಸ್ಕೃತಿಯು ರೋಮನ್ನರ ಪಾಶ್ಚಾತ್ಯ ಸಂಸ್ಕೃತಿಯನ್ನು ಪ್ರತಿಭಟಿಸಿತು. ಕಾರ್ಥೇಜಿನ ಐಶ್ವರ್ಯವೆಲ್ಲ ಸಮುದ್ರ ವ್ಯಾಪಾರದಿಂದ ಬಂದಿತ್ತು ಅವರ ನೌಕೆಗಳು ಇಂಡಿಯದಿಂದ ಐರ್ಲೆಂಡ್‌ವರೆಗೂ ವ್ಯಾಪಾರಗಳನ್ನು ನಡಿಸುತ್ತಿದ್ದವು ಕಾರ್ಥೇಜ್ ನೌಕಾಬಲವನ್ನಲ್ಲದೆ ಅಪಾರವಾದ ಸೈನ್ಯವನ್ನು ಹೊಂದಿದ್ದಿತು. ಆದರೆ

ರೋಮನ್ನರ ಪ್ರಾಬಲ್ಯ ನೆಲದಮೇಲೆ ಮಾತ್ರ ಅವರಿಗೆ ನೌಕಾಬಲವು ಇರಲಿಲ್ಲ. ರೋಮ್ ಮತ್ತು ಕಾರ್ಥೇಜಗಳೆರಡು ಪ್ರಜಾಪ್ರಭುತ್ವ ಹೊಂದಿದ್ದರೂ ವ್ಯವಹಾರದಲ್ಲಿ ರೋಮಿನಲ್ಲಿ ಸೆನೇಟರರು, ಕಾರ್ಥೇಜಿನಲ್ಲಿ ಸಫೀಟರೆಂಬ ಅಧಿಕಾರಿಗಳು ಪ್ರಬಲರಾಗಿದ್ದರು ಈ ಯುದ್ಧಕ್ಕೆ ಮುಖ್ಯ ಕಾರಣ ವ್ಯಾಪಾರದಲ್ಲಿ ಸ್ಪರ್ಧೆ ಕಾರ್ಥೇಜಿನ ಸಾಮ್ರಾಜ್ಯವು ಸ್ಪೈನ್ ನಿಂದ ಏಷ್ಯದವರೆಗೂ, ಉತ್ತರ ಆಫ್ರಿಕದಲ್ಲಿಯೂ ವಿಸ್ತರಿಸಿದ್ದು (ಮೆಡಿಟರೇನಿಯನ್) ಮಧ್ಯಧರಾ ಸಮುದ್ರದಲ್ಲಿ ಪ್ರಬಲವಾಗಿದ್ದಿತು ಈ ಪ್ರಾಬಲ್ಯವನ್ನು ಕಡಿಮೆಮಾಡಿದಹೊರತು ತಮ್ಮ ದೇಶಕ್ಕೆ ಕ್ಷೇಮವಿಲ್ಲ ವೆಂದು ರೋಮನ್ನರು ನಿರ್ಧರಿಸಿದರು. ಪೈರ್ಹಸ್ಸಿನೊಡನೆ ಯುದ್ಧ ನಡೆಯುತ್ತಿದ್ದಾಗ ರೋಮನ್ನರು ಕಾರ್ಥೇಜಿನೊಡನೆ ಶಾಂತಿ ಕರಾರು ಮಾಡಿಕೊಂಡಿದ್ದರು. ಆದರೆ ಯುದ್ಧಾರಂಭಕ್ಕೆ ಸಿಸಿಲಿ ದ್ವೀಪದ ಪರಿಸ್ಥಿತಿ ಕಾರಣವಾಯಿತು.

ಸಿಸಿಲಿಯಲ್ಲಿ ರೋಮ್ ಮತ್ತು ಕಾರ್ಥೇಜ್ ಘರ್ಷಣೆ ನಡೆಯಿತು. ಸೈರಕ್ಯೂಸ್ ರಾಜನಾದ ಎರಡನೆ ಹೈರೊ ಮೆಸ್ಸಾನ ಪಟ್ಟಣದಲ್ಲಿದ್ದ ಮ್ಯಾಮರ್ ಟೈನರೆಂಬ ಕ್ಯಾಂಪೇನಿಯ ಪ್ರಾಂತದ ಆಯುಧಜೀವಿಗಳನ್ನು ಕ್ರಿ.ಪೂ. ೨೭೦ರಲ್ಲಿ "ಮೈಲೆ" ಯುದ್ಧದಲ್ಲಿ ಸೋಲಿಸಿದನು. ಆದರೆ ಇವರಲ್ಲಿ ಕೆಲವರು ಕಾರ್ಥೇಜಿನ ಸಹಾಯ ಕೇಳಿದರು. ಇತರರು ರೋಮಿಗೆ ರಾಯಭಾರವನ್ನು ಕಳುಹಿಸಿದರು ಕಾರ್ಥೇಜಿನ ಸೇನಾಪತಿ ಹಾನೊ ಮೆಸ್ಸಾನವನ್ನು ಆಕ್ರಮಿಸಿದನು. ಆದರೆ ಸೈರಕ್ಯೂಸಿನ ಹೈರೊ, ಹ್ಯಾನೊ ಸಹಾಯದಿಂದ ರೋಮನರನ್ನು ಎದುರಿಸಿ ಸೋತು ಹೋಗಲು ರೋಮನ್ನರು ಸೈರಕ್ಯೂಸಿಗೆ ಮುತ್ತಿಗೆ ಹಾಕಿದರು. ಆಗ ಹೈರೋ ರೋಮನ್ನರೊಡನೆ ಸಂಧಾನ ಮಾಡಿಕೊಂಡುದರಿಂದ ರೋಮನ್ನರು ಕಾರ್ಥೇಜಿನವರಮೇಲೆ ಯುದ್ಧವನ್ನಾರಂಭಿಸಿದರು.

ಮೊದಲ ಪ್ಯೂನಿಕ್ ಯುದ್ಧ ಕ್ರಿ ಪೂ. ೨೬೪ರಿಂದ ೨೪೨ರ ವರೆಗೂ, ಎರಡನೆಯ ಯುದ್ಧವು ೨೧೮ ರಿಂದ ೨೦೪ ರ ವರೆಗೂ, ಮೂರನೆಯ ಯುದ್ಧವು ಕ್ರಿ.ಪೂ. ೧೪೬ರಲ್ಲಿ ನಡೆಯಿತು. ಮೊದಲ ಯುದ್ಧದಲ್ಲಿ


ಏಗೋಸ
ಮೋಟೆಯು
ಲಲಬೌಮ್
ಪನೋರ್ಮಸ್
ಹೈಮೆರ
ಮೋಟಿಯ
ಸಿಸಿಲಿ
ಅಗ್ರಿಗಂಟಂ
ಗೆಲ
ನಾಕ್ಸಾಸ್
ಕಟಾನ
ಸ್ಯರಕ್ಯೂಸ್
ಉತಿಕ
ಕಾರ್ಥೇಜ್
ಕ್ಲಿಪಿಯ
ಥಾಪ್ಸಸ್
ಜಾಮ
ನ್ಯುಮಿಡಿಯ
ಆಫ್ರಿಕ ರೋಮಾನ
ಲೆಪ್ಟಿಸ್ ಮಾಗ್ನ

ನಾಲ್ಕು ಘಟ್ಟಗಳಿವೆ. ೧. ಕ್ರಿ.ಪೂ. ೨೬೪–೨೬೨ರಲ್ಲಿ ರೋಮನ್ನರು ಮ್ಯಾಮರ್ಟೈನರನ್ನು ಪಶ್ಚಿಮ ಸಿಸಿಲಿಗೆ ಓಡಿಸಿ ಆಗ್ರಿಗೆಂಟಂ ನಗರವನ್ನು ಕ್ರಿ.ಪೂ. ೨೬೨ರಲ್ಲಿ ಹಿಡಿದರು. ೨. ೨೬೨–೨೫೫ ಎಲ್ಲ ಕಾರ್ಥೇಜಿನವರನ್ನು ಸಿಸಿಲಿಯಿಂದ ಓಡಿಸಲು ನಿರ್ಧರಿಸಿ ರೋಮನ್ನರು ಹೊಸ ನೌಕಾ ಬಲವನ್ನು ಸೇರಿಸಿ ಮೈಲೆಯನ್ನು ವಶಮಾಡಿಕೊಂಡರು (೨೬೦). ಕಾರ್ಸಿಕ ಮತ್ತು ಸಾರ್ಡಿನಿಯ ದ್ವೀಪಗಳಿಗೆ ಮುತ್ತಿಗೆ ಹಾಕಿದರು (೨೫೯–೨೫೮). ಆಫ್ರಿಕ ಖಂಡದಲ್ಲಿಯೇ ಯುದ್ಧವನ್ನಾರಂಭಿಸಿ ಪ್ಯೂನಿಕ್ ನೌಕಾ ಬಲವನ್ನು ಎಕ್ನೋಮಸ್ಸಿನಲ್ಲಿ ಸೋಲಿಸಿದರು ಆದರೆ ಕಾರ್ಥೇಜಿನವರು ಸಾಂತಿಪ್ಪಸ್ ಎಂಬ ಸ್ಪಾರ್ಟನ್ ಸೇನಾಪತಿ ಸಹಾಯದಿಂದ ರೋಮನ್ನರನ್ನು ಸೋಲಿಸಲು ರೋಮನ್ನರು ಆಫ್ರಿಕದಿಂದ ಹಿಂತಿರುಗಬೇಕಾಯಿತು. ೩. ೨೫೪–೨೫೦ ರೋಮನ್ನರು ಪನೋರ್ಮಸ್ (ಪಲೆರ್ಮೋ) ತೆಗೆದುಕೊಂಡುದರಿಂದ ಕಾರ್ಥೇಜಿನವರು ಲಿಲಿಬೂಮ್ ನಗರಕ್ಕೆ ಹಿಂತಿರುಗಿ ರೋಮನ್ನರೊಡನೆ ಶಾಂತಿ ಸಂಧಾನ ನಡೆಸಿದರು. ಆದರೆ ಸೆನೇಟ್ ಒಪ್ಪಲಿಲ್ಲವಾದ್ದರಿಂದ ಪುನಃ ಯುದ್ಧಾರಂಭವಾಯಿತು. ೪. ೨೪೯–೨೪೨. ರೋಮನ್ನರು ಲಿಲಿಬೋಯಮ್ ಪಟ್ಟಣವನ್ನು ತೆಗೆದುಕೊಳ್ಳಲಾಗಲಿಲ್ಲ. ಕಾರ್ಥೇಜ್ ಸೇನಾಪತಿಯಾದ ಹ್ಯಾಮಿಲ್ಕಾರ್ ಬಾರ್ಕ ೨೪೭ರಲ್ಲಿ ತೀರದಲ್ಲಿದ್ದ ಎರಿಕ್ ಮತ್ತು ಡ್ರೆಪನ ನಗರಗಳಿಗೆ ಮುತ್ತಿಗೆ ಹಾಕಿದನು ೨೪೨ರಲ್ಲಿ ರೋಮನ್ ನೌಕಾಬಲವು ಎಗುಸ್ಸೈ ದ್ವೀಪಗಳ ಹತ್ತಿರ ಕಾರ್ಥೇಜ್ ನೌಕೆಗಳನ್ನು ಸಮುದ್ರಯುದ್ಧದಲ್ಲಿ ಸಂಪೂರ್ಣ ಸೋಲಿಸಿದುದರಿಂದ ಹ್ಯಾಮಿಲ್ಕಾರ್‌ಬಾರ್ಕ ಸಿಸಿಲಿಯನ್ನು ತ್ಯಜಿಸಿ, ೩೦೦೦ ಟಾಲೆಂಟ್ ದಂಡವನ್ನು ತೆತ್ತು, ಸೈರಕ್ಯೂಸಮೇಲೆ ಧಾಳಿ ಮಾಡುವದಿಲ್ಲವೆಂದು ಒಪ್ಪಂದ ಮಾಡಿಕೊಂಡನು.

**ಪರಿಣಾಮ :** ಸೈರಕ್ಯೂಸ್ ವಿನಾ ಎಲ್ಲ ಸಿಸಿಲಿ ರೋಮಿನ ಪ್ರಾಂತವಾಯಿತು. ಅಲ್ಲಿನ ಆಡಳಿತಕ್ಕೆ ಪ್ರತಿವರ್ಷವು ಒಬ್ಬ ಪ್ರೇಟಾರ್ ನೇಮಿತನಾದನು. ಸಿಸಿಲಿಯ ನಗರಗಳು ಒಳಾಡಳಿತದಲ್ಲಿ ಸ್ವಾತಂತ್ರ್ಯ ಪಡೆದು ರೋಮಿಗೆ ಪ್ರತಿವರ್ಷವು ಉತ್ಪನ್ನದಲ್ಲಿ ದಶಮಾಂಶವನ್ನು, ಆಮದು

ರೆಪ್ಪುಗಳಲ್ಲಿ ಶೇಕಡ ಐದುಭಾಗವನ್ನು ಕೊಡಬೇಕಾಗಿದ್ದಿತು. ಸಿಸಿಲಿಯ ಕೆಲವು ರಾಜ್ಯಗಳು ರೋಮನ್ ನೌಕಾಬಲಕ್ಕೆ ನಾವಿಕರನ್ನು ಒದಗಿಸುವ ದಲ್ಲದೆ ಮತ್ತಾವ ನಿರ್ಬಂಧಕ್ಕೂ ಒಳಗಾಗಲಿಲ್ಲ. ಹೀಗೆ ಸಿಸಿಲಿ ಇಟಲಿ ಹೊರಗಡೆ ರೋಮನ್ನರ ಪ್ರಥಮ ವಲಸೆಯಾಯಿತು. ಆಫ್ರಿಕ ಮತ್ತು ಸಾರ್ಡಿನಿಯದಲ್ಲಿ ಸಿಪಾಯಿಗಳ ದಂಗೆಯಾದುದರಿಂದ ಕಾರ್ಥೇಜ್ ಬಲಹೀನವಾಯಿತು ಈ ಸಮಯವನ್ನು ನೋಡಿ ರೋಮನ್ನರು ೨೩೮ ರಲ್ಲಿ ಸಾರ್ಡಿನಿಯ ದ್ವೀಪವನ್ನು ವಶಮಾಡಿಕೊಂಡು ಅಲ್ಲಿ ಒಬ್ಬ ಪ್ರೇಟಾರನನ್ನು ನೇಮಿಸಿದರು.

---

# ಅಧ್ಯಾಯ ೭

## ಪ್ಯೂನಿಕ್ ಯುದ್ಧಗಳ ನಡುವೆ ರೋಮಿನ ಸ್ಥಿತಿ (ಕ್ರಿ.ಪೂ. ೨೪೧–೨೧೮).

(೧) **ಉತ್ತರ ಇಟಲಿ.** ಉತ್ತರದಲ್ಲಿ ಗಾಲರು ವಾಯುವ್ಯದಲ್ಲಿ ಲೈಗೂರಿಯನ್ನರು ರೋಮಿನ ರೂಬಿಕನ್ ನದಿ ಉತ್ತರ ಸರಹದ್ದನ್ನು ಧಾಳಿಮಾಡುತ್ತಿದ್ದುದರಿಂದ ಕ್ರಿ.ಪೂ. ೨೩೫–೨೧೮ ರಲ್ಲಿ ರೋಮನ್ನರು ಇವರನ್ನು ಅಟ್ಟಿ ಪೋನದಿಯ ಬಯಲಿನಲ್ಲಿ ವಲಸೆಗಳನ್ನು ದಂಡಿನ ಶಿಬಿರಗಳನ್ನು ಸ್ಥಾಪಿಸಿದರು ರೋಮಿನಿಂದ ಪೂರ್ವತೀರದಲ್ಲಿ ಆರ್ಮಿನಿಯಂವರೆಗೂ "**ವಯಾಫ್ಲಾಮಿನಿಯ**" ಎಂಬ ರಾಜಮಾರ್ಗ ವನ್ನು ಮಾಡಿದರು. ಹಾಗೆಯೇ ಪಶ್ಚಿಮದಲ್ಲೂ ಆಲ್ಪ್ಸ್ ಮತ್ತು ಸಮುದ್ರತೀರದ ಮಧ್ಯೆ ದಕ್ಷಿಣ ಫ್ರಾಂಸ್ ಮೂಲಕ ಸ್ಪೈನ್‌ವರೆಗೂ ರಸ್ತೆಯು ನಿರ್ಮಿತವಾಯಿತು. (೨) **ಪೂರ್ವದಲ್ಲಿ** ಇಲ್ಲಿರಿಯನ್ ನೀರ್ಗಳ್ಳರು ಇಟಲಿ ವರ್ತಕರನ್ನು ಲೂಟಿಮಾಡುತ್ತಿದ್ದುದರಿಂದ ರೋಮ ನ್ನರು ಕಾರ್ಕೈರ ಮತ್ತು ಎಪಿಡಾಮ್ನಸ್ ಹಿಡಿದು ಇಲ್ಲಿರಿಯ ಕಪ್ಪವನ್ನು

ಕೊಡುವಂತೆ ಮಾಡಿದರು. ಹೀಗೆ ರೋಮಿಗೂ ಗ್ರೀಸ್ ದೇಶಕ್ಕೂ ಪ್ರಥಮ ಸಂಬಂಧ ಉಂಟಾಯಿತು. ಅಥೆನ್ಸ್ ಮತ್ತು ಕಾರಿಂತ್ ರೋಮನ್ನರ ರಕ್ಷಣೆಗೆ ಒಳಗಾದವು. ಬರುತ್ತ ರೋಮನ್ನರ ಆಡಳಿತವು ಗ್ರೀಸ್ ದೇಶದ ಮೇಲೆಲ್ಲ ವ್ಯಾಪಿಸಿತು (೩) **ರೋಮಿನಲ್ಲಿಯೇ** ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳಾದವು. ರೋಮ್ ನಗರದ ಜನಸಂಖ್ಯೆಯು ಹೆಚ್ಚಿತು ವಿದೇಶಿಯರು (ಪೆರಿಗ್ರಿನೈ) ಬಂದು ನೆಲಸಿದುದರಿಂದ ಅವರ ರಕ್ಷಣೆಗಾಗಿ ಮತ್ತೊಬ್ಬ ಪ್ರೇಟಾರನು ನೇಮಿತನಾದನು. ಪೆಟ್ರಿಷಿಯನ್ನರ ಪ್ರಾಬಲ್ಯವು ಹೋದರೂ ಧನಿಕರಾದ ಹೊಸ ನೋಬೈಲ್ ಎಂಬವರೇ ಎಲ್ಲ ಪದವಿಗಳನ್ನು ಆಕ್ರಮಿಸಿದರು. ಮತ್ತು ಹೊಸದಾಗಿ ಗೆದ್ದ ಭೂಮಿಗಳನ್ನು ಸ್ವಾಧೀನಪಡೆಯಲು ಯತ್ನಿಸಿದರು. ಈ ಸಾರ್ವಜನಿಕ ಜಮೀನುಗಳನ್ನು ಬಂಡವಾಳಗಾರರಿಗೆ ಗುತ್ತಿಗೆ ಕೊಟ್ಟದ್ದರಿಂದ ಬಡವರಿಗೆ ಇಲ್ಲವಾಯಿತು ಯುದ್ಧದಲ್ಲಿ ಸೆರೆಸಿಕ್ಕಿದ ಗುಲಾಮರು ಹೆಚ್ಚಾದುದರಿಂದ ರೋಮನ್ನರು, ಇತರ ಸ್ವತಂತ್ರ ಜನರು ಸೋಮಾರಿಗಳಾಗಿ ವ್ಯವಸಾಯವನ್ನು ಗುಲಾಮರಿಗೆ ಒಪ್ಪಿಸಿ ವಿನೋದ ಲಾಲಸೆಯಿಂದ ರೋಮಿನಲ್ಲೆ ಇರಲಾರಂಭಿಸಿದರು. ಹಳೆಯ ಸುಲಭ ನಿರಾಡಂಬರ ಜೀವನವು ಹೋಗಿ ಸುಖವಾಂಛೆ ಆಡಂಬರ ಹೆಚ್ಚಾದವು. ಗ್ರೀಕರ ಸಂಸ್ಕೃತಿಪ್ರಭಾವವು ವಿದ್ಯಾಭ್ಯಾಸಕ್ರಮದಲ್ಲಿಯೂ ಸಾಹಿತ್ಯದಲ್ಲೂ ವಿಶೇಷವಾಯಿತು. ಪೂರ್ವ ಯೂರೋಪಿನಲ್ಲಿ ಗ್ರೀಕ್ ಭಾಷೆಯೇ ಅಂತರರಾಷ್ಟ್ರೀಯ ಭಾಷೆಯಾಯಿತು ಆದುವರೆಗೂ ಲ್ಯಾಟಿನ್ ಭಾಷೆಯಲ್ಲಿ ಹೆಚ್ಚು ಸಾಹಿತ್ಯವಿರಲಿಲ್ಲ ಆದುದರಿಂದ ರೋಮನ್ನರು ಗ್ರೀಕ್ ಗ್ರಂಥಗಳನ್ನು ತರ್ಜುಮೆಮಾಡಲಾರಂಭಿಸಿದರು ತಮ್ಮ ಮಾತೃಭಾಷೆಯಾದ ಲ್ಯಾಟಿನ್ನಿನಲ್ಲಿ ಗ್ರಂಥರಚನೆಮಾಡುವದು ಹೀನಾಯವೆಂಬ ಭಾವದಿಂದ ಕ್ರಿ.ಪೂ. ೨೫೦ರ ವರೆಗೂ ಗ್ರೀಕ್ ಭಾಷೆಯಲ್ಲೇ ಚರಿತ್ರೆಗಳನ್ನು ರಚಿಸಿದರು ಸೆನೇಟಿನ ಅಧಿಕಾರವು ವ್ಯಾಪಿಸುತ್ತ ಬಂದಿತು. ಪ್ಲಿಬಿಯನ್ ಟ್ರೈಬ್ಯೂನರು, ಕಮಿಷಿಯ ಟ್ರಿಬ್ಯೂಟ, ಕಮಿಷಿಯ ಸೆಂಚುರಿಯಾಟ ಸಭೆಗಳು ಕಾನೂನುಗಳನ್ನು ಮಾಡುತ್ತಿದ್ದರು. ಆದರೆ

ಟ್ರೈಬ್ಯೂನರು ಆಡಳಿತಕ್ಕಿಂತ ರಾಜಕೀಯಪಕ್ಷಗಳಲ್ಲಿ ಆಸಕ್ತರಾದರು. ಆದರೂ ಅವರು ಜನರ ರಕ್ಷಕರಾದುದರಿಂದ ಕಾನ್ಸಲರನ್ನು ಎದುರಿಸುವದಕ್ಕಿಂತ ಸೆನೇಟನ್ನು ಹೆಚ್ಚಾಗಿ ಪ್ರತಿಭಟಿಸುತ್ತಿದ್ದರು.

---


# ಅಧ್ಯಾಯ ೮

## ಎರಡನೆ ಪ್ಯೂನಿಕ್ ಯುದ್ಧ (ಕ್ರಿ. ಪೂ. ೨೧೮-೨೦೪).

ಪ್ರಥಮ ಪ್ಯೂನಿಕ್ ಯುದ್ಧವು ಸಿಸಿಲಿ ವಶಕ್ಕಾಗಿ ನಡೆಯಿತು. ಎರಡನೆಯದು ಸ್ಪೈನಿಗಾಗಿ. ತತ್ಸಂಬಂಧವಾಗಿ ರೋಮ್ ಮ್ಯಾಸಿಡಾನ್ ಮೇಲೆ ಯುದ್ಧಮಾಡಬೇಕಾಗಿ ಬಂದು ಗ್ರೀಸ್ ದೇಶವನ್ನು ಗೆದ್ದಿತು. ಹ್ಯಾನಿಬಾಲ್ ಎಂಬ ಪ್ರಚಂಡ ಸೇನಾಪತಿಯ ಏಟಿಗೆ ಸಿಕ್ಕಿ ಬಳಲಿ ಬೆಂಡಾಗಿ ಕೊನೆಗೆ ರೋಮ್ ಅಖಂಡ ಸಾಮ್ರಾಜ್ಯವನ್ನು ಸ್ಥಾಪಿಸಿತು.

**ಕಾರಣಗಳು** : ಕಾರ್ಥೇಜ್ ತನ್ನ ಗೌರವವನ್ನೂ ವ್ಯಾಪಾರವನ್ನೂ ಪ್ರಥಮ ಯುದ್ಧದ ಪರಿಣಾಮವಾಗಿ ಕಳೆದುಕೊಂಡಿತ್ತು. ಆದುದರಿಂದ ಸ್ಪೈನಿನಲ್ಲಿ ವ್ಯಾಪಿಸಲು ತೊಡಗಿತು. ಕ್ರಿ.ಪೂ ೨೩೮ರಲ್ಲಿ ಹ್ಯಾಮಿಲ್ಕಾರ್ ಬಾರ್ಕ ತನ್ನ ಮಗನಾದ ಹ್ಯಾನಿಬಾಲನೊಡನೆ ಸ್ಪೈನಿಗೆ ಹೋಗಿ ದಕ್ಷಿಣ ಸ್ಪೈನನ್ನೆಲ್ಲ ಗೆದ್ದನು. ಅನಂತರ ಅವನ ಅಳಿಯ ಹಾಸ್‌ಡ್ರುಬಲ್ ಮತ್ತು ಹ್ಯಾನಿಬಾಲರು ಕಾರ್ಥೇಜಿನ ಅಧಿಕಾರವನ್ನು ವಿಸ್ತರಿಸಿದರು. ರೋಮನ್ನರಿಗೆ ಅಸೂಯೆ ಭಯ ಉಂಟಾಯಿತು. ಕಾರ್ಥೇಜಿನ ಆಡಳಿತಕ್ಕೆ ಸೇರಿದ್ದ ಸೆಗುಂಟಂ ನಗರದೊಡನೆ ಒಪ್ಪಂದಮಾಡಿಕೊಂಡರು.

ಹ್ಯಾನಿಬಾಲನು ಬಾಲ್ಯದಿಂದಲೂ ರೋಮನ್ನರನ್ನು ದ್ವೇಷಿಸಲು ಪಾಠ ಕಲಿತಿದ್ದನು. ಚಿಕ್ಕ ವಯಸ್ಸಿನಲ್ಲೆ ಸೇನಾಪತಿಯಾಗಿ ಕ್ರಿ.ಪೂ. ೨೧೯ರಲ್ಲಿ ಸೆಗುಂಟಂ ಮುತ್ತಿಗೆ ಹಾಕಿದನು. **ಪ್ರಥಮ ಘಟ್ಟ** (೨೧೮-೨೧೬).



ರೋಮನ್ನರನ್ನು ಹಟಾತ್ತಾಗಿ ಎದುರಿಸಲು ಹ್ಯಾನಿಬಾಲನು ಅತ್ಯದ್ಭುತ ವಾದ ಉಪಾಯ ಮಾಡಿದನು. ಅತಿ ತ್ವರೆಯಾಗಿ ಸ್ಪೈನಿನ ತೀರಹ ಮಾರ್ಗವಾಗಿ ಹೊರಟು ಪಿರನೀಸ್ ಪರ್ವತ ಶ್ರೇಣಿಯನ್ನು ದಾಟಿ ದಕ್ಷಿಣ ಫ್ರಾನ್ಸ್ ತೀರದಲ್ಲಿ ನಡೆದನು. ರೋಮನ್ನರು ಸಿಪಿಯೋ ಆಫ್ರಿಕಾನಸ್ ಎಂಬ ಸೇನಾಪತಿಯನ್ನು ಹ್ಯಾನಿಬಾಲನನ್ನು ಎದುರಿಸಲು ಕಳುಹಿಸಿ ದರು. ಆದರೆ ಹ್ಯಾನಿಬಾಲನು ಅವನಿಗೆ ಸಿಕ್ಕದೆ ಅತ್ಯಂತ ಶೀತಕಾಲ ವಾದರೂ ಮಂಜುಗಡ್ಡೆಗಳಿಂದ ದುರ್ಗಮವಾದ ಆಲ್ಪ್ಸ್ ಪರ್ವತಗಳನ್ನು ದಾಟಿ ಉತ್ತರದಿಂದ ಇಟಲಿ ಪ್ರವೇಶ ಮಾಡಿದನು. ಆದ್ದರಿಂದ ಸಿಪಿಯೋ ಹಿಂತಿರುಗಿ ಬಂದು ಹ್ಯಾನಿಬಾಲನನ್ನು ಎದುರಿಸಲು ಸಿದ್ಧ ನಾದನು. ಹ್ಯಾನಿಬಾಲನು ಟ್ಯೂರಿನ್ ವಶಮಾಡಿಕೊಂಡು ಪೋನದಿ ಮಾರ್ಗವಾಗಿ ಬಂದು ಟೈಸಿನಸ್ ನದಿಬಳಿಯಲ್ಲಿ ಸಿಪಿಯೋನನ್ನು ಸೋಲಿಸಿದನು. ಮತ್ತೊಬ್ಬ ಕಾನ್ಸಲ್ ಆದ ಸೆಂಪ್ರೋನಿಯಸ್ಸನ್ನು ಟ್ರೆಬಿಯ ನದಿ ಬಳಿ ಸೋಲಿಸಿದನು. ಕ್ರಿ.ಪೂ ೨೧೭ ರಲ್ಲಿ ಛಳಿಯಿಂದ ಅನೇಕ ಸೈನಿಕರನ್ನು ಕಳೆದುಕೊಂಡರೂ ಹ್ಯಾನಿಬಾಲನು ಟ್ರಾಸಿಮೀನ್ ಸರೋವರದ ಬಳಿಗೆ ಬಂದನು. ರೋಮನ್ನರು ಫ್ಲಾಮಿನಸ್ ಎಂಬ ಕಾನ್ಸಲನನ್ನು ಕಳುಹಿಸಿದರು. ಹ್ಯಾನಿಬಾಲನು ಅವನನ್ನು ಪರೋಕ್ಷಯು ಯುದ್ಧದಲ್ಲಿ ಸೋಲಿಸಿದನು. ರೋಮಿಗೆ ಮಾರ್ಗವು ಸುಗಮವಾಯಿತು. ಹ್ಯಾನಿಬಾಲನು ದಕ್ಷಿಣ ಇಟಲಿ ಪ್ರವೇಶ ಮಾಡಿದನು ಫೇಬಿಯಸ್ ಮಾಕ್ಸಿಮಸ್ ಎಂಬ ರೋಮನ್ ಸೇನಾಪತಿ ಹ್ಯಾನಿಬಾಲನ ಸೇನೆಯ ಮೇಲೆ ಧಾಳಿಮಾಡುತ್ತ ಅವನನ್ನು ಸಿಕ್ಕಿ ಹಾಕಿಕೊಳ್ಳಲು ಯತ್ನಿಸಿದನು. ಆದರೆ ಹ್ಯಾನಿಬಾಲನು ತಪ್ಪಿಸಿಕೊಂಡು ಕ್ರಿ.ಪೂ. ೨೧೬ ರಲ್ಲಿ ಕ್ಯಾನೈ ಬಳಿಯಲ್ಲಿ ರೋಮನ್ ಸೈನ್ಯವನ್ನು ನಿರ್ನಾಮ ಮಾಡಿದನು.

## ದ್ವಿತೀಯ ಘಟ್ಟ (ಕ್ರಿ.ಪೂ. ೨೧೬–೨೦೭)

ರೋಮಿಗೆ ಮಾರ್ಗವು ನಿರಾತಂಕವಾದರು ಹ್ಯಾನಿಬಾಲನು ತನ್ನ ಸಹಾಯಕರು ಬರುವವರೆಗೂ ನಿಧಾನಿಸಿದುದರಿಂದ ಅದ್ಭುತ ವಿಜಯ

ಹೊಂದುವ ಸುಸಂಧಿಯನ್ನು ಕಳೆದುಕೊಂಡನು. ಕ್ಯಾಂಪೇನ್ಸಿಯ ಮೂಲಕ ನಡೆದು ಕ್ಯಾಪುವ ಬಳಿ ಠಾಣೆಹಾಕಿ ಅನೇಕ ಕದನಗಳಲ್ಲಿ ಜಯಶೀಲನಾದರೂ ಅವನ ಸೇನೆಯ ಶಿಸ್ತು ಸಡಿಲವಾಯಿತು. ರೋಮನ್ನರು ಕ್ರಿ.ಪೂ. ೨೧೧ ರಲ್ಲಿ ಕ್ಯಾಪುವಕ್ಕೆ ಮುತ್ತಿಗೆ ಹಾಕಿದರು ಆದರೆ ಹ್ಯಾನಿಬಾಲನು ಹಟಾತ್ತಾಗಿ ರೋಮಿನ ಮೇಲೆ ನಡೆದು ನಗರಕ್ಕೆ ಮೂರು ಮೈಲಿಯಲ್ಲಿ ನಿಂತನು. ಆದರೆ ರೋಮಿನ ಕೋಟೆಗಳು ದುಃಸಾಧ್ಯವೆಂದು ತಿಳಿದು ಹಟಾತ್ತಾಗಿ ಹಿಂತಿರುಗಿದನು. ರೋಮನ್ನರು ಧೈರ್ಯವಹಿಸಿ ಕ್ಯಾಪುವ ಮತ್ತು ಟಾರೆಂಟಂ ಹಿಡಿದರು ಹ್ಯಾನಿಬಾಲನು ತನ್ನ ಸಹೋದರನಾದ ಹ್ಯಾಸ್‌ಡ್ರುಬಲನ ಸಹಾಯವನ್ನು ಕೇಳಿದನು. ಕ್ರಿ.ಪೂ. ೨೦೭ರಲ್ಲಿ ಹ್ಯಾಸ್ಡ್ರುಬಾಲನು ಸ್ಪೈನಿನಿಂದ ಹೊರಟು ಆಲ್ಪ್ಸ ಶ್ರೇಣಿಯನ್ನು ದಾಟಬಂದನು. ಆದರೆ ಅವನು ಹ್ಯಾನಿಬಾಲನನ್ನು ಸಂಧಿಸುವದಕ್ಕೆ ಮುಂಚೆ ರೋಮನ್ನರು ಅವನನ್ನು ಮೆಟಾರಸ್ ನದಿ ಬಳಿಯಲ್ಲಿ ಸೋಲಿಸಿ ಕೊಂದರು. ಆದ್ದರಿಂದ ಹ್ಯಾನಿಬಾಲನು ನಿರಾಶೆ ಪಟ್ಟು ಹಿಂತಿರುಗಿದನು. ಇಷ್ಟರಲ್ಲಿ ರೋಮನ್ನರು ಸಿಸಿಲಿಯಲ್ಲಿ ಪ್ರಜಾ ಪ್ರಭುತ್ವವಾಗಿ ಕಾರ್ಥೇಜಿನ ಪಕ್ಷ ವಹಿಸಿದ್ದ ಸೈರಕ್ಯೂಸನ್ನು ವಶಮಾಡಿ ಕೊಂಡರು (ಕ್ರಿ ಪೂ. ೨೧೨). ಸ್ಪೈನಿನಲ್ಲೂ ಕಾರ್ಥೇಜಿನವರನ್ನು ರೋಮನ್ನರು ಸೋಲಿಸಿ ದಕ್ಷಿಣ ಸ್ಪೈನಿಗೆ ಅಟ್ಟಿದರು. ಸ್ಪೈನನ್ನು ರಕ್ಷಿಸಲು ಹ್ಯಾನಿಬಾಲನು ಇಟಲಿಯನ್ನು ಬಿಡಬೇಕಾಯಿತು. ಕಾರ್ನೀ ಲಿಯುಸ್ ಸಿಪಿಯೋ ಆಫ್ರಿಕಾನಸ್ ೨೧೦–೨೦೬ ರಲ್ಲಿ ನವಕಾರ್ಥೇಜ್ (ಕಾರ್ಟಜೀನ) ತೆಗೆದುಕೊಂಡು ಇಲ್ಲಿಂದ ಸ್ಪೈನನ್ನು ಆಫ್ರಿಕವನ್ನು ಗೆಲ್ಲಲು ಸಿದ್ಧನಾದನು.

## ಮೂರನೆಯ ಘಟ್ಟ (ಕ್ರಿ.ಪೂ. ೨೦೭–೨೦೨)

ಆಫ್ರಿಕದಲ್ಲಿ ಕಾರ್ಥೇಜಿಗೆ ಪ್ರತಿಸ್ಪರ್ಧಿಯಾದ ನ್ಯೂಮಿಡಿಯ ದೇಶದ ರಾಜನು ರೋಮಿನೊಡನೆ ಒಪ್ಪಂದಮಾಡಿಕೊಂಡನು. ಸಿಪಿಯೋ

ಆಫ್ರಿಕದಲ್ಲಿ ಇಳಿದುದರಿಂದ ಹ್ಯಾನಿಬಾಲನು ಆಫ್ರಿಕಕ್ಕೆ ಹಿಂತಿರುಗಿದನು. ಅವನನ್ನು ಕ್ರಿ.ಪೂ. ೨೦೨ ರಲ್ಲಿ ಸಾಮ ಕದನದಲ್ಲಿ ಸಿಪಿಯೋ ಸೋಲಿಸಿದನು. ಕಾರ್ಥೇಜ್ ಆಫ್ರಿಕದಲ್ಲಿ ಮಾತ್ರ ಆಳುತ್ತ ಇತರ ವಿದೇಶೀಯ ಪ್ರಾಂತಗಳನ್ನೆಲ್ಲ ರೋಮಿಗೆ ಒಪ್ಪಿಸಬೇಕೆಂದು, ಆ ದೇಶಗಳೊಡನೆ ವ್ಯಾಪಾರ ಮಾಡಕೂಡದೆಂದು, ಯುದ್ಧದ ಖರ್ಚಿಗಾಗಿ ೧೦೦೦೦ ಟಾಲೆಂಟ್ (೨,೪೦೦,೦೦೦ ಪೌಂಡು) ದಂಡಕೊಟ್ಟು ಜಾಮೀನು ಕೊಡಬೇಕೆಂತಲೂ ಒಪ್ಪಂದಮಾಡಿಕೊಂಡಿತು ಹೀಗೆ ಸಿಪಿಯೋ ಹ್ಯಾನಿಬಾಲದ ಧಾಳಿಯಿಂದ ಇಟಲಿಯನ್ನು ರಕ್ಷಿಸಿದುದಲ್ಲದೆ ಸ್ಪೈನ್, ಸಿಸಿಲಿ ಮತ್ತು ಪಶ್ಚಿಮ ಯೂರೋಪ್ ರೋಮನ್ನರ ವಶವಾಗುವಂತೆ ಮಾಡಿದನು

**ಮೂರನೆಯ ಪ್ಯೂನಿಕ್ ಯುದ್ಧ**—ಐವತ್ತು ವರ್ಷದ ನಂತರ ನಡೆಯಿತು. ಕಾರ್ಥೇಜಿನಮೇಲಿನ ದ್ವೇಷಕ್ಕಾಗಿ ರೋಮನ್ನರು ತಾವು ಮಾಡಿಕೊಂಡ ಒಪ್ಪಂದವನ್ನು ಲಕ್ಷಿಸದೆ ಕಾರ್ಥೇಜ್ ಪಟ್ಟಣವನ್ನು ಸಂಪೂರ್ಣ ನಾಶಪಡಿಸಿ ಆ ಸ್ಥಳವನ್ನು ಉತ್ತು ಉಪ್ಪುಬಿತ್ತು ದ್ವೇಷವನ್ನು ತೀರಿಸಿಕೊಂಡರು.

## ಮ್ಯಾಸಿಡಾನ್ ಯುದ್ಧ (ಕ್ರಿ.ಪೂ. ೨೧೪–೨೦೫)

ಗ್ರೀಸಿನಲ್ಲಿ ಮ್ಯಾಸಿಡಾನ್ ರಾಜನಾದ ಐದನೆಯ ಫಿಲಿಪ್ ಗ್ರೀಸನ್ನೆಲ್ಲ ಗೆಲ್ಲಲು ಇಚ್ಛಿಸಿ ಅಲ್ಲಿದ್ದ ರೋಮನ್ನರನ್ನು ಕಾರ್ಕೈರ, ಇಲ್ಲಿರಿಯದಿಂದ ಓಡಿಸಲು ಹ್ಯಾನಿಬಾಲನೊಡನೆ ಸಂಧಾನಮಾಡಿದನು. ಇದಕ್ಕೆ ಪ್ರತಿಯಾಗಿ ರೋಮನ್ನರು ಬ್ರಿಂಡಿಸಿಯನ್ನು ತೆಗೆದುಕೊಂಡು ಏಷ್ಯಾಮೈನರಿನಲ್ಲಿ ಫಿಲಿಪ್ಪಿಗೆ ಪ್ರತಿಕಕ್ಷಿಗಳಾದ ರಾಜರೊಡನೆ ಮೈತ್ರಿ ಮಾಡಿಕೊಂಡರು. ಆದ್ದರಿಂದ ಫಿಲಿಪ್ ರೋಮನ್ನರೊಡನೆ ೨೦೫ ರಲ್ಲಿ ಕರಾರುಮಾಡಿಕೊಂಡನು. ಹೀಗೆ ರೋಮ್ ಎಲ್ಲ ಗ್ರೀಕ್ ರಾಷ್ಟ್ರಗಳಿಗೂ ರಕ್ಷಕವಾಗಿ ಅಂತ್ಯದಲ್ಲಿ ಅವನ್ನೆಲ್ಲ ಜಯಿಸಿತು.

# ಅಧ್ಯಾಯ ೯

**ಇಟಲಿ ಪರಿಸ್ಥಿತಿ:** ಎರಡನೆ ಪ್ಯೂನಿಕ್ ಯುದ್ಧಾನಂತರ ರೋಂ ಸಾಮ್ರಾಜ್ಯಸ್ಥಿತಿಯು ಬದಲಾಯಿಸಿತು. ಇಟಲಿ ಭಾಗಗಳು ಪ್ರಾಂತಗಳಾಗಿ ಪ್ರೇಟಾರರ ಆಳಿಕೆಯಲ್ಲಿದ್ದವು ಹ್ಯಾನಿಬಾಲನಿಗೆ ಸಹಾಯ ಮಾಡಿದ ನಗರಗಳು ಸಮಸ್ತ ಸ್ವಾತಂತ್ರ್ಯವನ್ನು ಕಳೆದುಕೊಂಡವು. ಆ ಜನರ ಜಮೀನುಗಳನ್ನು ಕಸಿದುಕೊಂಡು ಅವರನ್ನು ಗುಲಾಮರನ್ನಾಗಿ ಮಾರಲಾಯಿತು. ಆ ಜಮೀನುಗಳು ರೋಮನ್ನರಿಗೆ ಹಂಚಲ್ಪಟ್ಟವು. ರೋಮಿನ ಆಳಿಕೆಯಲ್ಲಿ ಸೆನೇಟಿನ ಅಧಿಕಾರ ಹೆಚ್ಚಿತು. ವಿದೇಶಗಳಲ್ಲಿ ಯುದ್ಧ ನಡಿಸುವದು, ಹೊಸ ಪ್ರಾಂತಗಳಿಗೆ ಅಧಿಕಾರಿಗಳನ್ನು ನೇಮಿಸುವದು, ರಾಯಭಾರಿಗಳನ್ನು ಕಳುಹಿಸುವದು, ಇಟಲಿಯ ಪಟ್ಟಣಗಳಲ್ಲಿ ನ್ಯಾಯ ತೀರ್ಮಾನಿಸುವದು ಸೆನೇಟಿನ ಜವಾಬ್ದಾರಿಯಾಯಿತು. ರೋಮಿನಲ್ಲಿ ಎರಡು ಹೊಸ ವರ್ಗಗಳಾದವು. ನೋಬಲ್ಸ್ ಮತ್ತು ಆಪ್ಟಿಮೇಟರು, ಸಾಮಾನ್ಯರು ಅಥವಾ ಪಾಪ್ಯುಲರ್ಸ್ ಎಂಬವರು ಸ್ಪರ್ಧಿಸಲಾರಂಭಿಸಿದರು. ಗ್ರೀಕರ ಪ್ರಭಾವ ಹೆಚ್ಚುತ್ತ ಬಂದಿತು. ಇವರು ರೋಮನ್ನರ ಮನೆಗಳಲ್ಲಿ ಗುಲಾಮರಾಗಿದ್ದರೂ ತಮ್ಮ ಸಂಸ್ಕೃತಿಯನ್ನು ತಮ್ಮ ಯಜಮಾನರು ಅಂಗೀಕರಿಸುವಂತೆ ಮಾಡಿದರು. ರೋಮನ್ನರ ಜೀವನ ವಿಧಾನವು ಸುಖಲಾಲಸೆಯಿಂದ ತುಂಬಿದ್ದಿತು ಮತ್ತು ಸಾಹಿತ್ಯದಲ್ಲಿ ಲ್ಯಾಟಿನ್ ಕವಿಗಳು ಗ್ರೀಕ್ ಗ್ರಂಥಗಳನ್ನನುಸರಿಸಿ ಭಾಷಾಂತರಮಾಡಲಾರಂಭಿಸಿದರು. ಶಿಲ್ಪ, ಸಂಗೀತ, ಚಿತ್ರಕಲೆ, ನಡೆನುಡಿ, ಉಡುಪು, ಎಲ್ಲದರಲ್ಲೂ ಗ್ರೀಕರನ್ನು ಅನುಕರಿಸುವುದೇ ಸಂಸ್ಕೃತರ ಚಿಹ್ನೆಯೆಂದು ಭಾವಿಸಲ್ಪಟ್ಟಿತು. ಹಳ್ಳಿಗಳಲ್ಲಿ ವ್ಯವಸಾಯವು ಆಕರ್ಷಕವಲ್ಲವೆಂದು ರೈತರು ಜಮೀನುಗಳನ್ನು ತ್ಯಜಿಸಿ ರೋಮ್ ಸೇರಲಾರಂಭಿಸಿದುದರಿಂದ ದೊಡ್ಡ ಜಮೀನ್ದಾರರು ತಮ್ಮ ಜಮೀನುಗಳನ್ನು ಗುಲಾಮರಿಗೆ ಒಪ್ಪಿಸಿ (ಲಾಟಿ ಫಂಡಿಯ) ರೋಮ್ ನಗರದಲ್ಲಿಯೇ ಕಾಲಹರಣಮಾಡುತ್ತಿದ್ದರು.

ವಿದೇಶ ವ್ಯವಹಾರದಲ್ಲಿ ರೋಮ್ ಮ್ಯಾಸಿಡೋನಿಯ, ಗ್ರೀಸ್, ಏಷ್ಯ, ಕಾರ್ಥೇಜ್ ಮತ್ತು ಸ್ಪೈನ್ ದೇಶಗಳನ್ನು ಗೆಲ್ಲಲು ಆರಂಭಿಸಿತು. ಮಾಸಿಡೋನಿಯ–ರೋಮನ್ನರು ಕ್ರಿ ಪೂ ೨೭೩ ರಲ್ಲಿ ಈಜಿಪ್ಟಿನೊಡನೆ ಒಪ್ಪಂದಮಾಡಿಕೊಂಡಿದ್ದರು ಕ್ರಿ ಪೂ ೨೨೮ ರಲ್ಲಿ ಇಲ್ಲಿರಿಯನ್ ನೀರ್ಗಳ್ಳರನ್ನು ಅಡಗಿಸಿ ಗ್ರೀಕ್ ದೇಶಗಳೊಡನೆ ಸ್ನೇಹ ಬೆಳೆಸಿದರು. ಆದರೆ ೨೧೫ರಲ್ಲಿ ಮ್ಯಾಸಿಡೋನಿಯ ರಾಜ ಫಿಲಿಪ್ಪನು ಹ್ಯಾನಿಬಾಲನೊಡನೆ ಒಪ್ಪಂದಮಾಡಿಕೊಂಡದ್ದರಿಂದ **ಮೊದಲನೆ ಮ್ಯಾಸಿಡೋನಿಯ ಯುದ್ಧ** ಸಂಭವಿಸಿದ್ದಿತು. ಫಿಲಿಪ್ಪನು ರೋಮಿನೊಡನೆ ಕರಾರುಮಾಡಿಕೊಂಡನು. ಆದರೆ ೨೦೫ ರಲ್ಲಿ ಫಿಲಿಪ್ ಸಿರಿಯರಾಜ ಆಂಟಿಯೋಕಸ್‌ನೊಡನೆ ಈಜಿಪ್ಟ್ ದೊರೆಯಾದ ಟಾಲೆಮಿಫಿಲೋಪೇಟರ್ ಸತ್ತಮೇಲೆ ಅವನು ದೇಶವನ್ನು ತಾವಿಬ್ಬರು ಹಂಚಿಕೊಳ್ಳುವಂತೆ ಕರಾರು ಮಾಡಿಕೊಂಡನು. ಫಿಲಿಪ್ ಪೆರ್ಗಾಮಂ ರಾಜನಾದ ಅಟ್ಟಾಲಸ್‌ನನ್ನು ಸೋಲಿಸಿ, ರ್ಹೋಡ್ಸ್ ಮತ್ತು ಅಬಿಡಾಸ್ ದ್ವೀಪಗಳಿಗೆ ಮುತ್ತಿಗೆ ಹಾಕಿದ್ದನು. ರೋಮನ್ನರು ಎಚ್ಚರಿಕೆಕೊಟ್ಟರೂ ಲಕ್ಷಿಸಲಿಲ್ಲ. ರೋಮನ್ನರು ಕಾರ್ಥೇಜಿನೊಡನೆ ಕರಾರುಮಾಡಿಕೊಂಡಮೇಲೆ ಕ್ರಿ ಪೂ. ೨೦೧ ರಲ್ಲಿ ಫಿಲಿಪ್ ಅಥೆನ್ಸ್ ನಗರದಮೇಲೆ ಧಾಳಿಮಾಡಲು ಅಥೆನ್ಸನ್ನು ರಕ್ಷಿಸುವುದಕ್ಕಾಗಿ ರೋಮನ್ನರು **ಎರಡನೇ ಮಾಸಿಡಾನ್** ಯುದ್ಧ ಹೂಡಿದರು. ಕ್ರಿ.ಪೂ. ೨೦೦ ರಲ್ಲಿ ರೋಮನ್ನರು ಎಪಿರಸ್ಸನ್ನು ಆಕ್ರಮಿಸಿ ಕ್ರಿ ಪೂ. ೧೯೭ ರಲ್ಲಿ ಫಿಲಿಪನನ್ನು ಸೈನೊಸೆಫಾಲೆ ಯುದ್ಧದಲ್ಲಿ ಸೋಲಿಸಿದರು. ಕ್ರಿ.ಪೂ. ೧೯೬ ರಲ್ಲಿ ಫಿಲಿಪ್ ರಾಜಿಮಾಡಿಕೊಂಡು ಗ್ರೀಸ್ ಥ್ರೇಸ್ ಏಷ್ಯಾ ಮೈನರ್‌ನಲ್ಲಿ ತನಗೆ ಸೇರಿದ್ದ ಭಾಗಗಳನ್ನೆಲ್ಲಾ ಬಿಟ್ಟುಕೊಡಬೇಕಾಯಿತು.

**ಗ್ರೀಸ್**—ಗ್ರೀಕರನ್ನು ಫಿಲಿಪ್ಪಿನ ಆಡಳಿತದಿಂದ ಬಿಡಿಸಿ ರೋಮ್ ಕ್ರಿ.ಪೂ. ೧೯೬ ರಲ್ಲಿ ಇಸ್ತ್‌ಮಿಯನ್ ಪಂದ್ಯ ಸಮಯದಲ್ಲಿ ಗ್ರೀಕ್ ರಾಜ್ಯಗಳ ಸ್ವಾತಂತ್ರ್ಯವನ್ನು ಘೋಷಿಸಿತು. ರೋಮ್ ಸೇನೆಗಳು

೧೯೪ ರಲ್ಲಿ ವಾಪಸ್ಸಾದವು. ಆದರೂ ರೋಮನ್ನರ ಪ್ರಭಾವ ಗ್ರೀಸಿನಲ್ಲಿ ಬೆಳೆಯಿತು.

**ಸಿರಿಯ**—ಸಿರಿಯ ರಾಜನಾದ ಮೂರನೆಯ ಆಂಟಿಯೋಕಸ್ಸನು ಕ್ರಿ.ಪೂ ೧೯೭-೬ ರಲ್ಲಿ ಏಷ್ಯಾಮೈನರ್ ಆಕ್ರಮಿಸಿ ಥ್ರೇಸನ್ನು ಮುತ್ತಿಗೆ ಹಾಕಿ ಹ್ಯಾನಿಬಾಲನ ಸಲಹೆಯಂತೆ ಈಜಿಯನ್ ಸಮುದ್ರ ದಾಟಿ ಗ್ರೀಸಿನಲ್ಲಿ ಇಟೋಲಿಯನ್ ಲೀಗಿನಪರವಾಗಿ ಏಕಿಯನ್ ಲೀಗಿನಮೇಲೆ ಧಾಳಿಮಾಡಿದನು. ರೋಮನ್ ಸೇನಾಪತಿ ಗ್ಲಾಬ್ರಿಯೋ ಅವನನ್ನು ಕ್ರಿ.ಪೂ ೧೯೧ ರಲ್ಲಿ ಥರ್ಮಾಪೈಲೆ ಬಳಿ ಸೋಲಿಸಿದನು. ಆಂಟಿಯೋಕಸ್ಸನು ಏಷ್ಯಕ್ಕೆ ಹಿಂತಿರುಗಿದನು ರೋಮನ್ ನೌಕಾಬಲವು ಸಿರಿಯನ್ನರ ಹಡಗುಗಳನ್ನು ಸೋಲಿಸಿ ಕ್ರಿ ಪೂ. ೧೯೦ ರಲ್ಲಿ ರೋಮನ್ನರು ಮೊದಲು ಏಷ್ಯಾಖಂಡದಲ್ಲಿ ಕಾಲಿಟ್ಟರು. ಸಿಪಿಯೋ ಆಂಟಿಯೋಕಸ್ಸನನ್ನು ಮಾಗ್ನೀಸಿಯಂ ಬಳಿಯಲ್ಲಿ ಸೋಲಿಸಿದನು ಅವನ ರಾಜ್ಯದ ಮೇರೆಗಳು ಹಾಲಿಸ್ ನದಿ ಮತ್ತು ಟಾರಸ್ ಪರ್ವತಗಳಿಂದು ನಿರ್ಧರಿಸಿ ರೋಮನ್ನರು ಏಷ್ಯದಲ್ಲಿದ್ದ ಗ್ರೀಕ್ ಪಟ್ಟಣಗಳಿಗೆ ಸ್ವಾತಂತ್ರ್ಯಕೊಟ್ಟರು. ಇಟೋಲಿಯನ್ ಲೀಗಿನವರು ರೋಮನ್ನರ ಆಳಿಕೆಗೆ ಸೇರಿದರು. ೧೮೯ ರಲ್ಲಿ ರೋಮನ್ ಏಷ್ಯಾಭಾಗವು ಒಂದು ಪ್ರಾಂತವಾಯಿತು.

ಇದೇ ಸಮಯದಲ್ಲಿ (ಕ್ರಿ ಪೂ. ೨೦೫) ರೋಮನ್ನರು ಉತ್ತರ ಇಟಲಿಯಲ್ಲಿ ಗಾಲ್ ಮತ್ತು ಲೈಗೂರಿಯನ್ನು ಗೆದ್ದು ಸ್ಪೈನನ್ನು ಆಕ್ರಮಿಸಿದರು.

**ಮೂರನೆ ಮ್ಯಾಸಿಡೋನಿಯ ಯುದ್ಧ (೧೭೧).** ಕ್ರಿ.ಪೂ. ೨೦೦-೧೮೯ ರಲ್ಲಿ ರೋಮನ್ನರು ಪೂರ್ವಮಧ್ಯಧರಾ ಸಮುದ್ರದಲ್ಲಿ ಪ್ರಬಲರಾದರು. ಆದರೆ ಮ್ಯಾಸಿಡೋನಿನಲ್ಲಿ ಫಿಲಿಪ್ ಮತ್ತು ಅವನ ಮಗ ಪರ್ಸ್ಯೂಸ್ (೧೭೯-೧೬೮) ಸಿರಿಯ ಇಲ್ಲಿರಿಯ ಥ್ರೇಸ್ ದೇಶಗಳೊಡನೆ ಒಪ್ಪಂದ ಮಾಡಿಕೊಂಡು ರೋಮನ್ನರನ್ನು ಎದುರಿಸಲು ಸಿದ್ಧರಾದರು. ರೋಮನ್ನರು ಕ್ರಿ.ಪೂ. ೧೭೧ ರಲ್ಲಿ ಯುದ್ಧವನ್ನಾರಂಭಿಸಿ ಪರ್ಸ್ಯೂಸ

ನನ್ನು **ಪೈಡ್ನ** ಕದನದಲ್ಲಿ ಸೋಲಿಸಿದರು. ಮ್ಯಾಸಿಡೋನಿಯ ಒಗ್ಗಟನ್ನು ಮುರಿದು ನಾಲ್ಕುಸಣ್ಣ ಪ್ರಜಾಪ್ರಭುತ್ವಗಳನ್ನು ನಿರ್ಮಿಸಲಾಯಿತು (೧೯೫–೧೬೭). ಆದರೆ ಅನೇಕ ದಂಗೆಗಳಿದ್ದುದರಿಂದ ಕ್ರಿ.ಪೂ. ೧೪೭ರಲ್ಲಿ **ಮ್ಯಾಸಿಡೋನಿಯ** ರೋಮನ್ನರ ಪ್ರಾಂತವೆಂದು ಘೋಷಿಸಿ ಇತರ ಗ್ರೀಕ್ ರಾಜ್ಯಗಳು ಅಂತರ್ಯುದ್ಧಗಳನ್ನು ಮಾಡಬಹುದೆಂಬ ನೆಪದಿಂದ ಅವುಗಳನ್ನು ಸ್ವಾಧೀನಪಡಿಸಿಕೊಂಡರು. ರೋಮನ್ನರ ಸ್ನೇಹಿತರಾಗಿದ್ದ ಏಕಿಯನ್, ಇಟೋಲಿಯನ್ನರನ್ನು ಶಿಕ್ಷಿಸಿ ಅವರ ಮುಖಂಡರನ್ನು ರೋಮಿನಲ್ಲಿ ಸೆರೆಹಿಡಿಸಿದರು. ಕ್ರಿ.ಪೂ ೧೪೮ ರಲ್ಲಿ ಏಕಿಯನ್ನರು ದಂಗೆ ಏಳಲು ರೋಮನ್ನರು ಅವರನ್ನು ಅಣಗಿಸಿ ಥೀಬ್ಸ್ ಮತ್ತು ಕಾರಿಂತ್ ಪಟ್ಟಣಗಳನ್ನು ಲೂಟಿಮಾಡಿ ಸುಟ್ಟರು (೧೪೬) ಎಲ್ಲ ಒಕ್ಕೂಟಗಳನ್ನು ವಜಾ ಮಾಡಿ ಎಲ್ಲೆಲ್ಲೂ ಪ್ರಾಂತ ಸರ್ಕಾರಪದ್ಧತಿ ಸ್ಥಾಪಿತವಾಯಿತು. ನೆಪಮಾತ್ರಕ್ಕೆ ಗ್ರೀಕರು ಸ್ವತಂತ್ರರಾಗಿದ್ದರು

## ಕಾರ್ಥೇಜ್ (ಕ್ರಿ.ಪೂ. ೧೫೩–೧೪೬)

ಕಾರ್ಥೇಜಿನ ಪ್ಯೂನಿಕ್ ಜನರು ಪುನಃ ಅಭ್ಯುದಯಕ್ಕೆ ಬರುತ್ತಿದ್ದುದನ್ನು ಸಹಿಸದೆ ರೋಮಿನಲ್ಲಿ ಕೇಟೊ "ಕಾರ್ಥೇಜ್ ನಾಶಮಾಡಬೇಕು" (ಡಿಲೆಂಡ ಎಸ್ಟ್ ಕಾರ್ಟ್‌ಗೋ) ಎಂದು ಸತತವೂ ಘೋಷಿಸುತ್ತಿದ್ದನು. ರೋಮನ್ನರ ಸ್ನೇಹಿತನಾದ ನ್ಯೂಮಿಡಿಯ ರಾಜ ಮ್ಯಾಸನಿಸ್ಸ ಕಾರ್ಥೇಜಿನ ವ್ಯಾಪಾರಕ್ಕೆ ಅಡ್ಡಿಮಾಡಿದುದರಿಂದ ಕಾರ್ಥೇಜ್ ಅವನ ಮೇಲೆ ಯುದ್ಧಮಾಡಬೇಕಾಯಿತು. ಆದರೆ ರೋಮನ್ನರು ಅವನ ಸಹಾಯಕ್ಕೆ ಬಂದು **ಮೂರನೆ ಪ್ಯೂನಿಕ್ ಯುದ್ಧ** ಮಾಡಿದರು ಕ್ರಿ.ಪೂ. ೧೪೯ ರಲ್ಲಿ ಕಿರಿಯಸಿಪಿಯೋ ಕಾರ್ಥೇಜಿಗೆ ಮುತ್ತಿಗೆ ಹಾಕಿ ೧೪೬ ರಲ್ಲಿ ಅದನ್ನು ಸಂಪೂರ್ಣವಾಗಿ ನಾಶಮಾಡಿದನು ಆ ಭಾಗಗಳೆಲ್ಲ ರೋಮನ್ನರ ಪ್ರಾಂತವಾಯಿತು. ಮತ್ತು ನ್ಯೂಮಿಡಿಯ ಮಿತ್ರರಾಷ್ಟ್ರವಾಯಿತು.

**ಈಜಿಪ್ಟ್**—೧೬೮ ರಲ್ಲಿ ಈಜಿಪ್ಟ್ ರೋಮಿನ ಸ್ವಾಮ್ಯಕ್ಕೆ ಒಳಗಾಯಿತು. ಪಶ್ಚಿಮ ಮಧ್ಯಧರಾ ಸಮುದ್ರವೆಲ್ಲ ರೋಮನ್ನರ ಆಳಿಕೆಗೆ ಬಂದಿತು.

**ಸ್ಪೈನ್**-ಕ್ರಿ ಪೂ ೧೫೫-೧೩೭ ಸ್ಪೈನಿನಲ್ಲಿ ಲ್ಯೂಸಿಟಾನಿಯ ಮತ್ತು ಕೆಲ್ಟ್-ಐಬೀರಯನ್ ಜನಾಂಗಗಳು ದಂಗೆ ಏಳಲು ಅವರನ್ನು ಅಣಗಿಸಿ ಕಿರಿಯಸಿಪಿಯೊ ೧೩೩ ರಲ್ಲಿ ನ್ಯುಮಾಂಟಿಯ ಪಟ್ಟಣವನ್ನು ಗೆದ್ದು ಸ್ಪೈನಿನಲ್ಲೆಲ್ಲ ರೋಮನ್ ಅಧಿಕಾರವನ್ನು ಸ್ಥಾಪಿಸಿದನು.

**ಏಷ್ಯದಲ್ಲಿ**—ರ್ಹೋಡ್ಸ್ ಮತ್ತು ಪೆರ್ಗಾಮಂ ರೋಮನ್ನರ ರಕ್ಷಣೆಗೆ ಒಳಗಾದವು ರೋಮನ್ನರ ಪ್ರಭಾವವು ಆರ್ಮೀನಿಯಾ ಮತ್ತು ಯೂಫ್ರಟೀಸ್ ನದಿವರೆಗೆ ವ್ಯಾಪಿಸಿತು ಸಿರಿಯದಲ್ಲಿ ರೋಮಿನ ಕೈಗೊಂಬೆಯಾದ ಆಂಟಿಯೋಕಸ್ ಯುಪೇಟಾರ್ ಎಂಬುವನು ರಾಜನಾಗಿ ಮಾಡಲ್ಪಟ್ಟನು.

---

## ಅಧ್ಯಾಯ ೧೦

**ಸೆನೇಟಿನ ಪ್ರಾಬಲ್ಯ—ರೋಮ್ ಆಡಳಿತ**—ರೋಮ್ ಸರ್ಕಾರವು ನೆಪಮಾತ್ರಕ್ಕೆ ಪ್ರಜಾಪ್ರಭುತ್ವವಾಗಿತ್ತು ಪ್ರತಿನಿಧಿ ಸಭೆಯು ಪ್ರತಿವರ್ಷ ನ್ಯಾಯಾಧೀಶರನ್ನು ಚುನಾಯಿಸಿ ಮರಣದಂಡನೆಗಳನ್ನು ವಿಧಿಸಿ ಕಾನೂನು ಮಾಡುತ್ತಿತ್ತು. ಆದರೆ ವ್ಯವಹಾರದಲ್ಲಿ ಸೆನೇಟಿನ ಬಲವು ಹೆಚ್ಚಿತು. ಕ್ರಿ.ಪೂ. ೧೪೬ ರ ವರೆಗೆ ಸೆನೇಟಿಗೆ ನೋಬಲ್ ವರ್ಗದವರ ಬೆಂಬಲವಿದ್ದಿತು. ತಾತ್ಕಾಲಿಕ ರಾಜತ್ವಕ್ಕೆ (ಇಂಟರ್ ರೆಕ್ಸ್) ಪೇಟ್ರೀಷಿಯನ್ನರು ಅರ್ಹರಾಗಿದ್ದರು. ಯಾವ ಕಾನೂನನ್ನು ಮಂಡಿಸಲು ಸೆನೇಟಿನ ಅನುಮತಿಬೇಕು. ಮುಖ್ಯ ವಿಷಯಗಳಲ್ಲಿ ಮಾತ್ರ ನ್ಯಾಯಾಧೀಶರು ಪ್ರತಿನಿಧಿಸಭೆಯ ಸಲಹೆ ಪಡೆಯುತ್ತಿದ್ದರು. ವಿದೇಶೀಯ ವ್ಯವಹಾರದಲ್ಲಿ ಸೆನೇಟ್ ನ್ಯಾಯಾಧೀಶರ ಅಧಿಕಾರಾವಧಿಯನ್ನು ಹೆಚ್ಚಿಸುತ್ತಿತ್ತು (ಪ್ರೊರೋಗೇಷಿಯೋ ಇಂಪೀರಿಯೈ). ಕೌಲು ಕರಾರುಮಾಡುವದು, ಮೈತ್ರಿ ಬೆಳೆಸುವದು,

ಕಪ್ಪಗಳನ್ನು ನಿಗದಿಮಾಡುವದು, ರಾಷ್ಟ್ರಗಳನ್ನು ಸ್ವಾಧೀನಪಡಿಸಿ ಕೊಳ್ಳುವದು, ಆರ್ಥಿಕವ್ಯವಸ್ಥೆ ಎಲ್ಲವೂ ಸೆನೇಟಿನಿಂದ ನಡೆಯುತ್ತಿತ್ತು. ಒಳಾಡಳಿತದಲ್ಲಿ ನ್ಯಾಯಪ್ರಶ್ನೆಗಳನ್ನು ತೀರ್ಮಾನಿಸುವದು. ಸೆನೇಟಿನ ಖಾಲಿ ಸ್ಥಳಗಳಿಗೆ ನ್ಯಾಯಾಧೀಶರು ಇಷ್ಟಪಟ್ಟವರನ್ನು ನಾಮಕರಣ ಮಾಡುವಂತಿಲ್ಲ. ಕ್ಯೂರೈಲ್ ನ್ಯಾಯಾಧೀಶರಾಗಿದ್ದವರು, ಪ್ಲಿಬಿಯನ್ನರ ಟ್ರೈಬ್ಯೂನರು, ಎಡೈಲರು, ಕ್ವೆಸ್ಟಾರರು, ಯುದ್ಧದಲ್ಲಿ ಕೀರ್ತಿಪಡೆದವರು ಮಾತ್ರ ಸೆನೇಟರರಾಗಬಹುದು ಅಲ್ಲದೆ ಅತ್ಯಂತ ಅಪರಾಧಮಾಡಿದ ಸೆನೇಟರರನ್ನು ಮಾತ್ರ ನ್ಯಾಯಾಧೀಶರು ವಜಾಮಾಡಬಹುದು. ಆದ್ದರಿಂದ ಸೆನೇಟಿನಲ್ಲಿ ನಿವೃತ್ತರಾದ ಮತ್ತು ಅಧಿಕಾರದಲ್ಲಿದ್ದ ಜನರೇ ಹೆಚ್ಚಾಗಿದ್ದರು. ಇದರಿಂದ ಸೆನೇಟ್ ಕೇವಲ ಅಧಿಕಾರಿಗಳ ಕೂಟವಾಯಿತು. ನ್ಯಾಯಾಧೀಶರು ಸೆನೇಟಿನ ಆಜ್ಞೆ (ಡಿಕ್ರಿ) ಯಂತೆ ನಡೆಯಬೇಕಾಯಿತು.

**ಸೆನೇಟಿನ ಪ್ರಾಬಲ್ಯಕ್ಕೆ ಕಾರಣಗಳು**—೧. ಪ್ರತಿನಿಧಿಸಭೆಗಳಾದ ಕಮಿಷಿಯ ಸೆಂಚುರಿಯಾಟ ಮತ್ತು ಟ್ರಿಬ್ಯೂಟ ನ್ಯಾಯಾಧೀಶನ ಅನುಮತಿಯಿಲ್ಲದೆ ಸಮಾವೇಶವಾಗುವದಕ್ಕೆ ಅವಕಾಶವಿರಲಿಲ್ಲ. ೨. ಸಮಾವೇಶವಾದರೂ ನಿರ್ದಿಷ್ಟವಿಷಯ (ರೊಗೇಷಿಯೋ) ದ ಮೇಲೆ ಮಾತ್ರ ಚರ್ಚಿಸಬಹುದು. ಅಧ್ಯಕ್ಷನಾದ ಕಾನ್ಸಲ್, ಪ್ರೇಟಾರ್ ಅಥವಾ ಟ್ರೈಬ್ಯೂನ್ ಇಂತಹ ಚರ್ಚೆಗೆ ಅನೇಕ ಅಡಚಣೆ ತರಬಹುದು. ೩. ಸೆನೇಟ್ ಸಣ್ಣ ಸಂಸ್ಥೆಯಾದುದರಿಂದ ಬೇಗ ಸಮಾವೇಶವಾಗಿ ಅದರಲ್ಲಿ ಅನುಭವಸ್ಥರಾದ ಅಧಿಕಾರಿಗಳಿದ್ದುದರಿಂದ ಬೇಗ ತೀರ್ಮಾನಗಳನ್ನು ಮಾಡಬಹುದು. ೪. ಈಗ ನ್ಯಾಯಾಧೀಶನಿಗೆ ಸಂಪೂರ್ಣಾಧಿಕಾರ (ಇಂಪೀರಿಯಂ) ಕೊಡಲ್ಪಟ್ಟಿತು. ಅವನು ಸೆನೇಟ್ ಮತ್ತು ಪ್ರತಿನಿಧಿಸಭೆಗಳನ್ನು ಸಮಾವೇಶಮಾಡುವದು, ನ್ಯಾಯ ತೀರ್ಮಾನ ಮಾಡುವದು, ಯುದ್ಧದಲ್ಲಿ ಸೈನ್ಯ ನಡೆಸುವದು, ಕರ್ತವ್ಯವಾಗಿತ್ತು. ಪೇಟ್ರೇಷಿಯನ್ ಪ್ಲಿಬಿಯನ್ನರ ಕಲಹಗಳಲ್ಲಿ ಹಿಂದಿನಕಾಲದ ಸಂಪೂರ್ಣಾಧಿಕಾರವು ಸಂಕುಚಿತಮಾಡಲ್ಪಟ್ಟಿತು. ವೆಲೀರಿಯನ್ ಕಾನೂನಿನ

ಪ್ರಕಾರ ಕಾನ್ಸಲರ ಮರಣದಂಡನಾಧಿಕಾರವು ರದ್ದು ಮಾಡಲಾಗಿತ್ತು. ಟ್ರಿಬ್ಯುನೇಟಿನವರು ನಗರದ ಹೊರಭಾಗದಲ್ಲಿ ಮಾತ್ರ ಅಧಿಕಾರವನ್ನು ಪಡೆದಿದ್ದರು. ಕ್ರಿ ಪೂ. ೪೩೫ ರಲ್ಲಿ ಜನಗಣನೆ (ಸೆನ್ಸಸ್) ಕಾರ್ಯವು ಇಬ್ಬರು **ಸೆನ್ಸಾರರಿಗೆ** ಒಪ್ಪಿಸಲ್ಪಟ್ಟಿತು. ಹಾರ್ಟೆನ್ಸಿಯನ್ ಕಾನೂನಿನಂತೆ ಕ್ರಿ.ಪೂ. ೨೮೭ ರಲ್ಲಿ ಪ್ಲಿಬಿಯನ್ ಟ್ರಿಬ್ಯೂನರು ಸಭೆಗಳನ್ನು ಸೇರಿಸಿ ಕಾನೂನುಗಳನ್ನು ಮಂಡಿಸಿ ಸೆನೇಟಿನ ಸಲಹೆ ಪಡೆಯಬಹುದು. ರೋಮ್ ವಿಸ್ತರಿಸಿದಂತೆ ಎಂಟು ಹೊಸ ನ್ಯಾಯಾಧೀಶರನ್ನು ನೇಮಿಸ ಲಾಯಿತು. ಇವರಲ್ಲಿ ಇಬ್ಬರು ಕಾನ್ಸಲರೂ ಹಿರಿಯ ಅಧಿಕಾರ (ಮೇಜಸ್ ಇಂಪೀರಿಯಂ) ಪಡೆದಿದ್ದರು ಮಿಕ್ಕ ಆರು ಪ್ರೇಟಾರೆರು. ಸಮಾಧಿಕಾರ ಪಡೆದವರಲ್ಲಿ ನಿಷೇಧಿಸುವನು ಆಜ್ಞೆಮಾಡಿದವನಿಗಿಂತ ಪ್ರಬಲನೆಂಬ ತತ್ತ್ವವು ಅಂಗೀಕೃತವಾಯಿತು ಆದರೂ ಅಧಿಕಾರ ವ್ಯಾಪ್ತಿ ವಿಷಯದಲ್ಲಿ ಘರ್ಷಣೆಗಳು ನಡೆಯುತ್ತಿದ್ದವು. ಸೆನೇಟೊಂದೇ ಶಾಶ್ವತವಾದ ಸಂಸ್ಥೆಯಾದುದರಿಂದ ನ್ಯಾಯಾಧೀಶರು ಸೆನೇಟಿನ ಬದ್ಧರಾಗಬೇಕಾಯಿತು.

ನೋಬಲ್ ವರ್ಗದವರು ಹಳೆಯ ಪೇಟ್ರೇಷಿಯನ್ನರೊಡನೆ ಸೇರಿ ಸೆನೇಟಿಗೆ ಬೆಂಬಲಕೊಡುತ್ತಿದ್ದರು. ನೋಬಲರೆಲ್ಲ ಪೇಟ್ರೇಷಿಯನ್ ಕುಟುಂಬಗಳಿಗೆ ಸೇರಿರಲಿಲ್ಲ. ಹಿರಿಯ ಕ್ಯಾಟೊ, ಸಿಸಿರೊ, ಗ್ರಾಕೈ ಸಹೋದರರು ಪ್ಲಿಬಿಯನ್ನರಾಗಿದ್ದರೂ ಪ್ರಸಿದ್ಧಮನೆತನದವರು ಮತ್ತು ಉನ್ನತಾಧಿಕಾರ ಮಾಡಿದವರು.

**ಪ್ರಾಂತಿಕವ್ಯವಸ್ಥೆ**—ಪ್ರೋಕಾನ್ಸಲ್ ಅಥವಾ ಪ್ರಾಂತಾಧಿಕಾರಿ ಗಳು ರೋಮಿನಿಂದ ದೂರವಿದ್ದಷ್ಟೂ ಪ್ರಬಲರಾಗುತ್ತಿದ್ದರು. ಮಿತ್ರ ರಾಷ್ಟ್ರಗಳು (ಸೋಷಿಯೈ) ಹೆಚ್ಚಿರಲಿಲ್ಲ ಆದರೆ ಹೊಸದಾಗಿ ಗೆದ್ದ ಭಾಗಗಳನ್ನು ಪ್ರಾಂತಗಳಾಗಿ ಮಾಡಿ ರೋಮನ್ ನ್ಯಾಯಾಧಿಕಾರಿಗೆ ಒಪ್ಪಿಸಲಾಯಿತು. ಸೆನೇಟ್ ಈ ಪ್ರಾಂತಗಳನ್ನು "ಲೆಕ್ಸ್ ಪ್ರಾವಿನ್ಸಿಯೆ" ಎಂಬ ಕಾನೂನಿನಪ್ರಕಾರ ನಿರ್ಮಿಸಿ ಅವುಗಳ ವಿಸ್ತಾರ, ಆರ್ಥಿಕವ್ಯವಸ್ಥೆ,

ಹಕ್ಕುಬಾಧ್ಯತೆಗಳು, ನ್ಯಾಯವಿಧಾನ ಆಡಳಿತಕ್ರಮುಗಳನ್ನು ನಿರ್ಧರಿಸು ತ್ತಿದ್ದಿತು ಇವುಗಳ ಮಾರ್ಪಾಟು ಸೆನೇಟನಿಂದಲೇ ಆಗಬೇಕಾಗಿತ್ತು.

**ರೋಮನ್ನರ ಪ್ರಾಂತದಲ್ಲಿ ಪ್ರಾಯಶಃ** ನಗರ ಮತ್ತು ಜನಪದ ವಿಭಾಗಗಳನ್ನು ಅನುಸರಿಸಿ ಅನೇಕ ಪಂಗಡಗಳು (ಸಿವಿಟೇಟಸ್) ಇದ್ದವು. ವಿದೇಶೀಯ ವ್ಯವಹಾರವು ರೋಮಿನ ಹಿಡುವಳಿಯಲ್ಲಿತ್ತು. ಮಿಕ್ಕ ವಿಷಯುಗಳಲ್ಲಿ ಪ್ರತಿ ಪಂಗಡವು (ಸಿವಿಟಾಸ್) ಸ್ವಾತಂತ್ರ್ಯಹೊಂದಿದ್ದಿತು. ರೋಮನ್ ಪ್ರಾಂತಾಧಿಕಾರಿಯು ಕಂದಾಯ ವಸೂಲಿಮಾಡಿ ಸ್ಥಳೀಯ ಆಡಳಿತದಲ್ಲಿ ಬದಲಾವಣೆ ಮಾಡಬಹುದು ನಿರ್ದಿಷ್ಟವಾದ ಕಪ್ಪವನ್ನು ರೋಮಿಗೆ ಸಲ್ಲಿಸಿದ ಮೇಲೆ ಸ್ಥಳೀಯ ಸಂಸ್ಥೆಗಳು ತಮಗೆ ಸೂಕ್ತವೆಂದು ತೋರಿದ ತೆರಿಗೆಗಳನ್ನು ವಿಧಿಸಬಹುದು ರೋಮಿನ ಮೇಲ್ವಿಚಾರಣೆಗೆ ಪ್ರಾಂತಾಧಿಕಾರಿ ಗುರಿಯಾಗಿದ್ದರೂ ವಸ್ತುತಃ ಸ್ವತಂತ್ರನಾಗಿದ್ದುದರಿಂದ ಅವನ ತೀರ್ಪಿನಮೇಲೆ ಅರ್ಜಿಮಾಡಿಕೊಳ್ಳಲು ಅವಕಾಶವಿರಲಿಲ್ಲ. ಅವನು ಹಣವನ್ನು ಸ್ವೇಚ್ಛೆಯಾಗಿ ಖರ್ಚುಮಾಡಬಹುದು. ಸರ ಹದ್ದಿನ ಮೇಲ್ವಿಚಾರಣೆಯಲ್ಲಿ ವಿಶೇಷಾಧಿಕಾರವಿದ್ದಿತು. ಪ್ರತ್ಯೇಕವಾದ ವ್ಯವಹಾರ ವ್ಯವಸ್ಥೆ (ಸಿವಿಲ್‌ಸರ್ವಿಸ್) ಇಲ್ಲದಿದ್ದುದರಿಂದ ಎಲ್ಲ ಅಧಿಕಾರಿ ಗಳು ಪ್ರಾಂತಾಧಿಕಾರಿಯನ್ನು ಅನುಸರಿಸಬೇಕಾಗಿತ್ತು. ಹಣಕಾಸಿನ ವಿಚಾರದಲ್ಲಿ ರೋಮಿನಲ್ಲಿ ನಿಯಮಿತನಾದ ಕ್ವೆಸ್ಟಾರನೂ ಅವನಿಗೆ ಅಧೀನನು. ಅನೇಕ ಪ್ರಾಂತಾಧಿಕಾರಿಗಳಿಗೆ ಅನುಭವವೇ ಇರಲಿಲ್ಲ. ಅವರ ಅಧಿಕಾರಾವಧಿ ಅತ್ಯಲ್ಪವಾದುದರಿಂದ (ಪ್ರಾಯಶಃ ಒಂದು ವರ್ಷ) ಯಾವ ವಿಧದಲ್ಲಾದರೂ ಹಣವನ್ನು ಗಳಿಸುವದೇ ಇವರ ಉದ್ದೇಶ ವಾಗಿತ್ತು. ಇವರನ್ನು ಶಿಕ್ಷಿಸುವದಕ್ಕೂ ಯಾವ ಕಾನೂನು ಇರಲಿಲ್ಲ. ಕ್ರಿ.ಪೂ. ೧೪೯ರಲ್ಲಿ **ಲೆಕ್ಸ್ ಕಾಲ್ಪೂರ್ನಿಯ** ಕಾನೂನಿನ ಪ್ರಕಾರ ಪ್ರಾಂತ ನ್ಯಾಯಾಧೀಶರನ್ನು ವಿಚಾರಿಸಲು ಪ್ರತ್ಯೇಕ ನ್ಯಾಯಸ್ಥಾನಗಳು ಸ್ಥಾಪಿತ ವಾದವು. ಆದರೆ ಪ್ರಾಂತಗಳಿಂದ ಇದಕ್ಕೆ ಅರ್ಜಿಹಾಕಿಕೊಳ್ಳುವದು ಬಡವರಿಗೆ ಸಾಧ್ಯವಾಗಿರಲಿಲ್ಲ. ಮತ್ತು ಕ್ರಿ.ಪೂ. ೧೨೨ ವರೆಗೆ ಸೆನೇಟ ನವರೆ ಈ ನ್ಯಾಯಸ್ಥಾನದಲ್ಲಿ ನ್ಯಾಯಾಧೀಶರಾಗಿದ್ದುದರಿಂದ ಅವರು

ಪ್ರಾಂತಾಧಿಕಾರಿಯ ಪರವಾಗಿಯೇ ಇದ್ದರು. ಅಧಿಕಾರಾವಧಿ ಇರುವ ವರೆಗೂ ಪ್ರಾಂತಾಧಿಕಾರಿ ಮೇಲೆ ದಾವೆಮಾಡಲು ಅವಕಾಶವಿಲ್ಲವಾದ್ದರಿಂದ ಅನಂತರ ಸಾಕ್ಷಿಗಳನ್ನು ಕರಿಸಿ ರುಜುವಾತು ಮಾಡುವದು ಬಹಳ ಕಷ್ಟವಾಗಿತ್ತು. ಪ್ರಾಂತಗಳ ಲೂಟಿ ಬೆಳೆಯಿತು. ವ್ಯವಸ್ಥಿತ ವಿದೇಶೀಯ ವ್ಯವಹಾರವು ಅಸಾಧ್ಯವಾಯಿತು. ಪ್ರಾಂತಗಳಲ್ಲಿ ಒಬ್ಬನು ಆರಂಭಿಸಿದ ಒಳ್ಳೆಯ ಕೆಲಸಗಳನ್ನು ಅವನ ನಂತರ ಬಂದವನು ನಾಶಮಾಡ ಬಹುದು. ಖರ್ಚಿನಮೇಲೆ ಹತೋಟಿಯಾಗಲಿ, ಕಂದಾಯ ವ್ಯವಸ್ಥೆಯಾಗಲಿ, ನಿರ್ದಿಷ್ಟವಾದ ಸರಹದ್ದು ರಕ್ಷಣಾರೀತಿಯಾಗಲಿ ಇರಲಿಲ್ಲ. ರೋಮಿನ ಪ್ರಜಾಪ್ರಭುತ್ವಕ್ಕೂ ಇಂತಹ ಪ್ರಾಂತಾಧಿಕಾರಿಗಳಿಂದ ಆಪತ್ತು ಒದಗುವ ಸಂಭವವಿದ್ದಿತು. ಕ್ರಿ.ಪೂ. ೧೪೬ ಅನಂತರ ಪ್ರೇಟಾರರನ್ನು ಹೊರ ಪ್ರಾಂತ್ಯಗಳಲ್ಲಿ ನೇಮಿಸುವದು ನಿಂತಿತು. ಕಾನ್ಸಲರು ಯುದ್ಧ ಸಮಯದಲ್ಲಿ ಮಾತ್ರ ಹೋಗುತ್ತಿದ್ದರು. ಅವರ ಸ್ಥಳದಲ್ಲಿ ಸೆನೇಟ್ ಬದಲು ನ್ಯಾಯಾಧೀಶ (ಪ್ರೋಕಾನ್ಸಲ್ಸ್ ಅಥವಾ ಪ್ರೋಪ್ರೇಟೋರ್)ರನ್ನು ನೇಮಿಸುತ್ತಿದ್ದಿತು ಇವರು ಇತರ ನ್ಯಾಯಾಧೀಶರಿಗೆ ಅಧೀನರಾಗಿರಲಿಲ್ಲ. ಆದ್ದರಿಂದ ಬಹಳ ಪ್ರಬಲರಾಗಿ ಅನ್ಯಾಯದಿಂದ ಧನ ಸಂಪಾದನೆಮಾಡುತ್ತಿದ್ದರು. ರೋಮಿನಲ್ಲಿದ್ದ ಕಾನ್ಸಲರೂ ಕ್ರಮೇಣ ಈ ಪ್ರೋಕಾನ್ಸಲರ ಸಹಾಯವನ್ನು ರೋಮಿನಲ್ಲಿ ಶಾಂತಿ ಸ್ಥಾಪಿಸಲು ಕೋರಬೇಕಾಯಿತು.

ಪ್ರಾಂತಗಳಿಂದ ಪಡೆದ ವಿಶೇಷ ಧನವು ರೋಮ್ ನಾಗರಿಕರಿಗೆ ಮಾತ್ರ ವಿನಿಯೋಗವಾಗುತ್ತಿದ್ದುದರಿಂದ ರೋಮಿನಲ್ಲಿ ತೆರಿಗೆಗಳನ್ನು ವಿಧಿಸುವ ಆವಶ್ಯಕತೆಯೇ ಇರಲಿಲ್ಲ ಕ್ರಿ ಪೂ ೧೬೭ ರಿಂದ ಎಲ್ಲ ತೆರಿಗೆಗಳು ರದ್ದಾದವು ಸೇನಾಪತಿಗಳು ಸಿಪಾಯಿಗಳು ಲೂಟಿಯಿಂದ ಐಶ್ವರ್ಯವಂತರಾದರು. ನೋಬಲ್ ವರ್ಗದವರು ಪ್ರಾಂತಗಳಲ್ಲಿ ಕಂದಾಯ ವಸೂಲಿಮಾಡುತ್ತ ಧನಿಕರಾದರು. "ಪಬ್ಲಿಕಾನ್ಸೈ" ಎಂಬವರು ಸುಂಕ ಗಣಿಗಳು ಮತ್ತು ಸರ್ಕಾರಿ ಜಮೀನುಗಳನ್ನು ನೋಡಿಕೊಳ್ಳುತ್ತ ಹಣವಂತರಾದರು. ವ್ಯಾಪಾರಸ್ಥರು(ನೆಗೋಷಿಯೈ) ವಿದೇಶ

ವ್ಯಾಪಾರದಿಂದ ಪ್ರಬಲರಾದರು, ಸುಖಲಾಲಸೆ ಹೆಚ್ಚಿತು. ಕ್ರಿ.ಪೂ. ೨೧೫ ರಲ್ಲಿ ಲೆಕ್ಸ್ ಆಪ್ಪಿಯ ಎಂಬ ಕಾನೂನು ರೋಮನ್ ಹೆಂಗಸರ ಉಡುಪು ಒಡವೆ ಅಡುಗೆ ಲಾಲಸೆಯನ್ನು ಹತೋಟಿಯಲ್ಲಿಡಲು ಯತ್ನಿಸಿತು. ಆದರೆ ಅಸಾಧ್ಯವಾಗಿ ಕಾನೂನು ಕ್ರಿ ಪೂ ೧೯೫ ರಲ್ಲಿ ರದ್ದುಮಾಡಲ್ಪಟ್ಟಿತು ಸಂತೋಷಕೂಟಗಳನ್ನು ಹದ್ದಿನಲ್ಲಿಡಲು ಮೂರು ಕಾನೂನುಗಳಾದವು ಗುಲಾಮರ ಸಂಖ್ಯೆ ಹೆಚ್ಚಿ ರೋಮನ್ನರು ಸೋಮಾರಿಗಳಾದರು ಐಶ್ವರ್ಯವನ್ನನುಸರಿಸಿ ಸಮಾಜದಲ್ಲಿ ಹೊಸ ವರ್ಗಗಳು ಏರ್ಪಟ್ಟವು. ನೋಬಲ್ ಜನರು, ವ್ಯಾಪಾರಸ್ಥರು, ನಾಗರಿಕರು ಅಧಿಕಾರಗಳನ್ನು ಪಡೆದುದರಿಂದ ಲಂಚವು ಹೆಚ್ಚಿತು. ಗ್ರೀಕ್ ಸಂಸ್ಕೃತಿ ಹರಡಿ ಕೊನೆಗೆ ಸೆನೇಟ್ ಅಧಿಕಾರವನ್ನು ವಿರೋಧಿಸುವ ಭಾವನೆಯು ಹರಡಿತು. ಕ್ರಾಂತಿಯುಗವು ಆರಂಭವಾಯಿತು.

## ಗುಲಾಮರ ಯುದ್ಧ (ಕ್ರಿ.ಪೂ. ೧೩೯–೧೦೩)

ರೋಮಿನಲ್ಲಿ ಗುಲಾಮರ ಅವಸ್ಥೆಯು ಬರುತ್ತ ಬಹು ಕಠಿಣವಾಗುತ್ತ ಬಂದಿತು ನಗರದಲ್ಲಿ ಸ್ವಲ್ಪ ಉತ್ತಮವಾಗಿದ್ದರೂ ಹಳ್ಳಿಗಳಲ್ಲಿ ಗುಲಾಮರನ್ನು ಪಶುಗಳಿಗಿಂತಲೂ ಹೀನವಾಗಿ ನೋಡುತ್ತಿದ್ದರು. ಕೆಲಸಮಾಡುವಾಗ ಗುಲಾಮರನ್ನು ಸರಪಣಿಗಳಿಂದ ಬಂಧಿಸಿ ರಾತ್ರಿಹೊತ್ತಿನಲ್ಲಿ ಗುಲಾಮರ ಸೆರೆಮನೆ (ಎರ್ಗಾಸ್ಟುಲ) ಗಳಲ್ಲಿ ಕೂಡಿಸಿ ಚಿತ್ರಹಿಂಸೆ ಮಾಡುತ್ತಿದ್ದರು. ಆದ್ದರಿಂದ ಆಗಾಗ ದಕ್ಷಿಣ ಇಟಲಿ ಸಿಸಿಲಿಯಲ್ಲಿ ದಂಗೆಗಳಾಗುತ್ತಿದ್ದವು. ಕ್ರಿ ಪೂ. ೧೩೯ ರಲ್ಲಿ ಇಯೂನಸ್ ಎಂಬುವನು "ಹೆನ್ನ" ಪಟ್ಟಣವನ್ನು ಹಿಡಿದು ರೋಮನ್ ಸೈನ್ಯವನ್ನು ಸೋಲಿಸಿದನು. ಕೊನೆಗೆ ಟೌರೊಮಿನಿಯಂ ಬಳಿಯಲ್ಲಿ ಇವನನ್ನು ಸೋಲಿಸಲಾಯಿತು. ಇವರ ಪರಿಣಾಮವಾಗಿ ಅನ್ಯಾಯವಾಗಿ ಗುಲಾಮರನ್ನಾಗಿ ಮಾಡಿದ್ದ ಕೆಲವರು ಬಿಡುಗಡೆಹೊಂದಿದರು. ಕ್ರಿ.ಪೂ. ೧೦೩ರಲ್ಲಿ ಟ್ರೈಫಾನ್ ಎಂಬುವನು ದಂಗೆ ಏಳಲು ಕ್ರಿ ಪೂ. ೧೦೩ ರಲ್ಲಿ ಅವನನ್ನು ಅಣಗಿಸಿ ಗುಲಾಮರನ್ನು ನಿರಾಯುಧರನ್ನಾಗಿ ಮಾಡಿದರು.

**ಗ್ರಾಕ್ಕೈ ಸಹೋದರರ ಸುಧಾರಣೆಗಳು**—ಇಟಲಿಯಲ್ಲಿ ವ್ಯವಸಾಯವನ್ನು ಅಲಕ್ಷ್ಯಮಾಡಿದುದರಿಂದಲೂ, ದೊಡ್ಡ ಜಮೀನ್ದಾರರೂ ಯಾವಾಗಲೂ ರೋಮಿನಲ್ಲೆ ಇರುತ್ತಿದ್ದುದರಿಂದಲೂ, ಅನೇಕ ಗುಲಾಮರ ಸಹಾಯದಿಂದ ವ್ಯವಸಾಯ ಸಾಗುತ್ತಿದ್ದುದರಿಂದ ಇಟಲಿ ಸ್ಥಿತಿ ಹೀನಾಯವಾಗಿದ್ದಿತು. ಸಾರ್ವಜನಿಕ ಜಮೀನುಗಳು (ಆಗರ್ ಪಬ್ಲಿಕಸ್) ಎಲ್ಲ ದೊಡ್ಡ ಜಮೀನ್ದಾರರ ವಶವಾಗಿದ್ದವು ಇವರು ಈ ಜಮೀನುಗಳು ಸ್ವಂತ ಆಸ್ತಿಯಂತೆ ಮಾಡಿಕೊಂಡು ಗುತ್ತಿಗೆ ಹಾಕಿ ಅಲ್ಪ ಕಂದಾಯಕೊಟ್ಟು ಮಿಕ್ಕ ಲಾಭವನ್ನೆಲ್ಲ ತಾವೇ ಅನುಭವಿಸುತ್ತಿದ್ದರು. ಇದನ್ನು ಬದಲಾಯಿಸಲು ಗ್ರಾಕ್ಕೈ ಸಹೋದರರು ಯತ್ನಿಸಿ ಸೆನೇಟನ್ನು ಪ್ರತಿಭಟಿಸಿ ತಮ್ಮ ಪ್ರಾಣಗಳನ್ನು ಅರ್ಪಿಸಿದರು.

ಇವರು ಸ್ಪೈನಿನಲ್ಲಿ ಪ್ರಖ್ಯಾತನಾದ ಸೆಂಪ್ರೋನಿಯಸ್ ಗ್ರಾಕಸ್ ಮತ್ತು ಹಿರಿಯಸಿಪಿಯೋ ಮಗಳು ವೀರಮಾತೆಯೂ ಆದ ಕಾರ್ನೀಲಿಯ ಎಂಬವರ ಪುತ್ರರು ಬಾಲ್ಯದಿಂದಲೂ ತಮ್ಮ ತಾಯಿಯು ಇವರಿಗೆ ಪ್ರಾಚೀನವೀರರ ಚರಿತ್ರೆಗಳನ್ನು ಬೋಧಿಸಿ ಪ್ರಜಾಪ್ರಭುತ್ವತತ್ತ್ವಕ್ಕೆ ಹೋರಾಡುವಂತೆ ಪ್ರೋತ್ಸಾಹಿಸಿದ್ದಳು ಹಿರಿಯ ಮಗ ಟೈಬೀರಿಯಸ್ ಗ್ರಾಕಸ್ ಕ್ರಿ.ಪೂ. ೧೩೩ರಲ್ಲಿ (೧) ಯಾವ ಜಮೀನ್ದಾರನೂ ೫೦೦ ಜಗೇರಕ್ಕಿಂತ ಹೆಚ್ಚಾಗಿ ಜಮೀನು ಹೊಂದಿರಕೂಡದೆಂದು ಮಿಕ್ಕ ಜಮೀನುಗಳನ್ನು ಬಡರೈತರಿಗೆ ಹಂಚುವಂತೆ ಕಟ್ಟಳೆಮಾಡಲು ಯತ್ನಿಸಿದನು. ಈ ಸಣ್ಣ ರೈತರು ದೊಡ್ಡ ಜಮೀನ್ದಾರರಿಗೆ ತಮ್ಮ ಜಮೀನುಗಳನ್ನು ಮಾರಕೂಡದು ದೊಡ್ಡ ಜಮೀನ್ದಾರರು ಈ ಸುಧಾರಣೆಯನ್ನು ವಿರೋಧಿಸಿದರೂ ಟೈಬೀರಿಯಸ್ಸನು ಕಾನೂನು ಮಾಡಿಸಿ ಜಮೀನುಗಳನ್ನು ಪರೀಕ್ಷಿಸಿ ಪುನಃ ಹಂಚುವದಕ್ಕೆ ಒಂದು ಸಮಿತಿಯನ್ನು ನೇಮಿಸಿದನು. (೨) ಸಾರ್ವಜನಿಕ ಬೆಂಬಲ ಪಡೆಯಲು ನಾಗರೀಕರ ಯುದ್ಧಕರ್ತವ್ಯಾವಧಿಯನ್ನು ಕಡಮೆ ಮಾಡಲು, ಮತ್ತು ಧನಿಕ ಮಧ್ಯಮವರ್ಗದವರು (ಈಕ್ವೈಟ್ಸ್) ಪ್ರಾಂತಾಧಿಕಾರಿಗಳನ್ನು ದಂಡಿಸುವ ನ್ಯಾಯಸ್ಥಾನಗಳಲ್ಲಿ ಪಂಚಾಯಿತರನ್ನಾಗಿ ಮಾಡಲು ಯತ್ನಿಸಿ

ದನು. ಇದರಿಂದ ಸೆನೇಟಿನವರು ಉದ್ರೇಕಗೊಂಡು ಅವನನ್ನು ಖೂನಿಮಾಡಿ, ಶವವನ್ನು ಟೈಬರ್ ನದಿಗೆ ಬಿಸಾಡಿ ಅವನ ಪಂಗಡದವರಿಗೆ ಮರಣದಂಡನೆ ವಿಧಿಸಿದರು. ಜಮೀನುಗಳ ಸಮಿತಿಯು ದದ್ದಾಯಿತು ಆದರೆ ಈ ಸೆನೇಟ್ ಪಂಗಡದವರಾದ ಆಪ್ಟಿಮೇಟರಿಗೆ ವಿರುದ್ಧವಾದ ಟೈಬೀರಿಯಸ್ಸಿನ ಪಂಗಡದ ಪಾಪ್ಯುಲರ್ ಪಾರ್ಟಿಯವರು ಪ್ರಬಲರಾದರು.

## ಗೇಯಸ್ ಸೆಂಪ್ರೋನಿಯಸ್ ಗ್ರಾಕಸ್ (ಕ್ರಿ. ಪೂ. ೧೨೩–೧೨೧)

ಟೈಬೀರಿಯಸ್ಸನ ತಮ್ಮ ಗೇಯಸ್ಸನು ಪಾಪ್ಯುಲರ್ ಪಾರ್ಟಿ ಮುಖಂಡನಾಗಿ ಸೆನೇಟಿನ ಅಧಿಕಾರವನ್ನು ಕಿತ್ತುಕೊಂಡು ಮಧ್ಯಮ ವರ್ಗದ ಈಕ್ವೆಸ್ಟ್ರಿಯನ್ನರಿಗೆ ಕೊಡಲು ಯತ್ನಿಸಿದನು. ಇವನ ಸುಧಾರಣೆಗಳು—(೧) ಈಕ್ವೆಸ್ಟ್ರಿಯನ್ ವರ್ಗ ಮತ್ತು ಜುಡಿಷಿಯ. ಈಕ್ವೆಸ್ಟ್ರಿಯನ್ನರು (ಆರ್ಡೊ ಈಕ್ವೆಸ್ಟ್ರಾರ್) ಮೊದಲು ಅಶ್ವಾರೋಹಕರಾಗಿದ್ದು ೧೮ ಶತಕಗಳ ಪ್ರಕಾರ ಓಟುಮಾಡುತ್ತ ಸರ್ಕಾರಿ ಕುದುರೆಗಳನ್ನು ಹೊಂದಿದ್ದರು. ಬರುತ್ತ ಇತರ ಧನಿಕರೂ ಅಶ್ವಗಳನ್ನು ಹೊಂದಿ ಈಕ್ವೆಸ್ಟ್ರಿಯನ್ನರೆಂದು ಹೆಸರು ಪಡೆದರು. ಇವರು ವರ್ತಕರು. ಸೆನೇಟಿನವರು ವರ್ತಕರಾಗಲು ಅವಕಾಶವಿರಲಿಲ್ಲ. ಆದ್ದರಿಂದ ಈಕ್ವೆಸ್ಟ್ರಿಯನ್ನರು ಪ್ರಾಂತಗಳಲ್ಲಿ ಕಂದಾಯ ವಸೂಲಿ ಕಂಟ್ರಾಕ್ಟು ಮುಂತಾದ ಕೆಲಸದಲ್ಲಿ ಮುಖಂಡರಾಗಿ ಐಶ್ವರ್ಯವಂತರಾಗಿದ್ದರು. ಪ್ರಾಂತಗಳಲ್ಲಿ ಲಂಚಕೋರರಾಗಿದ್ದ ಅಧಿಕಾರಿಗಳು ಸೆನೇಟಿನವರು. ಅವರನ್ನು ಶಿಕ್ಷಿಸಲು ಸೆನೇಟಿಗೇ ಅಧಿಕಾರ, ಆದ್ದರಿಂದ ಗೇಯಸ್ ಗ್ರಾಕಸ್ **ಲೆಕ್ಸ್ ಜುಡಿಷಿಯರಿಯ** ಎಂಬ ಕಾನೂನು ಮಾಡಿ ಈ ನ್ಯಾಯಾಧೀಶರು ಸೆನೇಟರಾಗಿರಕೂಡದೆಂದು ಈಕ್ವೆಸ್ಟ್ರಿಯನ್ನರಾಗಬೇಕೆಂದು ನಿಯಮಿಸಿದನು. ಈ ರೀತಿಯಲ್ಲಿ ನ್ಯಾಯಸ್ಥಾನಗಳು ಈಕ್ವೆಸ್ಟ್ರಿಯನ್ನರ ವಶವಾದವು. (೨) ಗೇಯಸ್ಸನು ಈಕ್ವೆಸ್ಟ್ರಿಯನ್ನರಿಗೆ ಪ್ರೋತ್ಸಾಹಕೊಟ್ಟು ಏಷ್ಯದಲ್ಲಿ ವ್ಯಾಪಾರ ಮಾಡಲು ಅನುಕೂಲ ಕಲ್ಪಿಸಿದನು. ಪ್ರಾಂತಗಳಲ್ಲಿ ಕಂದಾಯಗಳನು

ವಸೂಲಿಮಾಡಿ ನಿರ್ದಿಷ್ಟ ಹಣವನ್ನು ಭಂಡಾರಕ್ಕೆ ಸಲ್ಲಿಸಿ ಮಿಕ್ಕದ್ದನ್ನು ಅನುಭವಿಸಲು ಈಕ್ವೆಸ್ಟ್ರಿಯನ್ನರ ಸಂಸ್ಥೆಗಳನ್ನು ಏರ್ಪಡಿಸಿದನು. (೩) ಸೆನೇಟಿನವರು ತಮ್ಮ ಆಪ್ತರನ್ನು ಪ್ರಾಂತಾಧಿಕಾರಿಗಳನ್ನಾಗಿ ನೇಮಿಸುವ ಹಕ್ಕನ್ನು ಕಸಿದುಕೊಂಡು ಪ್ರಾಂತಗಳ ಹಂಚಿಕೆಯು ಕಾನ್ಸಲರ ಚುನಾವಣೆಗೆ ಮುಂಚೆ ನಡೆಯಬೇಕೆಂದು ವಿಧಿಸಿದನು. (೪) ಲೆಕ್ಸ್ ಡಿಪ್ರೊವೋಕೇಷನ್ ಎಂಬ ಕಾನೂನಿನಿಂದ ಸೆನೇಟಿನವರು ಕಾನ್ಸಲರಿಗೆ ಮರಣದಂಡನೆ ಮಾಡುವ ಹಕ್ಕನ್ನು ಕೊಡದಂತೆ ಮಾಡಿದನು. ಪ್ರತಿಯೊಬ್ಬನೂ ಪ್ರಜೆಗಳಿಗೆ ಅರ್ಜಿಮಾಡಿಕೊಳ್ಳಬಹುದೆಂದು (ಪ್ರೊವೋಕೇಷಿಯೊ) ತೀರ್ಮಾನ ಮಾಡಿದನು. ಈಕ್ವೈಟರಿಗೂ ಪ್ಲಿಬಿಯನ್ನರಿಗೂ ಮತ್ತಷ್ಟು ಉಪಕಾರಮಾಡಿದನು. (೫) ಪ್ಲಿ ಬಿ ಯ ನ್ನ ರಿ ಗೆ ಮಾರ್ಕೆಟ್ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಧಾನ್ಯಮಾರಲು ಏರ್ಪಡಿಸಿದನು. (೬) ಸೈನ್ಯದಲ್ಲಿ ಸಾಮಾನ್ಯ ಸಿಪಾಯಿಗಳಿಗೆ ಸರ್ಕಾರವೇ ಉಡುಪು ಆಯುಧಗಳನ್ನು ಒದಗಿಸಬೇಕು. ಸೈನ್ಯದ ನ್ಯಾಯಸ್ಥಾನಗಳಲ್ಲಿ ಮರಣದಂಡನೆ ವಿಧಿಸಿದರೆ ಸಿಪಾಯಿಗಳು ಅರ್ಜಿಹಾಕಿಕೊಳ್ಳಬಹುದು. (೭) ನಿರುದ್ಯೋಗವನ್ನು ಪರಿಹರಿಸಲು ರಸ್ತೆ, ಸೇತುವೆ, ಧಾನ್ಯ ಸರಬರಾಜು ಕೆಲಸಗಳಲ್ಲಿ ಅವಕಾಶ ಕಲ್ಪಿಸಿದನು. (೮) ಜಮೀನಿಲ್ಲದ ಜನರನ್ನು ಪ್ರಾಂತಗಳಲ್ಲಿ ವಲಸೆ ಮಾಡುವಂತೆ ಪ್ರೇರಿಸಿದನು.

**ಪರಿಣಾಮಗಳು :** ಗೇಯಸ್ಸನು ಎಲ್ಲ ಇಟಾಲಿಯನ್ನರಿಗೂ ನಾಗರಿಕ ಹಕ್ಕುಗಳನ್ನು ಕೊಡಬೇಕೆಂದು ಸಲಹೆ ಮಾಡಿದನು. ಸೆನೇಟ್ ಇದನ್ನು ಪ್ರತಿಭಟಿಸಿತು ಕ್ರಿ.ಪೂ. ೧೨೨ ರಲ್ಲಿ ಗೇಯಸ್ಸಿನ ಟ್ರೈಬ್ಯೂನ್ ಅಧಿಕಾರ ಮುಗಿದಕೂಡಲೆ ಸೆನೇಟಿನವರು ಅವನನ್ನು ಸಾರ್ವಜನಿಕ ಶತ್ರುವೆಂದು ಘೋಷಿಸಿದರು. ಗೇಯಸ್ಸನನ್ನು ಕೊಲ್ಲಿಸಿದರು. ಆದರೆ ಜನರು ಉದ್ರೇಕಗೊಂಡುದರಿಂದ ಗೇಯಸ್ಸಿನ ಕಾನೂನುಗಳನ್ನು ರದ್ದು ಮಾಡಲಾಗಲಿಲ್ಲ. ಇಟಾಲಿಯನ್ನರಿಗೆ ನಾಗರಿಕ ಹಕ್ಕುಗಳನ್ನು ನಿರಾಕರಿಸಿದುದರಿಂದ ಕ್ರಿ ಪೂ. ೯೦ ರಲ್ಲಿ ಸಾಮಾಜಿಕ ಯುದ್ಧವಾಯಿತು.

ಪಾರ್ಟಿ ಕಲಹಗಳು ನಿತ್ಯವೂ ಜರುಗುತ್ತ ಪ್ರಜಾಪ್ರಭುತ್ವಪತನ ಆರಂಭ ವಾಯಿತು.

---

## ಅಧ್ಯಾಯ ೧೧

**ಮೇರಿಯುಸ್**—ಗ್ರಾಕ್ಕೈ ಸಹೋದರರ ವ್ಯವಸಾಯ ಸುಧಾರಣೆಗಳು ಶಾಶ್ವತ ಫಲಕಾರಿಯಾಗಲಿಲ್ಲ ಗೇಯುಸ್‌ಗ್ರಾಕಸನು ಇಟಲಿಯಲ್ಲಿ ಸ್ಥಾಪಿಸಿದ ವಲಸೆಗಳು ಪ್ರವರ್ಧಮಾನವಾಗಲಿಲ್ಲ ಹೊಸ ಕಟ್ಟಡಗಳನ್ನು ಪರಭಾರೆ ಮಾಡಕೂಡದೆಂಬ ಟೈಬೀರಿಯುಸ್ ಗ್ರಾಕಸನ ಶಾಸನವು ರದ್ದಾಯಿತು. ಕ್ರಿ.ಪೂ ೧೧೮ರಲ್ಲಿ ಜಮೀನುಗಳ ಹಂಚಿಕೆಯು ನಿಲ್ಲಿಸಲ್ಪಟ್ಟಿತು. ೧೧೧ ರಲ್ಲಿ ವ್ಯವಸಾಯದಲ್ಲಿದ್ದ ಎಲ್ಲ ಜಮೀನುಗಳು ಸ್ವಂತ ಜಮೀನುಗಳೆಂದೂ ಸಾರ್ವಜನಿಕವಲ್ಲವೆಂದೂ ತೀರ್ಮಾನವಾಯಿತು. ಹೀಗೆ ಆರ್ಥಿಕ ಸುಧಾರಣೆಗಳು ನಿಷ್ಫಲವಾದರೂ ರಾಜಕೀಯ ಸುಧಾರಣೆಗಳು ಜನರಲ್ಲಿ ಆಂದೋಳನವನ್ನುಂಟುಮಾಡಿದವು ಕೋಮುಗಳು ಪ್ರಬಲವಾದವು. ಕ್ರಿ ಪೂ ೧೧೮ ರಲ್ಲಿ ಆಲ್ಪ್ಸ್ ಪರ್ವತಗಳ ಆಚೆ ಗಾಲಿಯ ಟ್ರಾನ್ಸ್ ಆಲ್ಪೈನಿಯ ಎಂಬುದು ಒಂದು ಪ್ರಾಂತವಾಯಿತು. (ಈಗಿನ ಪ್ರೋವೆನ್ಸ್). ಮ್ಯಾಸ್ಸಿಯ (ಮಾರ್ಸೈಲ್ಸ್) ಇತರ ಪಟ್ಟಣಗಳೂ ಇದರಲ್ಲಿ ಸೇರಿದವು. ನಾರ್ಬೋನ್ ರಾಜಧಾನಿಯಾಯಿತು.

**ಜುಗುರ್ಥ ಯುದ್ಧ:** (ಕ್ರಿ ಪೂ. ೧೧೮ ರಲ್ಲಿ) ಪಾಪ್ಯುಲರ್ ಕೋಮಿನವರು ಸೆನೇಟನ್ನು ಪ್ರತಿಭಟಿಸಿದರು. ಆಫ್ರಿಕದಲ್ಲಿ ನ್ಯುಮಿಡಿಯ ರಾಜರನ್ನು ಸಂಹರಿಸಿ ಜುಗುರ್ಥ ರೋಮನ್ನರ ಪಂಚಾಯತಿಯನ್ನು ತಿರಸ್ಕರಿಸಿ ದೇಶವನ್ನೆಲ್ಲ ವಶಮಾಡಿಕೊಂಡನು. ಆದ್ದರಿಂದ ೧೧೨ ರಲ್ಲಿ ಸೆನೇಟ್ ಅವನಮೇಲೆ ಯುದ್ಧ ಆರಂಭಿಸಿತು. ಸೆನೇಟಿನಿಂದ ನೇಮಿತನಾದ ಆಲ್ಬಿನಸ್ಸನ್ನು ಜುಗುರ್ಥ ಸೋಲಿಸಿದನು. ಪಾಪ್ಯುಲರ್ ಪಾರ್ಟಿ

ಯವರು ಒಂದು ವಿಚಾರಣಾ ಸಮಿತಿಯನ್ನು ಮಾಡಿ ಮೇರಿಯಸ್ಸನನ್ನು ಚುನಾಯಿಸಿದರು.

ಗೇಯಸ್ ಮೇರಿಯಸ್ ಸಾಮಾನ್ಯ ಕುಲದವನಾಗಿದ್ದು ಜುಲಿಯಸ್ ಸೀಸರನ ಚಿಕ್ಕಮ್ಮನಾದ ಜೂಲಿಯ ಎಂಬುವಳನ್ನು ವಿವಾಹವಾಗಿದ್ದನು. ಯುದ್ಧದಲ್ಲಿ ಬಹಳ ಅನುಭವಶಾಲಿಯಾದುದರಿಂದ ಜುಗುರ್ಥನ ಮೇಲೆ ಯುದ್ಧ ನಡಿಸಲು ಸೇನಾಪತಿಯಾಗಿ ಚುನಾಯಿತನಾದನು (೧೦೭ ಕ್ರಿ.ಪೂ) ಇವನು ಆಫ್ರಿಕದಲ್ಲಿ ಅನೇಕ ಯುದ್ಧಗಳನ್ನು ಮಾಡಿ ಕ್ರಿ ಪೂ. ೧೦೬ ರಲ್ಲಿ ಜುಗುರ್ಥನನ್ನು ಸೆರೆಹಿಡಿದನು. ನ್ಯುಮಿಡಿಯ ದೇಶವು ಅವನ ಸೋದರಳಿಯನಿಗೆ ಕೊಡಲ್ಪಟ್ಟಿತು.

ಇಷ್ಟರಲ್ಲಿ ಉತ್ತರದಲ್ಲಿ ಸಿಂಬ್ರೈ ಮತ್ತು ಟ್ಯೂಟನ್ನರು ಇಟಲಿಯ ಉತ್ತರ ಸರಹದ್ದನ್ನು ಧಾಳಿಮಾಡಲು ಮೇರಿಯಸ್ಸನು ಅವರ ಮೇಲೆ ಹೋಗಿ (೧೦೬–೧೦೧) ಟ್ಯೂಟನ್ನರನ್ನು ಆಕ್ವಸೆಕ್ಸ್ಟ್ಯಯೈ (ಐಯ್) ಕದನದಲ್ಲಿ ೧೦೨ ರಲ್ಲಿಯೂ, ಸಿಂಬ್ರೈ ಜನರನ್ನು ೧೦೧ ರಲ್ಲಿ ತಾಡಿಯನ್ ಬಯಲು ಕದನದಲ್ಲಿಯೂ ಸೋಲಿಸಿದುದರಿಂದ ಮೇರಿಯಸ್ ಪಾಪ್ಯುಲರ್ ಪಾರ್ಟಿಯವರ ಮೆಚ್ಚುಗೆ ಪಡೆದು ಆರನೆಯ ಸಲ ಕಾನ್ಸಲಾಗಿ ಚುನಾಯಿತನಾದನು. ಇವನ ಮಿತ್ರನಾದ ಸಾಟರ್ನೈನಸ್ ಟ್ರೈಬ್ಯೂನನಾದನು. ಇವರು ಅಪ್ರತಿಮ ಯೋಧರಾದರೂ ರಾಜಕೀಯದಲ್ಲಿ ಕುಶಲರಲ್ಲ. ಸಾಟರ್ನೈನಸ್ಸನು ಪ್ರತಿ ತಿಂಗಳೂ ನಾಗರಿಕರಿಗೆ ಕೊಡುತ್ತಿದ್ದ ಧಾನ್ಯದ ಬೆಲೆ ಕಡಿಮೆ ಮಾಡಿ ಸೆನೇಟನವರು ಇದನ್ನು ಅನುಸರಿಸುವಂತೆ ಮಾಡಿದನು. ಆದರೆ ಇವನು ಮೇರಿಯಸ್ ಮೇಲೆ ಪಿತೂರಿ ಮಾಡಲು ಯತ್ನಿಸಲು ಪಾಪ್ಯುಲರ್ ಪಾರ್ಟಿಯವರು ರೋಮಿನಲ್ಲಿ ಗಲಭೆಮಾಡಿದರು ಆಗ ಸೆನೇಟ್ ಮೇರಿಯಸ್ ಕಾನ್ಸಲಾದುದರಿಂದ ಈ ಗಲಭೆಗಳನ್ನಡಗಿಸಬೇಕೆಂದು ಆಜ್ಞೆ ಮಾಡಿದರು. ಮೇರಿಯಸ್ ಹೀಗೆ ತನ್ನ ಪಾರ್ಟಿಯವರ ಮೇಲೆಯೇ ಬಲಪ್ರಯೋಗ ಮಾಡಬೇಕಾಯಿತು. ಇಷ್ಟರಲ್ಲಿ ಸಾಟರ್ನೈನಸ್ ಕೊಲ್ಲಲ್ಪಟ್ಟುದರಿಂದ ಗಲಭೆಗಳು ನಿಂತವು. ಮೇರಿಯಸ್ಸಿನ ಕೀರ್ತಿಯು ಹೆಚ್ಚಿತು. ಮೇರಿಯಸ್ಸನು

ಸೈನ್ಯದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದನು. ಎಲ್ಲ ತರಗತಿಯವರು ಬಲವಂತವಿಲ್ಲದೆ ಸ್ವೇಚ್ಛೆಯಾಗಿ ಲೀಜಿಯನ್ನುಗಳಿಗೆ ಸೇರಬಹುದಾದರಿಂದ ತಮ್ಮ ಸೇನಾಪತಿಗೆ ಅತ್ಯಂತ ವಿಧೇಯರಾಗಿರುತ್ತಿದ್ದರು. ಇಂತಹ ೬೦೦೦ ಲೀಜಿಯನ್ನುಗಳಿಗೆ ಮೇರಿಯಸ್ಸನು ಅಧಿಕಾರಿಯಾದುದರಿಂದ ಸಲ್ಲನೊಡನೆ ಅಂತರ್ಯುದ್ಧ ನಡಿಸಲು ಸಿದ್ಧನಾದನು.

---

## ಅಧ್ಯಾಯ ೧೨

### ಅಂತರ್ಯುದ್ಧ (ಪ್ರಥಮಘಟ್ಟ ಕ್ರಿ. ಪೂ. ೧೦೦-೮೩)

ಆಪ್ಟಿಮೇಟ್ (ಸೆನೇಟ್) ಮತ್ತು ಪಾಪ್ಯುಲರ್ ಕೋಮಿನವರ ಘರ್ಷಣೆಗಳು ದಿನದಿನಕ್ಕೂ ಹೆಚ್ಚುತ್ತಾ ಬಂದವು. ವ್ಯಾಪಾರಗಾರರಾದ ಮಧ್ಯವರ್ಗದ ಈಕ್ವೆಸ್ಟ್ರಿಯನ್ನರು ಪ್ರಾಂತಗಳಲ್ಲಿ ಸೆನೇಟಿನ ಅಧಿಕಾರಿಗಳನ್ನು ಪ್ರತಿಭಟಿಸಿ ಅವರನ್ನು ಶಿಕ್ಷೆಗೆ ಗುರಿಮಾಡುವಂತೆ ಹೆದರಿಸುತ್ತಿದ್ದರು. ಇವರಲ್ಲದೆ ಮಿತ್ರರಾದ ಇಟಾಲಿಯನ್ನರು ರೋಮನ್ ನಾಗರಿಕ ಹಕ್ಕುಗಳನ್ನು ಕೊಡಬೇಕೆಂದು ಚಳುವಳಿ ನಡಿಸುತ್ತಿದ್ದರು. ಕ್ರಿ. ಪೂ. ೯೧ರಲ್ಲಿ ಮಾರ್ಕಸ್ ಲಿವಿಯಸ್ ಡ್ರೂಸಸ್ ಕೆಲವು ವ್ಯವಸಾಯ ಮತ್ತು ಧಾನ್ಯ ಸರಬರಾಜು ಸಂಬಂಧವಾದ ಕಾನೂನುಗಳನ್ನು ಮಾಡಿಸಿದನು. ಪ್ರತಿನಿಧಿ ಸಭೆಯಲ್ಲಿ ಅನುಮೋದಿತವಾದರೂ ಸೆನೇಟಿನವರು ಪ್ರತಿಭಟಿಸಿ ಡ್ರೂಸಸನ್ನು ಕೊಲ್ಲಿಸಿದರು. ತಕ್ಷಣವೇ **ಸಾಮಾಜಿಕ ಯುದ್ಧ** (೯೦-೮೯) ಆರಂಭವಾಯಿತು. ಇಟಾಲಿಯನ್ನರು ದಂಗೆ ಎದ್ದು ಸ್ವಾತಂತ್ರ್ಯವನ್ನು ಘೋಷಿಸಿದರು ಅವರನ್ನು ಅಣಗಿಸಲು ಮೇರಿಯಸ್ ಮತ್ತು ಸಲ್ಲ ಕಳುಹಿಸಲ್ಪಟ್ಟರು. ಒಂದು ವರ್ಷದಲ್ಲಿ ಅವರು ಶಾಂತಿಸ್ಥಾಪನೆ ಮಾಡಿದರು. ರೋಮ್ ಉದಾರನೀತಿಯನ್ನನುಸರಿಸಬೇಕಾಯಿತು. ಕ್ರಿ. ಪೂ ೯೦ ರಲ್ಲಿ ಕಾನ್ಸಲ್ಲಾದ ಜೂಲಿಯಸ್ ಸೀಸರನು

"ಲೆಕ್ಸ್ ಜೂಲಿಯ" ಎಂಬ ಕಾನೂನು ಮಾಡಿ ವಿಧೇಯರಾದ ಎಲ್ಲ ಜನಾಂಗಗಳಿಗೂ ನಾಗರಿಕ ಹಕ್ಕು ಕೊಟ್ಟನು. ಕ್ರಿ.ಪೂ. ೮೯ ರಲ್ಲಿ ಮತ್ತೆರಡು ಕಾನೂನುಗಳು (ಲೆಕ್ಸ್ ಪ್ಲಾನ್ಷಿಯ ಪಾಪಿರಿಯ ಮತ್ತು ಲೆಕ್ಸ್ ಕಾಲ್ಪೂರ್ನಿಯ) ಪ್ರೇಟಾರರೂ ನ್ಯಾಯಾಧೀಶರೂ ಎಲ್ಲ ಜನರಿಗೂ ನಾಗರಿಕ ಹಕ್ಕು ಕೊಡಬಹುದೆಂದು ತೀರ್ಮಾನಿಸಿದವು. ಇದರಿಂದ ಇಟಾಲಿಯನ್ನರ "ಸಾಮಾಜಿಕ ಯುದ್ಧ" ಕೊನೆಗೊಂಡಿತು

## ಮೇರಿಯಸ್ ಮತ್ತು ಸಲ್ಲರ ಸ್ಪರ್ಧೆ

ಕ್ರಿ.ಪೂ. ೮೮ ರಲ್ಲಿ ಏಷ್ಯದಲ್ಲಿ ಮಿತ್ರಡಾಟಿಸ್ ರೋಮನ್ ಚಕ್ರಾಧಿಪತ್ಯದ ಮೇಲೆ ಯುದ್ಧ ಪ್ರಾರಂಭಿಸಿದನು. ಸಲ್ಪಿಸಿಯಸ್ ಎಂಬ ಮೇರಿಯುಸ್ಸನ ಸ್ನೇಹಿತನು ಈ ಯುದ್ಧದ ಸೇನಾಧಿಕಾರವನ್ನು ಮೇರಿಯುಸ್ಸಿಗೆ ಕೊಡಬೇಕೆಂದು ಸಲಹೆ ಮಾಡಿದನು. ಆದರೆ ಸೆನೇಟಿನವರು ವಿರೋಧಿಸಿ ಓಟುಮಾಡುವ ದಿನ ರಜಾದಿನವೆಂದು ಘೋಷಿಸಿದರು. ಆದ್ದರಿಂದ ಸಲ್ಪೀಸಿಯಸ್ಸನು ಕಾನ್ಸಲರನ್ನು ಓಡಿಸಿ ತನ್ನ ಸಲಹೆಯನ್ನು ಜಾರಿಗೆ ತಂದನು. ಆದರೆ ಸೆನೇಟ್ ಪಕ್ಷದ ಸಲ್ಲ ತನ್ನ ಸೈನ್ಯದೊಡನೆ ರೋಮಿಗೆ ಬರಲು ಮೇರಿಯಸ್ ಮತ್ತು ಸಲ್ಪಿಸಿಯಸ್ ಓಡಿ ಹೋದರು. ಸಲ್ಲನು ಪ್ರತಿನಿಧಿ ಸಭೆಗಳನ್ನು ಹೆದರಿಸಿ ಯಾವ ಕಾನೂನು ಮಾಡುವದಕ್ಕೂ ಮೊದಲು ಸೆನೇಟ್ ಅನುಮತಿ ಪಡೆಯಬೇಕೆಂದು ಕಾನೂನು ಮಾಡಿದನು. ಅನಂತರ ೮೭ ರಲ್ಲಿ ಗ್ರೀಸ್ ದೇಶಕ್ಕೆ ಹಿಂತಿರುಗಿದನು. ತಕ್ಷಣವೇ ಮೇರಿಯಸ್ ವಾಪಸ್ಸು ಬಂದು ಸಿನ್ನನೊಡನೆ ಸೇರಿಕೊಂಡನು. ಇಬ್ಬರೂ ಸೆನೇಟನ್ನು ಹತೋಟಿಗೆ ಸಲ್ಪಿಸಿಯಸ್ಸಿನ ಸುಧಾರಣೆಗಳನ್ನು ಜಾರಿಗೆ ತಂದರು. ಇಷ್ಟರಲ್ಲಿ ಮುದುಕನಾಗಿದ್ದ ಮೇರಿಯಸ್ ಕ್ರಿ.ಪೂ. ೮೬ ರಲ್ಲಿ ಗತಿಸಿಹೋದನು. ಸಿನ್ನ ಒಬ್ಬನೇ ಮೂರು ವರ್ಷ ಆಳಿದನು.

**ಸಿನ್ನನ ಸುಧಾರಣೆಗಳು**—(೧) ಎಲ್ಲ ಇಟಾಲಿಯನ್ನರನ್ನು ೩೫ ಪಂಗಡಗಳಾಗಿ ವಿಭಜಿಸಿದನು. (೨) ನಾಗರಿಕರಿಗೆಲ್ಲ ಮುಫತ್ತಾಗಿ

ಧಾನ್ಯ ಕೊಡುವಂತೆ ಏರ್ಪಾಟು ಮಾಡಿದನು. (೩) ಕ್ಯಾಪುವ ಬಳಿ ಜಮೀನುಗಳನ್ನು ಹಂಚಿದನು. (೪) ಎಲ್ಲ ಸಾಲಗಳನ್ನು ರದ್ದುಮಾಡಿದನು. (೫) ತನಗೆ ಪ್ರಿಯರಾದವರನ್ನು ಪ್ರಾಂತಾಧಿಕಾರಿಗಳಾಗಿ ನೇಮಿಸಿದನು. (೬) ಸಲ್ಲ ನ್ಯಾಯಬಾಹಿರ ದೇಶದ್ರೋಹಿಯೆಂದು ಘೋಷಿಸಿದನು.

ಆದರೆ ಕ್ರಿ.ಪೂ. ೮೫ ರಲ್ಲಿ ಸಲ್ಲ ಮಿತ್ರಡಾಟಿಸನೊಡನೆ ಒಪ್ಪಂದ ಮಾಡಿಕೊಂಡು, ೮೩ ರಲ್ಲಿ ತನ್ನ ಸೈನ್ಯದೊಡನೆ ರೋಮಿಗೆ ಹಿಂತಿರುಗಿದನು. ಇಷ್ಟರಲ್ಲಿ ಸಿನ್ನನ್ನು ಖೂನಿಮಾಡಿದರು. ಆದ್ದರಿಂದ ಕೆಲವರು ಸಾಮ್ನೈಟರು ವಿನಾ ಸಲ್ಲನನ್ನು ಪ್ರತಿಭಟಿಸುವವರೇ ಇಲ್ಲದ್ದರಿಂದ ಸಲ್ಲನ ಮಾರ್ಗವು ಸುಗಮವಾಯಿತು. ಸಾಮ್ನೈಟರನ್ನು ಕೋಲೈನ್ ಗೇಟ್ ಎಂಬ ರೋಮ್ ದ್ವಾರದ ಬಳಿಯಲ್ಲಿ ಸೋಲಿಸಿ ಸಲ್ಲನು ದಿಗ್ವಿಜಯಿಯಾಗಿ ರೋಮನ್ನು ಪ್ರವೇಶಿಸಿದನು ಇದರಿಂದ ಆಪ್ಟಿಮೇಟ್-ಸೆನೇಟ್ ವರ್ಗದವರಿಗೆ ಜಯವಾಗಿ ಪ್ರಜಾಪ್ರಭುತ್ವನಾಶಕ್ಕೆ ಕಾರಣವಾಯಿತು.

---

# ಅಧ್ಯಾಯ ೧೩

## ಸಲ್ಲ. ಪೂರ್ವದೇಶಗಳ ದಿಗ್ವಿಜಯ. ಮಿತ್ರಡಾಟಿಸನೊಡನೆ ಪ್ರಥಮ ಯುದ್ಧ (ಕ್ರಿ.ಪೂ. ೮೭–೮೫)

**ಕಾರಣಗಳು**–ಪೆರ್ಗಾಮಂ ದೇಶದ ರಾಜನಾದ ಮೂರನೆ ಅಟ್ಟಾಲಸ್ ಅಪುತ್ರಕನಾಗಿದ್ದುದರಿಂದ ಸಾಯುವಾಗ ತನ್ನ ದೇಶವನ್ನು ರೋಮಿಗೆ ದತ್ತುಕೊಟ್ಟನು. ಇದರಿಂದ ಮೊದಲನೆಯ ರೋಮನ್ ಪ್ರಾಂತವು ಮೈಸಿಯ, ಲಿಡಿಯ, ಐಯೋನಿಯ ಮತ್ತು ಕ್ಯಾರಿಯ ಭಾಗಗಳನ್ನು ಒಳಗೊಂಡಿತ್ತು. ಹೀಗೆ ರೋಮ್ ಅಲೆಕ್ಸಾಂಡರಿನ ಸಾಮ್ರಾಜ್ಯಕ್ಕೆ ಬಾಧ್ಯತೆ ಹೊಂದಿತು. ಮ್ಯಾಸಿಡೋನಿಯದಲ್ಲು ರೋಮ್ ಸರ್ವಾಧಿಕಾರಿಯಾಗಿತ್ತು. ಈಜಿಪ್ಟಿನ ರಾಜ ಟಾಲೊಮಿ ಮಿತ್ರ

ನಾಗಿದ್ದನು. ಆದರೆ ರೋಮಿನ ವ್ಯಾಪ್ತಿಯನ್ನು ಪಾಂಟಸ್ ರಾಜನಾದ ಮಿತ್ರಡಾಟಿಸನು ವಿರೋಧಿಸಿದನು. ಪ್ಯೂನಿಕ್ ಯುದ್ಧಗಳಲ್ಲಿ ಪಾಂಟಿಸಿಗೂ ರೋಮಿಗೂ ಮೈತ್ರಿ ಇದ್ದಿತು. ಕ್ರಿ ಪೂ. ೧೧೧ ರಲ್ಲಿ ಮಿತ್ರಡಾಟಿಸ್ ಯೂಪೇಟೋರ್ ಕ್ಯಾಪಡೋಷಿಯ ಪಾಂಟಿಕ ಪ್ರಾಂತವನ್ನು ವಶಮಾಡಿಕೊಂಡು ಏಷ್ಯದಿಂದ ರೋಮನ್ನರನ್ನು ಅಟ್ಟಿ ಏಷ್ಯವನ್ನು ಏಷ್ಯನ್ನರಿಗೆ ಗಳಿಸಲು ಯತ್ನಿಸಿದನು ಮಿತ್ರಡಾಟಿಸನು ದೊಡ್ಡ ವಿದ್ವಾಂಸನಾಗಿದ್ದು ೨೨ ಭಾಷೆಗಳಲ್ಲಿ ಪ್ರವೀಣನಾಗಿದ್ದನು. ಗ್ರೀಕ್ ಸಂಸ್ಕೃತಿಯನ್ನು ಮೆಚ್ಚಿ ಅದರ ಪ್ರಚಾರಕ್ಕಾಗಿ ರೋಮನ್ನರನ್ನು ಪ್ರತಿಭಟಿಸಿದನು. ಇವನು ಎಷ್ಟು ದೊಡ್ಡ ರಾಜತತ್ತ್ವವೇತ್ತನೋ ಅಷ್ಟು ಪ್ರತಿಭಾಶಾಲಿಯಾದ ಸೇನಾಪತಿಯೂ ಆಗಿದ್ದನು. ತನ್ನ ಸೈನ್ಯಕ್ಕೆ ಗ್ರೀಕ್ ಸಿಥಿಯನ್ ಥ್ರೇಸಿಯನ್ ಮುಂತಾದವರನ್ನೆಲ್ಲ ಸೇರಿಸಿಕೊಂಡಿದ್ದನು. ಕ್ರಿ ಪೂ ೧೦೪ ರಲ್ಲಿ ಪಾಫ್ಲಗೋನಿಯ ಗಲಾಷಿಯ ಮತ್ತು ಕಾಪ್ಪಡೋಷಿಯ ದೇಶಗಳನ್ನು ಗೆದ್ದನು. ೯೫ ರಲ್ಲಿ ಇವನ ಅಧಿಕಾರವು ಯೂಕ್ಸೈನ್, ಡಾನ್ಯೂಬ್, ಪೂರ್ವದಲ್ಲಿ ಆರ್ಮಿನಿಯ ವರೆಗೂ ಅಂಗೀಕೃತವಾಗಿತ್ತು.

ಕ್ರಿ.ಪೂ. ೯೨ ರಲ್ಲಿ ಸಲ್ಲ ರೋಮನ್ ಸೇನೆಯೊಡನೆ ಸೈಲೀಷಿಯ ಪ್ರವೇಶಿಸಿ ಮಿತ್ರಡಾಟಿಸನನ್ನು ಸೋಲಿಸಿ ಕ್ಯಾಪಡೋಷಿಯುವನ್ನು ಪದಚ್ಯುತನಾಗಿದ್ದ ಆರಿಯೊಬರ್ಸಾನಿಸ್ ಎಂಬವನಿಗೆ ಪುನಃ ಕೊಡಿಸಿದನು. ಪಾರ್ಥಿಯರಾಜನೊಡನೆ ಒಪ್ಪಂದಮಾಡಿಕೊಂಡನು ಕ್ರಿ.ಪೂ. ೯೦ರಲ್ಲಿ ಮಿತ್ರ ಡಾಟಿಸನು ಪುನಃ ಕ್ಯಾಪಡೋಷಿಯ ಬೈಥಿನಿಯ ಮೇಲೆ ಧಾಳಿಮಾಡಿದನು. ಆದರೆ ರೋಮನ್ ಸೇನೆ ಬಂದೊಡನೆ ಬಿಟ್ಟು ಕೊಟ್ಟನು. ಒಂದು ದೊಡ್ಡ ಸಮ್ಮೇಳನ ಮಾಡಿ ಅಪಾರವಾದ ಸೈನ್ಯ ಮತ್ತು ನೌಕಾಬಲವನ್ನು ಸಂಗ್ರಹಿಸಿ ಕ್ರಿ.ಪೂ. ೮೮ ರಲ್ಲಿ ಬೈಥಿನಿಯ ರಾಜನೂ ರೋಮಿನ ಮಿತ್ರನೂ ಆದ "ನಿಕೋಮಿಡೀಸ"ನು ತನ್ನ ರಾಜ್ಯ ಪಾಂಟಸ್ ಮೇಲೆ ದಂಡೆತ್ತಿ ಬಂದಾಗ ನಿಕೋಮಿಡಿಸನನ್ನು ಸೋಲಿಸಿ ಬೈಥಿನಿಯ ತೆಗೆದುಕೊಂಡು ರೋಮನ್ ಸೈನ್ಯವನ್ನು ಪರಾಭವ

ಮಾಡಿ ರೋಮನ್ ಕಾನ್ಸಲರನ್ನೇ ಸೆರೆಹಿಡಿದನು, ರೋಮನ್ನರನ್ನೆಲ್ಲ ಓಡಿಸಿಬಿಟ್ಟನು ಹೀಗೆ ಮಿತ್ರಡಾಟಿಸನು ಬೈಥಿನಿಯ, ಕ್ಯಾಪಡೋಷಿಯ, ಫ್ರಿಜಿಯ, ಲೈಸಿಯ ಮತ್ತು ಪಾಂಫಿಲಿಯ ಪ್ರಾಂತಗಳಿಗೆ ರಾಜನಾದನು. ಗ್ರೀಸಿನಲ್ಲಿ ಅಥೆನ್ಸ್ ಬೋಯಿಷಿಯ ಸ್ಪಾರ್ಟ ಮತ್ತು ಏಕಿಯ ಅವನ ಮಿತ್ರರಾದವು ಏಷ್ಯ ಯೂರೋಪ್ ಖಂಡಗಳಲ್ಲಿ ಎಲ್ಲೆಲ್ಲೂ ಗ್ರೀಕ್ ಪಟ್ಟಣಗಳು ರೋಮನ್ನರ ಮೇಲೆ ದಂಗೆ ಎದ್ದವು.

ಕ್ರಿ.ಪೂ. ೮೭ ರಲ್ಲಿ ಸಲ್ಲ ಪುನಃ ಗ್ರೀಸನ್ನು ಪ್ರವೇಶಿಸಿ ಅಥೆನ್ಸನ್ನು ತೆಗೆದುಕೊಂಡು ನಾಶಮಾಡಿದನು ಗ್ರೀಕ್ ರಾಷ್ಟ್ರಗಳು ಶರಣಾಗತ ವಾದವು. ಉತ್ತರ ಗ್ರೀಸಿನಲ್ಲಿ ಏಷ್ಯಾ ಸೈನ್ಯವನ್ನು ಕೆರೋನಿಯ ಮತ್ತು ಆರ್ಕೋಮಿನಸ್ ಎಂಬ ಸ್ಥಳಗಳಲ್ಲಿ ಸೋಲಿಸಿದನು. ಏಷ್ಯದಲ್ಲಿ ಮಿತ್ರ ಡಾಟಿಸ್ಸಿನ ರಾಜ್ಯಕ್ರಮವು ನಿರಂಕುಶವಾದ್ದರಿಂದ ಅಲ್ಲಿನ ಗ್ರೀಕ್ ಪಟ್ಟಣ ಗಳು ರೋಮ್ ಕಡೆ ಸೇರಿದವು. ಇಷ್ಟರಲ್ಲಿ ರೋಮಿನಲ್ಲಿ ಮೇರಿಯಸ್ ಮತ್ತು ಸಿನ್ನ ಪ್ರಬಲರಾದ್ದರಿಂದ ಸಲ್ಲ ರೋಮಿನಲ್ಲಿ ತನ್ನ ಪಾರ್ಟಿಯ ವರನ್ನು ಬಲಪಡಿಸಿಕೊಳ್ಳಬೇಕಾಯಿತು. ಸಿನ್ನ ಸಲ್ಲನಿಗೆ ಕೊಟ್ಟಿದ್ದ ಸೈನ್ಯಾಧಿಕಾರವನ್ನು ರದ್ದುಮಾಡಿ ಫ್ಲಾಕಸ್ ಮತ್ತು ಫಿಂಬ್ರಿಯ ಎಂಬವ ರನ್ನು ನೇಮಿಸಿದ್ದನು. ಆದರೆ ಇವರು ತಮ್ಮಲ್ಲೇ ಜಗಳವಾಡಿ ಫಿಂಬ್ರಿಯ ಫ್ಲಾಕಸನನ್ನು ಕೊಂದನು. ಸಲ್ಲನಿಗೆ ಹೆದರಿ ಫಿಂಬ್ರಿಯ ಓಡಿಹೋಗಿ ಲಿಡಿಯ ದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡನು. ಸಲ್ಲ ಮಿತ್ರಡಾಟಿಸಿ ನೊಡನೆ ಕ್ರಿ.ಪೂ ೮೫ ರಲ್ಲಿ ಪಿಲಿಪ್ಪೈ (ಡಾರ್ಡನಸ್) ಕರಾರು ಮಾಡಿ ಕೊಂಡನು. ಕ್ಯಾಪಡೋಷಿಯ ಮತ್ತು ಬೈಥಿನಿಯ ಆ ರಾಜರಿಗೆ ಕೊಡಲಾಯಿತು. ಮಿತ್ರಡಾಟಿಸನು ಪಾಂಟಸಿಗೆ ಹಿಂತಿರುಗಿದನು. ಸಲ್ಲ ೮೪ ರಲ್ಲಿ ಗ್ರೀಸ್ ಮತ್ತು ಏಷ್ಯ ಪುನರ್ವ್ಯವಸ್ಥೆಮಾಡಿದನು. ದಂಗೆ ಎದ್ದಿದ್ದವರಿಗೆಲ್ಲ ಮರಣದಂಡನೆ ವಿಧಿಸಿ ಆ ದೇಶಗಳ ಮೇಲೆ ೨೦೦೦೦ ಟಾಲೆಂಟ್ ಜುಲ್ಮಾನೆ ಹಾಕಿದನು. ಪ್ರಾಂತವನ್ನು ೪೪ ಜಿಲ್ಲೆಗಳಾಗಿ ವಿಭಾಗಿಸಿದನು. ಆದರೂ ಹದಿನಾಲ್ಕು ವರ್ಷಾನಂತರವೂ ಈ ಅಧಿಕ

ಜುಲ್ಮಾನೆಯೂ ವಸೂಲಾಗಲಿಲ್ಲ. ಗ್ರೀಸಿನಲ್ಲೂ ಸಲ್ಲ ಹೀಗೆಯೇ ದರೋಡೆ ಲೂಟಿಮಾಡಿ ರೋಮಿಗೆ ಹಿಂತಿರುಗಿದನು.

## ಎರಡನೆಯ ಮಿತ್ರಡಾಟಿಸ್ ಯುದ್ಧ (ಕ್ರಿ.ಪೂ. ೮೧)

ಡಾರ್ಡನಸ್ (ಫಿಲಿಪ್ಪೈ) ಒಪ್ಪಂದವು ಬಹಳಕಾಲವಿರಲಿಲ್ಲ. ಏಷ್ಯಾ ಅಧಿಕಾರಿಯಾದ ಮುರೈನ ಮಿತ್ರಡಾಟಿಸನ ರಾಜ್ಯದ ಮೇಲೆ ಮೂರುಸಲ ಧಾಳಿಮಾಡಿದನು. ಆದರೆ ಸೈನೊಪೆ ಬಳಿಯಲ್ಲಿ ಮಿತ್ರ ಡಾಟಿಸನು ಸೋತನು. ಕೊನೆಗೆ ಸಲ್ಲನು ಈ ಯುದ್ಧವನ್ನು ನಿಲ್ಲಿಸಿದನು. ಆದರೆ ರೋಮನ್ನರು ಲಿಖಿತಕರಾರು ಕೊಡಲು ನಿರಾಕರಿಸಿದ್ದರಿಂದ ಮಿತ್ರಡಾಟಿಸನು ಪುನಃ ಯುದ್ಧಕ್ಕೆ ಸಿದ್ಧನಾದನು.

## ಸಲ್ಲನ ನಿರಂಕುಶಾಧಿಕಾರ (ಕ್ರಿ.ಪೂ. ೮೧-೭೯)

ರೋಮಿನಲ್ಲಿ ಸಲ್ಲ ಸರ್ವಾಧಿಕಾರಿ (ಡಿಕ್ಟೇಟರ್) ಆದನು. ಹಿಂದೆ ಡಿಕ್ಟೇಟರ್ ಎಂದರೆ ಕಾನ್ಸಲರರಲ್ಲಿ ಒಬ್ಬನನ್ನು ಆರು ತಿಂಗಳುಗಳಿಗೆ ಮಾತ್ರ ಸೆನೇಟಿನವರು ಮಾಡುತ್ತಿದ್ದರು. ಆದರೆ ಈಗ ಸಲ್ಲನಿಗೆ ಆಜೀವ ಸರ್ವಾಧಿಕಾರವನ್ನೂ ಮರಣದಂಡನೆ ವಿಧಿಸುವ ಅಧಿಕಾರವನ್ನೂ ಸಂಪೂರ್ಣವಾಗಿ ಕೊಡಲಾಯಿತು. ಕೂಡಲೆ ಸಲ್ಲನು ತನ್ನ ಪ್ರತಿಕಕ್ಷಿಗಳ ಮೇಲೆ ಸೇಡನ್ನು ತೀರಿಸಿಕೊಂಡನು. ಕೊಲ್ಲುವದು, ಬಹಿಷ್ಕಾರ ಹಾಕುವದು ಆಸ್ತಿ ಸ್ವಾಧೀನಮಾಡಿಕೊಳ್ಳುವದು ನಿತ್ಯ ದಿನಚರಿಯಾ ಯಿತು. ೪೦ ಸೆನೇಟರರು ೧೬೦೦೦ ಈಕ್ವೈಟರು ಕೊಲ್ಲಲ್ಪಟ್ಟರು. ಬಹಿಷ್ಕೃತರಾದವರ ಮಕ್ಕಳು ಮೊಮ್ಮಕ್ಕಳು ಯಾವ ಪದವಿಗೂ ಅನರ್ಹರೆಂದು ಘೋಷಿಸಿದನು. ಪಟ್ಟಣಗಳು ನಿರ್ಜನವಾದವು, ರೈತರು ಗುಲಾಮರಾದರು. ಅವರ ಜಮಿನುಗಳನ್ನು ಕಸಿದುಕೊಂಡು ತನ್ನ ಪಾರ್ಟಿಯವರಿಗೆ ಹಂಚಿಸಿದನು. ಸ್ವಾತಂತ್ರ್ಯವು ಅದೃಶ್ಯವಾಯಿತು. ಎಲ್ಲ ವಿರೋಧಿಗಳನ್ನು ಅಣಗಿಸಿದನು. ಸಾಮ್ರಾಜ್ಯಂ ಜನರಹಿತ ವಾಯಿತು.

**ಸಲ್ಲನ ಸುಧಾರಣೆಗಳು**-(೧) ಸೆನೇಟನಲ್ಲಿ ತನ್ನ ಅನುಚರರನ್ನು ತುಂಬಿ ಯಾವ ಕಾನೂನು ಮಾಡುವದಕ್ಕೂ ಸೆನೇಟಿನ ಅನುಮೋದನೆ ಮೊದಲು ಪಡೆಯಬೇಕು. ಇದರಿಂದ ಸೆನೇಟಿನ ಪ್ರತಿಷ್ಠೆ ಹೆಚ್ಚಾಯಿತು. (೨) ನ್ಯಾಯಾಧೀಶರ ಮತ್ತು ಟ್ರೈಬ್ಯೂನರ ನಿಷೇಧ ಶಕ್ತಿಯನ್ನು (ಇಂಟರ್ ಸೆಸ್ಸಿಯೊ) ಪ್ಲೈಬಿಯನ್ ವ್ಯಕ್ತಿಗಳ ವಿಷಯದಲ್ಲಿ ಮಾತ್ರ ಪ್ರಯೋಗಿಸುವಂತೆ ಆಜ್ಞೆಮಾಡಿ ಅವರ ಅಧಿಕಾರವ್ಯಾಪ್ತಿಯನ್ನು ಸಂಕುಚಿತಮಾಡಿದನು. (೩) ಯಾವ ಟ್ರೈಬ್ಯೂನನು ನ್ಯಾಯಾಧೀಶನಾಗಲು ಅವಕಾಶಕೊಡಲಿಲ್ಲ. (೪) ನ್ಯಾಯಸ್ಥಾನಗಳನ್ನು ಸೆನೇಟಿನ ಅಧಿಕಾರಕ್ಕೆ ಒಳಪಡಿಸಿ ಈಕ್ವೆಸ್ಟ್ರಿಯನ್ನರ ಹಕ್ಕನ್ನು ಕಸಿದುಕೊಂಡನು (೫) ಒಬ್ಬ ಕಾನ್ಸಲನನ್ನು ಪುನಃ ಚುನಾಯಿಸಬೇಕಾದರೆ ಹತ್ತು ವರ್ಷ ಕಳೆಯಬೇಕೆಂಬ ಹಳೆಯ ಕಾನೂನನ್ನು ಪುನಃ ಜಾರಿಗೆ ತಂದನು. (೬) ಪ್ರೇಟಾರರ ಸಂಖ್ಯೆಯನ್ನು ಆರರಿಂದ ಎಂಟಕ್ಕೂ, ಕ್ವೆಸ್ಟಾರರನ್ನು ಇಪ್ಪತ್ತಕ್ಕೂ ಏರಿಸಿ ನ್ಯಾಯಾಧೀಶರ ಅಧಿಕಾರವನ್ನು ಕಡಿಮೆಮಾಡಿದನು. (೭) ಮತಸಂಬಂಧವಾದ ಪಾಂಟಿಫಿಸ್ ಮತ್ತು ಆಗರ್ ಎಂಬ ಪುರೋಹಿತರ ಸ್ಥಾನಕ್ಕೆ ಕಮಿಷಿಯಗಳಿಂದ ಚುನಾವಣೆಯಾಗುತ್ತಿದ್ದುದನ್ನು ರದ್ದುಮಾಡಿ ಸೆನೇಟಿನ "ನೋಬಲ"ರು ತಮ್ಮಲ್ಲಿಯೇ (ಕೋ-ಆಪ್ಟಿಯೊ) ಮಾಡುವಂತೆ ಮಾಡಿದನು (೮) ಕಮಿಷಿಯ ಟ್ರಿಬ್ಯೂಟ ಸಭೆಯು ಟ್ರೈಬ್ಯೂನರನು ಕೆಳದರ್ಜೆ ನ್ಯಾಯಾಧೀಶರನ್ನು ಚುನಾಯಿಸುವದಲ್ಲದೆ ಇತರ ಹಕ್ಕುಗಳನ್ನೆಲ್ಲ ರದ್ದುಮಾಡಿದನು ಈ ಟ್ರೈಬ್ಯೂನರು ಕೂಡ ಸೆನೇಟಿನ ಮೇಲ್ವಿಚಾರಣೆಗೆ ಬದ್ಧರಾಗಿರಬೇಕು. (೯) ಸಲ್ಲ ಒಂದೇ ಒಂದು ಒಳ್ಳೆಯ ಸುಧಾರಣೆ ಮಾಡಿದನು. ರೋಮನ್ ಕ್ರಿಮಿನಲ್ ಕಾನೂನಿನ ಮೂಲತತ್ತ್ವವನ್ನು ಸ್ಥಾಪಿಸಿದನು. ಪ್ರಾಂತಗಳ ನ್ಯಾಯಾಧೀಶರ ಲಂಚಕೋರತನ, ದೇಶದ್ರೋಹ, ಅನ್ಯಾಯ ದ್ರವ್ಯ ಸಂಗ್ರಹಣೆಗಳಲ್ಲದೆ ಮುಖ್ಯ ಕ್ರಿಮಿನಲ್ ಅಪರಾಧಗಳನ್ನೂ ರೋಮಿನಲ್ಲಿ ತನಿಖೆ ಮಾಡಬಹುದೆಂದು ಕಾನೂನುಮಾಡಿದನು.

ಇಂತಹ ಆಪಾದನೆಗಳ ವಿಚಾರಣೆಯಲ್ಲಿ ಸೆನೇಟರವರೇ ಪಂಚಾಯಿತರಾಗಿರಬೇಕು.

**ಪರಿಣಾಮ**—ಹೀಗೆ ಸಲ್ಲ ಪ್ರಜಾಪ್ರಭುತ್ವತತ್ತ್ವಗಳನ್ನೆಲ್ಲ ರದ್ದು ಮಾಡಿ ತನ್ನ ಪಾರ್ಟಿಯವರ ಹಿತಕ್ಕಾಗಿ ರಾಜ್ಯಪದ್ಧತಿಯನ್ನೇ ಬದಲಾಯಿಸಿದನು. ಇವನ ಆದರ್ಶವನ್ನನುಸರಿಸಿ ಮುಂದೆ ಇತರರೂ ನಿರಂಕುಶಾಧಿಕಾರವನ್ನು ಸ್ಥಾಪಿಸಿದರು. ಇಟಾಲಿಯನ್ನರ ನಾಗರೀಕ ಹಕ್ಕುಗಳನ್ನು ಅಂಗೀಕರಿಸಿದರೂ ಸಲ್ಲ ಅವುಗಳನ್ನು ಜಾರಿಗೆ ತರಲು ಯಾವ ಏರ್ಪಾಡನ್ನು ಮಾಡಲಿಲ್ಲ. ಮತ್ತು ರೋಮಿನ ಅಧಿಕಾರವನ್ನೇ ಪ್ರತಿಭಟಿಸುತ್ತಿದ್ದ ಸ್ವತಂತ್ರರೂ ಬಲಿಷ್ಠರೂ ಆಗುತ್ತಿದ್ದ ಪ್ರಾಂತಾಧಿಕಾರಿಗಳ ಮತ್ತು ಸೇನಾಪತಿಗಳ ಅಧಿಕಾರವನ್ನು ಹತೋಟಿಯಲ್ಲಿಡಲು ಯಾವ ಪ್ರಯತ್ನವನ್ನು ಮಾಡಲಿಲ್ಲ.

**ಸಲ್ಲ**—ಮೂರು ವರ್ಷ ನಿರಂಕುಶಾಧಿಕಾರ ಮಾಡಿದನು. ಕ್ರಿ.ಪೂ. ೭೯ ರಲ್ಲಿ ನಿವೃತ್ತನಾಗಿ ೭೮ ರಲ್ಲಿ ಗತಿಸಿದನು. ಇವನ ಆಪ್ತನಾದ ಪಾಂಪೆ ಪ್ರಬಲನಾಗುತ್ತಿದ್ದು ಸಲ್ಲನ ಅನಂತರ ತನ್ನ ಸರ್ವಾಧಿಕಾರವನ್ನು ಸ್ಥಾಪಿಸಿದನು.

---

# ಅಧ್ಯಾಯ ೧೪

## ಮಹಾಪುರುಷ ಪಾಂಪೆ (ಕ್ರಿ.ಪೂ. ೧೦೬–೪೮)

ಸಲ್ಲನ ಅನಂತರ ರೋಮಿನಲ್ಲಿ ಕ್ರಿಪೂ. ೬೧ ರವರೆಗೆ ದಂಗೆಗಳು ಅಂತಯುರ್ದ್ಧಗಳು ಸರ್ವೇಸಾಮಾನ್ಯವಾದವು. ಸೈನ್ಯಬಲವೇ ಎಲ್ಲ ರಾಜಕೀಯ ಪ್ರಶ್ನೆಗಳಿಗೆ ತೀರ್ಪುಕೊಡುವಂತಾಯಿತು. ಕಂದಾಯ ವಸೂಲಿಮಾಡುವ ಪಬ್ಲಿಕಾನ್ಸೈ ಪ್ರಾಂತಗಳನ್ನು ಕೊಳ್ಳೆ ಹೊಡೆಯುತ್ತಿದ್ದರು. ರೋಮಿನಲ್ಲಿ ನಾಗರೀಕರ ಸೋಮಾರಿತನವೂ ವಿಷಯಾಭಿಲಾಷೆಯೂ ಹೆಚ್ಚಿ ಸಂಸಾರಗಳೇ ಕೆಟ್ಟುಹೋದವು. ದಾಂಪತ್ಯವಿಚ್ಛೇದವು

ಅತಿ ಸುಲಭವಾಗಿ ಗೃಹಸ್ಥಧರ್ಮವು ಕೆಟ್ಟುಹೋಯಿತು. ಗುಲಾಮರು ಹೆಚ್ಚಾದರು. ಹದ್ದು ಹತೋಟಿ ಇಲ್ಲದೆ ರೋಮಿನ ನಾಗರೀಕರು ತಿಂಡಿ ತಮಾಷೆ (ಬ್ರೆಡ್ ಮತ್ತು ಸರ್ಕಸ್) ಬಿಟ್ಟಿಯಾಗಿ ಸಿಕ್ಕುತ್ತಿದ್ದುದರಿಂದ ಯಾವ ಪ್ರಬಲ ನೋಬಲ್ ಇವುಗಳನ್ನು ಒದಗಿಸುವನೋ ಅವನಿಗೆ ಬೆಂಬಲಕೊಡುತ್ತಿದ್ದರು. ರೋಮಿನಲ್ಲಿ ಆಪ್ಟಿಮೇಟ್ ಅಥವಾ ಸೆನೇಟ್ ಪಾರ್ಟಿಯುವರು ಎಲ್ಲ ಮುಖ್ಯ ಪದವಿಗಳನ್ನು ಆಕ್ರಮಿಸಿದ್ದರು. ಪಾಪ್ಯುಲರ್ ಪಾರ್ಟಿಯುವರು ಸೆನೇಟನ್ನೂ ಪ್ರಾಂತಾಧಿಕಾರಿಗಳನ್ನೂ ವಿರೋಧಿಸುತ್ತಿದ್ದರು. ಆದರೆ ಪಾಪ್ಯುಲರ್ ಪಾರ್ಟಿಯಲ್ಲಿ ರೋಮಿನ ನಾಗರಿಕರಲ್ಲದೆ ಚಕ್ರಾಧಿಪತ್ಯದ ಇತರರಿಗೆ ಅವಕಾಶವಿರಲಿಲ್ಲ. ಪಾಂಪೆ ಆಪ್ಟಿಮೇಟರ ಕಡೆ, ಜೂಲಿಯಸ್ ಸೀಸರ್ ಪಾಪ್ಯುಲರ್ ಪಾರ್ಟಿಯಲ್ಲೂ ಮುಖಂಡರಾದರು ಕ್ರಿ.ಪೂ. ೭೮–೭೭ ರಲ್ಲಿ ಸಲ್ಲನ ಮರಣಾನಂತರ ಲೆಪಿಡಸ್ಸನು ಸಲ್ಲನ ಕಾನೂನುಗಳನ್ನೆಲ್ಲ ಬದಲಾಯಿಸಲು ಯತ್ನಿಸಿದನು. ಆದರೆ ವಿಫಲವಾಯಿತು. ಸ್ಪೈನಿನಲ್ಲಿ ಸಲ್ಲನಿಗೆ ವಿರೋಧಿಯಾಗಿದ್ದ ಸೆರ್ಟೋರಿಯಸ್ ದಂಗೆಯೆದ್ದು ರೋಮನ್ ಸೈನ್ಯವನ್ನು ಸೋಲಿಸಿದನು. ಪಾಂಪೆ ಬಹಳ ಪ್ರಯತ್ನಪಟ್ಟು ೭೨ ರಲ್ಲಿ ದಂಗೆಯನ್ನು ಅಣಗಿಸಿದನು.

## ಗುಲಾಮರ ಯುದ್ಧ

ಕ್ರಿ.ಪೂ. ೭೩ ರಲ್ಲಿ ಗುಲಾಮರೆಲ್ಲ ಸ್ಪಾರ್ಟಾಕಸ್ ಎಂಬವನ ನೇತೃತ್ವದಲ್ಲಿ ದಂಗೆ ಎದ್ದರು. ಸ್ಪಾರ್ಟಾಕಸ್ಸನು ೭೦,೦೦೦ ಸೈನ್ಯವನ್ನು ಸೇರಿಸಿ ರೋಮನ್ ಸೈನ್ಯವನ್ನು ಎರಡುಸಲ ಸೋಲಿಸಿ ದಕ್ಷಿಣ ಇಟಲಿಯಲ್ಲಿ ಪ್ರಬಲನಾದನು. ರೋಮಿನಲ್ಲಿ ಗಾಬರಿ ಉಂಟಾಯಿತು. ಎರಡು ವರ್ಷಗಳ ಅನಂತರ ಪ್ರೇಟಾರನಾದ ಕ್ರಾಸಸ್ ಸ್ಪಾರ್ಟಾಕಸ್ಸನನ್ನು ಅಪೂಲಿಯದಲ್ಲಿ ಕ್ರಿ.ಪೂ. ೭೧ ರಲ್ಲಿ ಸೋಲಿಸಿ ಕೊಂದು ದಂಗೆಯನ್ನಣಗಿಸಿದನು ಇದರಿಂದ ರೋಮಿನ ಅಧಿಕಾರ ಎಷ್ಟು ಶಿಥಿಲವಾಗಿದ್ದಿತೆಂದು ಕಂಡುಬರುವದು.

## ಏಷ್ಯ. ಮೂರನೇ ಮಿತ್ರಡಾಟಿಸ್ ಯುದ್ಧ (೭೪-೬೨)

ಕ್ರಿ.ಪೂ. ೭೭ ರಲ್ಲಿ ಮಿತ್ರಡಾಟಿಸನು ಒಂದು ಮಿತ್ರರಾಷ್ಟ್ರಗಳ ಸಮ್ಮೇಳನ ಮಾಡಿ ರೋಮನ್ನರನ್ನು ಎದುರಿಸಲು ಸಿದ್ಧವಾಗುತ್ತಿದ್ದನು. ಅವನ ಅಳಿಯ ಆರ್ಮೀನಿಯ ರಾಜನಾದ ಟೈಗ್ರಾನೀಸನು ಕ್ಯಾಪಡೋಷಿಯ ಮೇಲೆ ಧಾಳಿಮಾಡಿದನು. ಸ್ಪೈನಿನ ಸೆರ್ಟೋರಿಯಸ್ಸನೊಡನೆಯೂ ಇಲ್ಲಿರಿಯದ ನೀರ್ಗಳ್ಳರೊಡನೆಯೂ ಒಪ್ಪಂದ ಮಾಡಿಕೊಂಡನು. ಕ್ರಿ.ಪೂ. ೭೪ ರಲ್ಲಿ ಬೈಥಿನಿಯ ರಾಜನಾದ ನಿಕೋಮಿಡೀಸನು ಸತ್ತಾಗ ತನ್ನ ರಾಜ್ಯವನ್ನು ರೋಮಿಗೆ ಕೊಟ್ಟುಬಿಟ್ಟನು. ಆದರೆ ಮಿತ್ರಡಾಟಿಸನು ಕೂಡಲೆ ಬೈಥಿನಿಯ ಚಾಲ್ಸಿಡಾನ್ ಮೇಲೆ ಧಾಳಿಮಾಡಿದನು. ಸೈಸಿಕಸ್ ಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಅವನ ನೌಕಾಬಲವು ಪೂರ್ವ ಮೆಡಿಟರೇನಿಯನ್ನಲ್ಲಿ ಪ್ರಬಲವಾಯಿತು.

ರೋಮನ್ ಅಧಿಕಾರಿಯಾದ ಲುಸುಲಸ್ ಮಿತ್ರಡಾಟಿಸನ ನೌಕಾಬಲವನ್ನು ಸೋಲಿಸಿ ಕ್ರಿ.ಪೂ. ೭೩ ರಲ್ಲಿ ಪಾಂಟಸ್ ಮೇಲೆಯೇ ದಂಡೆತ್ತಿ ಹೋದನು. ಕ್ರಿ ಪೂ. ೭೨ರಲ್ಲಿ ಮಿತ್ರಡಾಟೀಸನು ಪರಾಜಿತನಾಗಿ ಓಡಿಹೋದನು. ೭೧ ರಲ್ಲಿ ಲೂಸುಲಸ್ ಪಾಂಟಸ್ ಮತ್ತು ಆರ್ಮೀನಿಯ ದೇಶಗಳನ್ನು ಗೆದ್ದನು. ಮತ್ತು ಸಲ್ಲನ ಸುಧಾರಣೆಗಳಿಂದ ಏಷ್ಯದಲ್ಲಿ ಆಗಿದ್ದ ಅನಾಹುತಕ್ಕೆ ತಕ್ಕ ಕಾರ್ಯಮಾಡಲು ಯತ್ನಿಸಿದನು. ಬಡ್ಡಿದರವನ್ನು ಶೇ. ೧೨ ಕ್ಕೆ ಇಳಿಸಿದನು. ಆಧಾರಮಾಡಿದ ಜಮೀನುಗಳಿಂದ ಆದಾಯದಲ್ಲಿ ಕಾಲುಭಾಗ ಮಾತ್ರ ಸಾಲಕೊಟ್ಟವನು ಪಡೆಯಬಹುದು. ಈ ಸುಧಾರಣೆಗಳಿಂದ ಸಾಲದ ಹೊರೆಯು ನಾಲ್ಕು ವರ್ಷಗಳಲ್ಲಿ ತೀರಿಸಲ್ಪಟ್ಟಿತು.

ಕ್ರಿ.ಪೂ. ೬೯ ರಲ್ಲಿ ಲುಸುಲ್ಲಸ್ಸನು ಮಿತ್ರಡಾಟಿಸಿನ ಅಳಿಯ ಟೈಗ್ರಾನಿಸನು ಆಳುತ್ತಿದ್ದ ಆರ್ಮೀನಿಯ ಮೇಲೆ ದಂಡಯಾತ್ರೆ ಮಾಡಿದನು. ಟೈಗ್ರನೀಸನು ಮೀಡಿಯ, ಮೆಸೊಪೊಟೇಮಿಯ, ಸಿರಿಯ ಮತ್ತು ಸೈಲೀಷಿಯ ಪ್ರಾಂತಗಳಿಗೂ ರಾಜನಾಗಿದ್ದನು. ಇವನ ಸಾಮ್ರಾಜ್ಯವು ಕಾಕಸಸ್ ಪರ್ವತಗಳಿಂದ ಪಾಲಸ್ಟೈನ್‌ವರೆಗೂ, ಟಾರಸ್

ಪರ್ವತಗಳಿಂದ ಮಿಾಡಿಯದೇಶದವರೆಗೂ ವ್ಯಾಪಿಸಿದ್ದಿತು. ಲುಸುಲಸ್ಸನು ಯೂಫ್ರಟಿಸ್ ನದಿಯನ್ನು ದಾಟಿ ಟೈಗ್ರೀಸ್ ನದಿ ಬಳಿಯಲ್ಲಿ ಟೈಗ್ರಾನಿಸ್ಸನ ಸೈನ್ಯವನ್ನು ಸೋಲಿಸಿದನು. ಮತ್ತು ಟೈಗ್ರಾನೊಸೆರ್ಟ ಪಟ್ಟಣವನ್ನು ಹಿಡಿದನು. ಕ್ರಿ ಪೂ. ೬೮ರಲ್ಲಿ ಲುಸುಲಸ್ಸನು ಪುನಃ ಟೈಗ್ರನೀಸನನ್ನು ಟಾರಸ್ ಪರ್ವತಗಳ ಬಳಿ ಸೋಲಿಸಿದನು. ದಕ್ಷಿಣದಲ್ಲಿ ನೈಸಿಬಿಸ್ ಹಿಡಿದನು. ಆದರೆ ಇವನ ಸಿಪಾಯಿಗಳು ಈ ಅಂತ್ಯವಿಲ್ಲದ ಯುದ್ಧದಿಂದ ಜುಗುಪ್ಸೆ ಹೊಂದಿ ಮುಂದಕ್ಕೆ ಹೋಗಲು ತಿರಸ್ಕರಿಸಿದರು. ಮಿತ್ರಡಾಟಿಸನು ಪಾಂಟಸ್ಸಿಗೆ ಹಿಂತಿರುಗಿದನು. ಟೈಗ್ರಾನಿಸನು ಕ್ಯಾಪಡೋಷಿಯವನ್ನು ಲೂಟಿಮಾಡಿದನು. ಆದ್ದರಿಂದ ರೋಮಿನ ಸೆನೇಟ್ ಲುಸುಲಿಸ್ ಅಧಿಕಾರವನ್ನು ರದ್ದುಮಾಡಿ ಪಾಂಪೆಯನ್ನು ನೇಮಿಸಿದರು. ಲುಸುಲಿಸ್ಸನು ರೋಮಿಗೆ ಹಿಂತಿರುಗಿದನು

## ಪಾಂಪೆಯ ದಂಡಯಾತ್ರೆ (ಕ್ರಿ.ಪೂ. ೬೬-೬೨)

ಪಾಂಪೆ ಮಿತ್ರಡಾಟಿಸನನ್ನು ಓಡಿಸಿ ಪಾಂಟಸ್ ಮತ್ತು ಸಿರಿಯ ಆರ್ಮಿನಿಯ ದೇಶಗಳನ್ನು ಗೆದ್ದು ಆರ್ಮಿನಿಯ ಪ್ರವೇಶಮಾಡಿದನು. ಟೈಗ್ರಾನಿಸನು ಶರಣಾಗತನಾದನು. ಸ್ವತಂತ್ರರಾಗಿದ್ದ ಕಾಕಸಸ್ ಪರ್ವತದ ಜನಾಂಗಗಳು ದಂಗೆ ಏಳಲು ಅವರನ್ನು ೬೫ ರಲ್ಲಿ ಅಣಗಿಸಿದನು. ೬೪ ರಲ್ಲಿ ಸಿರಿಯ ಮತ್ತು ಜೆರುಸಲೆಂ ಸ್ವಾಧೀನವಾದವು. ಅಲ್ಲಿ ದಂಗೆ ಯೆದ್ದ ಯಹೂದ್ಯರನ್ನು ಹತೋಟಿಗೆ ತಂದನು. ಇಷ್ಟರಲ್ಲಿ ಮುದುಕನಾದ ಮಿತ್ರಡಾಟಿಸನನ್ನು ಅವನ ಮಗ ಫಾರ್ನ್ಯಾಸಿಸ್ಸನೇ ಹಿಂಸಿಸಿದುದರಿಂದ ಮಿತ್ರಡಾಟಿಸ್ಸನು ಆತ್ಮಹತ್ಯೆಮಾಡಿಕೊಂಡನು (೬೩) ಪಾಂಪೆಯು ಫಾರ್ನ್ಯಾಸಿಸ್ ಮೇಲೆ ಹೋಗಲು ಅವನು ಶರಣಾಗತನಾದನು. ಹೀಗೆ ಏಷ್ಯದಲ್ಲಿ ಸರ್ವತ್ರ ದಿಗ್ವಿಜಯಮಾಡಿ ಪಾಂಪೆ ಇಟಲಿಗೆ ಹಿಂತಿರುಗಿದನು.

**ಪರಿಣಾಮ**—ಪಾಂಪೆಯ ವಿಜಯಗಳಿಂದ ಪಶ್ಚಿಮ ಏಷ್ಯದಲ್ಲೆಲ್ಲ ರೋಮನ್ ಸಾಮ್ರಾಜ್ಯವು ವಿಸ್ತರಿಸಿತು. ಪಾಂಟಸ್, ಸೈಲೀಷಿಯ, ಪಾಂಫಿಲಿಯ, ಸಿರಿಯ, ಪಾಲಸ್ಟೈನ್, ಆರ್ಮಿನಿಯ ರೋಮನ್ನರ

ಪ್ರಾಂತಗಳಾದವು. ಮತ್ತು ಸುತ್ತುಮುತ್ತಿದ್ದ ರಾಜ್ಯಗಳ ಮೇಲೆ ರೋಮನ್ನರ ರಕ್ಷಣೆ ಸ್ಥಾಪಿತವಾಯಿತು. ಪಾಂಪೆಯೊಪಾಲಿಸ್, ನಿಕೋಪಾಲಿಸ್, ಮಾಗ್ನೊಪಾಲಿಸ್ ಮುಂತಾದ ಹೊಸ ನಗರಗಳು ಸ್ಥಾಪಿಸಲ್ಪಟ್ಟವು ಗ್ರೀಕ್ ಸಂಸ್ಕೃತಿಹರಡಿದ್ದ ಏಷ್ಯಾಭಾಗವನ್ನು ಪಾರ್ಥಿಯ ಧಾಳಿಗಳಿಂದ ರಕ್ಷಿಸುವ ಜವಾಬ್ದಾರಿಯನ್ನು ರೋಮ್ ವಹಿಸಿತು. ಪಾರ್ಥಿಯ ರೋಮಿನ ಮಿತ್ರರಾಷ್ಟ್ರವಾದ ಆರ್ಮಿನಿಯ ಮೇಲೆ ಯುದ್ಧ ಮಾಡಲು ಕ್ರಾಸಸ್ಸನು ಯೂಫ್ರಟೀಸನ್ನು ದಾಟಿ ಪಾರ್ಥಿಯ ಮೇಲೆ ಧಾಳಿಮಾಡಿದನು. ಆದರೆ ಮೆಸೊಪೊಟಾಮಿಯದಲ್ಲಿ ಪಾರ್ಥಿಯನ್ನರು ಅವನನ್ನು ಸೋಲಿಸಿ ಕೊಂದು ೧೦,೦೦೦ ರೋಮನ್ ಸಿಪಾಯಿಗಳನ್ನು ಗುಲಾಮರಾಗಿ ಮಾಡಿ, ಆ ಸೇನೆಗಳ ಶ್ಯೇನಧ್ವಜ (Eagles) ಗಳನ್ನು ವಶಮಾಡಿಕೊಂಡರು. ಮಿತ್ರ ಡಾಟೀಸನ ಮರಣಾನಂತರ (ಕ್ರಿ. ಪೂ. ೬೩) ಪಾಂಪೆ ಏಷ್ಯಾವ್ಯವಸ್ಥೆ ಮಾಡಿದನು. (೧) ಬೈಥಿನಿಯ–ಪಾಂಟಸ್ ಸೇರಿ ಒಂದು ಪ್ರಾಂತ, ಅರೇಬಿಯ ಈಜಿಪ್ಟಿವರೆಗೆ ಸಿರಿಯ ಪ್ರಾಂತ ಎಂಬ ಎರಡು ಹೊಸ ಪ್ರಾಂತಗಳನ್ನು ನಿರ್ಮಿಸಿದನು. ಅಲ್ಲಿ ಯಹೂದ್ಯರಿಗೂ ಜೆರುಸಲೆಂಗೂ ಸ್ಥಳೀಯ ಅಧಿಕಾರಕೊಟ್ಟನು. (೨) ಏಷ್ಯಾ ಇತರ ಭಾಗಗಳು–ಆರ್ಮಿನಿಯ, ಕ್ಯಾಪಡೋಷಿಯ, ಸೆಲ್ಯೂಕಿಯ ಪಾಫ್ಲಗೋನಿಯ, ಗಲಾಟಿಯ, ಕೋಲ್ಚಿಸ್, ಬಾಸ್ಫರಸ್ ಮತ್ತು ಕೊಮ್ಮಾಜಿನೆ ದೇಶಗಳಲ್ಲಿ ರೋಮಿಗೆ ವಿಧೇಯರಾದ ರಾಜರನ್ನು ನೇಮಿಸಿದನು.

ಕ್ರಿ. ಪೂ. ೬೨ ರಲ್ಲಿ ಪಾಂಪೆ ರೋಮಿಗೆ ಹಿಂತಿರುಗಿದಾಗ ಏಷ್ಯ ವ್ಯವಸ್ಥೆ ಮಾಡಿದನು; ನೀರ್ಗಳ್ಳರನ್ನು ಅಡಗಿಸಿದ್ದನು; ಎರಡು ಹೊಸ ದೊಡ್ಡ ಪ್ರಾಂತಗಳನ್ನು ಚಕ್ರಾಧಿಪತ್ಯಕ್ಕೆ ಸೇರಿಸಿದ್ದನು. ಏಷ್ಯ ರಾಜರನ್ನು ರೋಮನ್ನರ ರಕ್ಷಣೆಗೆ ಒಳಪಡಿಸಿದ್ದನು ಮತ್ತು ರೋಮಿಗೆ ಅಪಾರ ಸಂಪತ್ತನ್ನು ಗುಲಾಮರನ್ನು ತಂದನು.

# ಅಧ್ಯಾಯ ೧೫

## ಪ್ರಜಾಪ್ರಭುತ್ವದ ಕ್ಷೀಣತೆ

**ಕಾರಣಗಳು**—(೧) ಹಿಂದೆಯೇ ಸೂಚಿಸಿದಂತೆ ಇಟಲಿಯಲ್ಲಿ ಪ್ರಜಾಸಂಖ್ಯೆಯು ಕಡಿಮೆಯಾಗುತ್ತ ಬಂದಿತ್ತು. ದೊಡ್ಡ ಜಮೀನ್ದಾರರು ಗುಲಾಮರಿಂದ ವ್ಯವಸಾಯ ನಡಿಸುತ್ತಿದ್ದುದರಿಂದಲೂ, ಸ್ವತಂತ್ರರಾದವರಿಗೆ ರೋಮ್ ಪಟ್ಟಣದಲ್ಲಿ ಬಿಟ್ಟಿ ತಿಂಡಿ ವಿನೋದಗಳು ಸಿಕ್ಕುತ್ತಿದ್ದುದರಿಂದ ಅವರು ರೋಮಿನಲ್ಲಿ ಇರುತ್ತಿದ್ದುದರಿಂದಲೂ ವ್ಯವಸಾಯವು ಕ್ಷೀಣವಾಗುತ್ತಿದ್ದುದಲ್ಲದೆ ಜನಗಳು ಸೋಮಾರಿಗಳಾಗುತ್ತಿದ್ದರು. ಪಾಪ್ಯುಲರ್ ಪಾರ್ಟಿಯವರು ಸಾರ್ವಜನಿಕ ಜಮೀನುಗಳನ್ನು (ಆಗರ್ ಪಬ್ಲಿಕಸ್) ಎಲ್ಲರಿಗೂ ಸಮವಾಗಿ ಹಂಚಬೇಕೆಂದು ಒತ್ತಾಯಪಡಿಸುತ್ತಿದ್ದರು. ಇದನ್ನು ಆಪ್ಟಿಮೇಟರು ವಿರೋಧಿಸುತ್ತಿದ್ದರು. ಪಾಂಪೆ ಆಪ್ಟಿಮೇಟರ ಕಡೆಯವನಾದರೂ ತನ್ನ ಸಿಪಾಯಿಗಳಿಗೆ ಜಮೀನುಗಳನ್ನು ಬಹುಮಾನವಾಗಿ ಹಂಚುವೆನೆಂದು ಮಾತುಕೊಟ್ಟಿದ್ದನು. ಆದರೆ ಸೆನೇಟಿನವರು ಇದನ್ನು ವಿರೋಧಿಸಿದುದರಿಂದ ಪಾಂಪೆ ಪಾಪ್ಯುಲರ್ ಪಾರ್ಟಿಯವನಾದ ಜೂಲಿಯಸ್ ಸೀಸರನೊಡನೆ ಕ್ರಿ.ಪೂ. ೫೯ ರಲ್ಲಿ ಮೈತ್ರಿಮಾಡಿಕೊಂಡನು. (೨) ಪ್ರಾಂತಗಳಲ್ಲಿ ಪ್ರಾಂತಾಧಿಕಾರಿಗಳು ತಮ್ಮ ಪದವಿಗಳನ್ನು ಉಳಿಸಿಕೊಳ್ಳಬೇಕಾದರೆ ರೋಮಿನ ನಾಗರೀಕರಿಗೆ ಬಿಟ್ಟಿ ವಿನೋದಗಳನ್ನು ಒದಗಿಸಬೇಕಾಗಿದ್ದಿತು. ಇದಕ್ಕಾಗಿ ಅಪಾರದ್ರವ್ಯ ವೆಚ್ಚಮಾಡಬೇಕಾಗಿದ್ದಿತು. ಆದ್ದರಿಂದ ತಮ್ಮ ಪ್ರಾಂತಗಳಲ್ಲಿ ಲಂಚಕೋರುತನ, ಭಾರವಾದ ತೆರಿಗೆಗಳು ಹೆಚ್ಚಾದವು. ಕಂದಾಯ ವಸೂಲಿಮಾಡುತ್ತಿದ್ದ ಪಬ್ಲಿಕಾನ್ನೈ ಜನರನ್ನು ರೋಮಿನಲ್ಲಿ ವಿಚಾರಿಸಲು ಸಾಧ್ಯವಾಗಿರಲಿಲ್ಲ. ಆದರೆ ಪ್ರಾಂತಾಧಿಕಾರಿಗಳನ್ನು ಹಾಗೆ ಶಿಕ್ಷಿಸಬಹುದು ಆದ್ದರಿಂದ ರೋಮ್ ನಾಗರೀಕರನ್ನು ತೃಪ್ತಿಪಡಿಸಲು ಬೇಕಾದ ಹಣವನ್ನು ಪ್ರಾಂತಗಳಲ್ಲಿ ದೋಚಿಕೊಳ್ಳುತ್ತಿದ್ದರು. ಪ್ರಾಂತಗಳಲ್ಲಿ ಕ್ರಿ.ಪೂ. ೬೩ ರಲ್ಲಿ ಸಾಮಾನ್ಯವಾಗಿ ಶಾಂತಿ ಇದ್ದಿತು. (೩)

ರೋಮಿನಲ್ಲಿ ಪಾರ್ಟಿಕಲಹಗಳು ಬೆಳೆಯುತ್ತ ಬಂದವು. ಆಪ್ಟಿಮೆರಿಟೋ ಎಲ್ಲ ಮುಖ್ಯಾಧಿಕಾರಗಳನ್ನು ಆಕ್ರಮಿಸಿದ್ದರು. ಪ್ರತಿ ಚುನಾವಣೆ ಸಮಯದಲ್ಲಿಯೂ ಗೂಂಡಾಗಳ ದೌರ್ಜನ್ಯ ಮತ್ತು ಲಂಚ ನಡೆಯುತ್ತಲೇ ಇದ್ದಿತು. ಅನೇಕ ಖಾಸಗಿ ಸೇನೆಗಳು ಅನಾಯಕ ಜನರ ಗುಂಪುಗಳು ಹೆಚ್ಚುತ್ತಿದ್ದವು (೪) ಈಕ್ವೈಟರು ಮಧ್ಯಮವರ್ಗದವರು ಆಪ್ಟಿಮೇಟರನ್ನು ಎದುರಿಸುತ್ತಿದ್ದರು. ಕ್ರಿ.ಪೂ. ೭೦ ರಲ್ಲಿ ಪಾಂಪೆ ನ್ಯಾಯತೀರ್ಮಾನಿಸುವ ಪಂಚಾಯಿತಿಯಲ್ಲಿ (ಜ್ಯೂರಿ) ಮೂರನೆ ಒಂದು ಭಾಗ ಸೆನೇಟರರು, ಮೂರನೆ ಒಂದುಭಾಗ ಈಕ್ವೈಟರು, ಇತರ ವರ್ಗದವರು ಮೂರನೆ ಒಂದುಭಾಗ ಇರಬೇಕೆಂದು ಕಾನೂನು ಮಾಡಿದನು. ಕಂದಾಯ ವಸೂಲಿಮಾಡುತ್ತಿದ್ದ ಪಬ್ಲಿಕಾನ್ಸೈ ಎಲ್ಲರು ಈಕ್ವೈಟರೇ ಆಗಿದ್ದು ಪ್ರಾಂತಗಳ ಕಂದಾಯಗಳಿಂದ ಐಶ್ವರ್ಯವಂತರಾಗಿದ್ದರು.

## ಪಾರ್ಟಿ ಮುಖಂಡರು

**ಪಾಪ್ಯುಲರ್ ಪಾರ್ಟಿ. (೧) ಜ್ಯೂಲಿಯಸ್ ಸೀಸರ್ (೧೦೧-೪೪).** ಇವನು ಅತ್ಯುನ್ನತ ಪೇಟ್ರೀಷಿಯನ್ ವಂಶಕ್ಕೆ ಸೇರಿದವನು. ಮೇರಿಯುಸ್ಸಿನ ಸೋದರಳಿಯನೂ ಸಿನ್ನನ ಅಳಿಯನೂ ಆಗಿದ್ದರೂ ಪಾಪ್ಯುಲರ್ ಪಾರ್ಟಿ ಮುಖಂಡನಾಗಿ ಸಲ್ಲನಿಗೆ ವಿರೋಧಿಯಾಗಿದ್ದನು. ಸಲ್ಲನ ಮರಣಾನಂತರ ರೋಮಿಗೆ ಹಿಂತಿರುಗಿ ಬಂದು ಎರಡನೆ ಮಿತ್ರಡಾಟಿಸ್ ಯುದ್ಧದಲ್ಲಿ ಭಾಗ ವಹಿಸಿದ್ದನು. ಅನಂತರ ನ್ಯಾಯಾಧೀಶನಾಗಿ ಪಾಂಪೆಗೆ ಬೆಂಬಲಕೊಟ್ಟನು. ಕ್ರಿ.ಪೂ. (೬೧-೬೦) ರಲ್ಲಿ ಸ್ಪೈನಿನ ಪ್ರೋಪ್ರೆಟಾರನಾಗಿಯೂ ಅನಂತರ ಕಾನ್ಸಲಾಗಿಯೂ ಇದ್ದುಸೆನೇಟನ್ನು ವಿರೋಧಿಸುತ್ತಿದ್ದನು. **(೨) ಮಹಾಪುರುಷ ಪಾಂಪೆ (೧೦೬-೪೮)** ಮಹಾತ್ವಾಕಾಂಕ್ಷೆಯಾಗಿದ್ದರೂ ಸೀಸರಿನಿಗಿಂತ ನ್ಯಾಯಬದ್ಧನು. ಸಲ್ಲನ ಅಧಿಕಾರಿಯಾಗಿ ಸಿಸಿಲಿ, ಆಫ್ರಿಕ, ಗುಲಾಮರ ಯುದ್ಧ ಮತ್ತು ಮಿತ್ರಡಾಟಿಸ್ ಯುದ್ಧಗಳಲ್ಲಿ ಕೀರ್ತಿಯನ್ನೂ ಐಶ್ವರ್ಯವನ್ನೂ ಸಂಪಾದಿಸಿದ್ದನು. **(೩) ಕ್ರಾಸಸ್ (ಕ್ರಿ.ಪೂ. ೧೧೫-೫೩)** ಆ ಕಾಲದಲ್ಲಿ

ಇವನೇ ಅತ್ಯಂತ ಐಶ್ವರ್ಯವಂತನು. ಮೊದಲು ಸಲ್ಲನ ಪಕ್ಷದವ ನಾಗಿದ್ದು ಕಾನ್ಸಲನಾಗಿದ್ದನು. ಆದರೆ ಪಾಂಪೆಮೇಲಣ ಅಸೂಯೆ ಯಿಂದ ಸೀಸರನನ್ನು ಸೇರಿದನು ಅನಂತರ ಇವನಿಗೂ ಪಾಂಪೆಗೂ ಮೈತ್ರಿಯಾಯಿತು. ಈ ಮೂವರೂ ತಮ್ಮಲ್ಲಿಯೇ ಒಪ್ಪಂದಮಾಡಿ ಕೊಂಡು ಸರ್ವಾಧಿಕಾರವನ್ನು ನಡಿಸುತ್ತಿದ್ದುದರಿಂದ ಇದಕ್ಕೆ (ಪ್ರಥಮ) ತ್ರಿಮೂರ್ತ್ಯಧಿಕಾರ (ಟ್ರೈಯುಂವಿರೇಟ್) ಎಂಬ ಹೆಸರಾಯಿತು. ಆದರೆ ಇದು ಕಾನೂನು ಬದ್ಧವಾಗಿರಲಿಲ್ಲ. ಕ್ರಾಸಸ್ಸನು ಹಿಂದೆ ಹೇಳಿದಂತೆ ಏಷ್ಯದಲ್ಲಿ ಯುದ್ಧ ಮಾಡಿ ಸತ್ತನಂತರ ಸೀಸರ್ ಮತ್ತು ಪಾಂಪೆಗಳಿಗೆ ವೈಮನಸ್ಯ ಉಂಟಾಯಿತು.

ಆಪ್ಟಿಮೇಟ್ (ಸೆನೇಟ್) ಪಾರ್ಟಿಯಲ್ಲಿ ಪ್ರತಿ ಸೆನೇಟರನೂ ಇತರರನು ಅಸೂಯೆಯಿಂದ ನೋಡುತ್ತಿದ್ದುದರಿಂದ ನಿಜವಾದ ಮುಖಂಡರಿರಲಿಲ್ಲ ಮುಖ್ಯರಾದವರಲ್ಲಿ (೧) **ಕ್ಯಾಟುಲಸ್**—ಇವನು ಪ್ರಾಮಾಣಿಕನೂ ಧೈರ್ಯಶಾಲಿಯೂ ಆಗಿದ್ದನು ಹೆಚ್ಚು ಬೆಂಬಲ ಹೊಂದಿರಲಿಲ್ಲ (೨) **ಲ್ಯೂಕುಲಸ್**—ಏಷ್ಯಾ ಯುದ್ಧದಲ್ಲಿ ಪ್ರಖ್ಯಾತ ನಾಗಿದ್ದನು. ಆದರೆ ರೋಮಿಗೆ ಬಂದಮೇಲೆ ರಾಜಕೀಯದಿಂದ ವಿಮುಖನಾಗಿ ಪಾರ್ಟಿ ವಿಷಯಗಳಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿರಲಿಲ್ಲ. (೩) **ಕ್ಯಾಟೊ** (ಕ್ರಿ. ಪೂ. ೯೫–೪೬).—ಸೆನೇಟಿನಲ್ಲಿ ಅತ್ಯಂತ ಪ್ರಜಾ ವಿರೋಧಿಗಳ ಗುಂಪಿಗೆ ಸೇರಿದವನು.

ಈ ಎರಡು ಪಾರ್ಟಿಗಳಲ್ಲದೆ ಮೂರನೆಯ ಪಂಗಡವಿದ್ದಿತು. **ಸಿಸಿರೊ** (ಕ್ರಿ. ಪೂ. ೧೦೬–೪೩)—**ಮಾರ್ಕಸ್ ಟಲ್ಲಿಯಸ್ ಸಿಸಿರೊ** ಆರ್ಪಿನಿಯಂ ನಿವಾಸಿ, ಅದ್ಭುತವಾದ ವಕ್ತಾರನು, ತನ್ನ ಪ್ರಯತ್ನದಿಂದಲೇ ಉನ್ನತ ಸ್ಥಿತಿಗೆ ಬಂದನು. ಮೇರಿಯಸ್ಸಿನ ಅನುಯಾಯಿಯಾಗಿದ್ದು ಪ್ರಜಾ ಪ್ರಭುತ್ವಕ್ಕೆ ಹೋರಾಡುತ್ತಿದ್ದನು. ಆದರೆ ಸೆನೇಟಿನವರಿಗೂ ಈಕ್ವೈಟ ರಿಗೂ ಸಂಧಾನಮಾಡಲು ಯತ್ನಿಸಿದುದರಿಂದ ಯಾರಿಗೂ ಬೇಡ ವಾದನು. ಇವನಿಗೆ ಮಧ್ಯಮವರ್ಗ ಜನರ ಬೆಂಬಲವಿದ್ದರೂ ಸಿಸಿರೊ

ಧೈರ್ಯವಿಲ್ಲದವನೂ ಜಂಬಗಾರನೂ ಆಗಿದ್ದುದರಿಂದ ಪಾರ್ಟಿಮಾಡಲು ಆಗಲಿಲ್ಲ. ಇವನು ಈಕ್ವೆಸ್ಟ್ರಿಯನ್ ವರ್ಗದವನು. ಪ್ರಸಿದ್ಧ ನ್ಯಾಯವಾದಿ ಮತ್ತು ವಿದ್ವಾಂಸನಾದ್ದರಿಂದ ಪ್ರಾಚೀನ ರಾಜ್ಯ ವ್ಯವಸ್ಥೆ ಮತ್ತು ಜೀವನಕ್ರಮಗಳಿಗಾಗಿ ಹೋರಾಡುತ್ತಿದ್ದನು ಸೆನೇಟನ್ನು ಪೂರ್ತಿ ಪ್ರಜಾಪ್ರತಿನಿಧಿಯಾಗುವಂತೆಯೂ, ಸಭೆಗಳು ರೋಮಿನ ಪುಂಡ ಜನರನ್ನಲ್ಲದೆ ನಿಜವಾದ ರೋಮನ್ ಜನತೆಯ ಪ್ರತಿನಿಧಿಗಳಾಗಿರಬೇಕೆಂದೂ ಪ್ರಯತ್ನಗಳನ್ನು ಮಾಡುತ್ತಿದ್ದನು. ಪ್ರಜಾಪ್ರತಿನಿಧಿಸಭೆಗಳಿಂದ ಚುನಾಯಿತರಾದ ನ್ಯಾಯಾಧೀಶರು ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ನಿಷ್ಪಕ್ಷಪಾತವಾಗಿರಬೇಕು ಇವನ ರಾಜಕೀಯ ಧ್ಯೇಯವು ರೋಮನ್ ಸಾಮ್ರಾಜ್ಯದಲ್ಲಿದ್ದ ಎಲ್ಲ ವರ್ಗಗಳಲ್ಲಿಯೂ (ಕಾಂಕಾರ್ಡಿಯ ಆರ್ಡಿನಂ ಮತ್ತು ಕಾನ್ಸೆನ್ಸಸ್ ಇಟಾಲಿಯೆ) ಸೌಹಾರ್ದವನ್ನು ಸ್ಥಾಪಿಸುವದೇ ಆಗಿದ್ದಿತು.

ಸಿಸಿರೊ ಕ್ರಿ ಪೂ. ೬೩ ರಲ್ಲಿ ಕಾನ್ಸಲ್ಲಾದನು. ಕ್ಯಾಟಲೈನ್ ಎಂಬ ಪೇಟ್ರೀಷಿಯನ್ನನು ಕ್ರಿ.ಪೂ. ೬೫ ರಲ್ಲಿ ಪುನಃ ಸಿಸಿರೋನನ್ನು ಕೊಂದು ರೋಮ್ ನಗರವನ್ನು ಅಸಂತುಷ್ಟರಾದ ಸಿಪಾಯಿಗಳ ಸಹಾಯದಿಂದ ಸುಟ್ಟು ಲೂಟಿಮಾಡಬೇಕೆಂಬ ಒಳಸಂಚು ಮಾಡುತ್ತಿದ್ದುದನ್ನು ಸಿಸಿರೊ ಕಂಡು ಹಿಡಿದನೆಂದು ಅಪಾದಿಸಲ್ಪಟ್ಟಿತು. ಕ್ಯಾಟಲೈನನು ಸಲ್ಲಪಾರ್ಟಿಯವನಾಗಿದ್ದು ಆಫ್ರಿಕದಲ್ಲಿ ಪ್ರೊಪ್ರೇಟಾರನಾಗಿದ್ದನು. ಆನಂತರ ಕಾನ್ಸಲಾಗಲು ಯತ್ನಿಸಿದನು. ಆದರೆ ಸಿಸಿರೊ ಮತ್ತು ಆಂಟೊನಿ ಚುನಾಯಿತರಾದರು. ಆದ್ದರಿಂದ ಕ್ಯಾಟಲೈನನು ಸಲ್ಲನ ಕೆಳಗೆ ಸೈನ್ಯಾಧಿಕಾರಿಯಾಗಿದ್ದ ಮಾನ್ಲಿಯಸ್ ಮತ್ತು ಇತರ ನಿವೃತ್ತ ಸಿಪಾಯಿಗಳೊಡನೆ ದಂಗೆ ಏಳಬೇಕೆಂದು ಒಳಸಂಚು ಮಾಡಿದನೆಂದು ಸಿಸಿರೊ ಸೆನೇಟಿನಲ್ಲಿ ಅಪಾದನೆ ತಂದನು. ಆದರೆ ಯಾವ ಕಾರಣದಿಂದಲೋ ಸಿಸಿರೊ ಕ್ಯಾಟಲೈನನು ತಪ್ಪಿಸಿಕೊಂಡು ಮಾನ್ಲಿಯಸ್ಸನನ್ನು ಸೇರಲು ಅವಕಾಶಕೊಟ್ಟನು. ಜಂಬಗಾರರು ಸಿಸ್ ಆಲ್ಪೈನ್ ಗಾಲಿ

ನಲ್ಲಿದ್ದ ಆಲ್ಲೊಬ್ರೋಗಿಸರೆಂಬ ಜನಾಂಗವನ್ನು ಸೇರಿಕೊಂಡು ರೋಮಿನ ಮೇಲೆ ಧಾಳಿಮಾಡಲು ಸಿದ್ಧರಾದರು ಆಗ ಸಿಸಿರೋ ತನ್ನ ಸರ್ವಾಧಿಕಾರವನ್ನು ಪ್ರಯೋಗಿಸಿ ರೋಮನ್ನು ರಕ್ಷಿಸಲು ಏರ್ಪಾಡು ಮಾಡಿದನು. ಆಲ್ಲೊಬ್ರೋಗಿಸ್ ಜನರು ಮುಖಂಡರನ್ನು ಬಿಟ್ಟುಕೊಟ್ಟರು. ಮುಖಂಡರಿಗೆ ಮರಣದಂಡನೆ ವಿಧಿಸಿ ಸಿಸಿರೊ ಒಳಸಂಚನ್ನು ಅಡಗಿಸಿದನು. ಕ್ಯಾಟಲೈನನು ಕ್ರಿ.ಪೂ. ೬೨ ರಲ್ಲಿ ಯುದ್ಧಮಾಡುತ್ತ ಸತ್ತನು. ಪ್ರಜಾಪ್ರಭುತ್ವವನ್ನು ರಕ್ಷಿಸಿದೆನೆಂದು ಸಿಸಿರೊ ಹೇಳಿಕೊಂಡರೂ ಇದರಿಂದ ರೋಮನ್ ಸರ್ಕಾರವು ಎಷ್ಟು ದುರ್ಬಲವಾಗಿದ್ದಿತೆಂಬುದು ವಿಶದವಾಗುವದು. ಮತ್ತು ಸಿಸಿರೋ ಈ ಕ್ಯಾಟಲೈನ್ ಒಳಸಂಚು ವಿಷಯದಲ್ಲಿ ವಿಧಿವತ್ತಾದ ನ್ಯಾಯಕ್ರಮವನ್ನನುಸರಿಸಲಿಲ್ಲ. ಕಾನ್ಸಲನಿಗೆ ಮರಣದಂಡನೆ ಹಕ್ಕನ್ನು ಕೊಟ್ಟು ನ್ಯಾಯವಿಧಿಯಕ್ರಮವನ್ನು ಲ್ಲಂಘಿಸಬಹುದೆಂಬುದಕ್ಕೆ ಅವಕಾಶಕೊಟ್ಟುದರಿಂದ ಮುಂದೆ ಅನೇಕ ಅನರ್ಥಗಳಿಗೆ ಕಾರಣವಾಯಿತು

---

## ಅಧ್ಯಾಯ ೧೬

### ಸೀಸರ್ ಮತ್ತು ಪಾಂಪೆ ಸ್ಪರ್ಧೆ

ಕ್ಯಾಟಲೈನಿನ ಒಳಸಂಚಿನ ಪರಿಣಾಮವಾಗಿ ಪಾಪ್ಯುಲರ್ ಪಾರ್ಟಿಗೆ ಸೀಸರನು ಮುಖಂಡನಾದನು (ಕ್ರಿ.ಪೂ ೬೧)ರಲ್ಲಿ ಸ್ಪೈನಿನ ಪ್ರೊಪ್ರೇಟಾರನಾಗಿದ್ದು ಯುದ್ಧದಲ್ಲಿ ಕೀರ್ತಿ ಸಂಪಾದಿಸಿದ್ದನು. ಕ್ರಿ.ಪೂ. ೬೦ ರಲ್ಲಿ ರೋಮಿಗೆ ಹಿಂತಿರುಗಿದನು ಪಾಂಪೆ ಕೂಡ ಕ್ರಿ.ಪೂ. ೬೨ ರಲ್ಲಿ ಏಷ್ಯಾದಿಂದ ಹಿಂತಿರುಗಿ ಬಂದನು. ತನ್ನ ಸಿಪಾಯಿಗಳಿಗೆ ಭೂದಾನ ಕೊಡಿಸುವಂತೆ ಮಾತುಕೊಟ್ಟಿದ್ದನು. ಆದರೆ ಸೆನೇಟಿನವರು ವಿರೋಧಿಸಿದರು. ಈಕ್ವೈಟರು ಕೂಡ ಏಷ್ಯದಲ್ಲಿ ಕಂದಾಯ ವಸೂಲಿಯಿಂದ

ತಮಗೆ ಲಾಭಯಿಲ್ಲವೆಂದು ಸರ್ಕಾರಕ್ಕೆ ಕೊಡಬೇಕಾದ ಕಂದಾಯವನ್ನು ಕಡಿಮೆ ಮಾಡಬೇಕೆಂದು ಚಳುವಳಿ ಮಾಡಿದರು. ಮೊದಲು ಪಾಂಪೆ ಯಾವ ಪಾರ್ಟಿಗೂ ಸೇರಲಿಲ್ಲ. ಆದರೆ ಸೆನೇಟಿನವರು "ತನ್ನ ಏಷ್ಯಾ ಕಾರ್ಯ (ಆಕ್ಟ)ಗಳನ್ನು ಅನುಮೋದಿಸಬೇಕು ಮತ್ತು ತನ್ನ ಸೈನಿಕರಿಗೆ ಜಮೀನು ಕೊಡಬೇಕು" ಎಂಬ ಎರಡು ಸಲಹೆಗಳನ್ನು ತಿರಸ್ಕರಿಸಿದುದರಿಂದ ಸೀಸರಿನ ಸಲಹೆಯಂತೆ ಸೀಸರ್, ಕ್ರಾಸಸ್ ಮತ್ತು ಪಾಂಪೆ ತ್ರಿಮೂರ್ತಿಗಳ ಅಧಿಕಾರವನ್ನು ಸ್ಥಾಪಿಸಿದರು.

## ಪ್ರಥಮ ತ್ರಿಮೂರ್ತ್ಯಧಿಕಾರ

ಸೀಸರನು ಕಾನ್ಸಲ್ಲಾದನು. ಪಾಂಪೆಯ ಕಾರ್ಯಾಚರಣೆಗಳು (ಆಕ್ಟ) ಅನುಮೋದಿಸಲ್ಪಟ್ಟು ಅವನ ಸಿಪಾಯಿಗಳಿಗೆ ಕ್ಯಾಂಪೇನ್ನಿಯದಲ್ಲಿ ಜಮೀನುಗಳನ್ನು ಕೊಡಲಾಯಿತು. ಕಂದಾಯ ವಸೂಲಿಮಾಡುವ ಪಬ್ಲಿಕಾನೆ (ಈಕ್ವೈಟ್)ರಿಗೆ ಏಷ್ಯಾದಿಂದ ಕೊಡಬೇಕಾದ ಹಣದಲ್ಲಿ ಮೂರನೆ ಒಂದುಭಾಗ ರಿಯಾಯತಿ ಕೊಡಲಾಯಿತು. ರೋಮಿನ ನಾಗರಿಕರಿಗೆ ಬಿಟ್ಟಿ ಧಾನ್ಯಕೊಡುವ ವ್ಯವಸ್ಥೆಮಾಡಿದರು. ತಮ್ಮಲ್ಲಿ ಸೀಸರನು ಪ್ರಾಂತಾಧಿಕಾರಿಯಾಗಬೇಕು. ಪಾಂಪೆ ಮತ್ತು ಕ್ರಾಸಸ್ ಕಾನ್ಸಲರಾಗಿದ್ದು ಅನಂತರ ಐದು ವರ್ಷ ಪ್ರಾಂತಾಧಿಕಾರಿಗಳಾಗಿರಬೇಕು. ಸೀಸರನ ಮಗಳಾದ ಜೂಲಿಯ ಪಾಂಪೆಯನ್ನು ಮದುವೆಯಾದಳು. ಸೀಸರ್ ಮತ್ತು ಪಾಂಪೆ ಸೆನೇಟನ್ನು ಹೆದರಿಸಿ ಅಲಕ್ಷ್ಯ ಮಾಡಿದರು. ರೋಮಿನ ಪ್ರಜಾಪ್ರಭುತ್ವದ ಮೂಲನ್ಯಾಯದಂತೆ ಸೆನೇಟಿಗೆ ಅಧಿಕಾರವೇನೂ ಇರಲಿಲ್ಲ. ಆದರೆ ಈಚೆಗೆ ಅದು ಅತಿ ಪ್ರಬಲವಾಗಿದ್ದಿತು. ಆದ್ದರಿಂದ ಸೀಸರ್ ಮತ್ತು ಪಾಂಪೆ ಸೆನೇಟನ್ನು ಪ್ರತಿಭಟಿಸಿದುದು ನ್ಯಾಯವಿರುದ್ಧವಲ್ಲ. ಕ್ರಿ. ಪೂ ೫೯ ರಲ್ಲಿ ಪ್ರಾಂತಾಧಿಕಾರಿ ಅಥವಾ ಅವನ ಕೆಳಗಿನ ಅಧಿಕಾರಿಗಳು ಈಕ್ವೈಟರಾಗಲಿ ಸೆನೇಟಿನವರಾಗಲಿ ಲಂಚಕೋರರೆಂಬ ಆಪಾದನೆ ಬಂದರೆ ವಿಚಾರಣೆಗೆ ಬಾಧ್ಯರೆಂದು ಕಾನೂನು ಮಾಡಿದನು.

## ಸೀಸರನ ದಿಗ್ವಿಜಯ

ಸೀಸರನು ಗಾಲಿಯ ಸಿಸ್ ಆಲ್ಪೈನಿಯ ಮತ್ತು ಇಲ್ಲಿರಿಯ ಪ್ರಾಂತಾಧಿಕಾರಿಯಾಗಿ ಐದು ವರ್ಷ ನೇಮಿತನಾದನು. (ಲೆಕ್ಸ್‌ವಾಟಿನಿಯ). ಈ ಪ್ರಾಂತವು ಆಲ್ಪ್ಸ್ ಪರ್ವತಶ್ರೇಣಿಗೆ ದಕ್ಷಿಣದಲ್ಲಿ ರೂಬಿಕನ್ ನದಿ ಮತ್ತು ಇಲ್ಲಿರಿಕಂವರೆಗೆ ವ್ಯಾಪಿಸಿದ್ದಿತು. ಸೀಸರನಿಗೆ ಮೂರು ಲೀಜಿಯನ್ಗಳು ಕೊಡಲ್ಪಟ್ಟಿವು. ರೋಮನ್ ರಾಜ್ಯಕ್ಕೆ ಅಪಾಯವು ಉತ್ತರದಿಂದ ಸಂಭವಿಸುತ್ತಿತ್ತು. ಯೂರೋಪಿನಲ್ಲಿ ಫ್ರಾನ್ಸಿನ ಆಗ್ನೇಯ ಭಾಗ, ಪೂರ್ವದಲ್ಲಿ ರ್ಹೋನ್ ಮತ್ತು ಜೆನೀವವರೆಗೂ ದಕ್ಷಿಣದಲ್ಲಿ ಪಿರೆನೀಸ್ ಶ್ರೇಣಿ ಮಧ್ಯಧರಾ ಸಮುದ್ರದವರೆಗೂ ವ್ಯಾಪಿಸಿದ್ದ ಟ್ರಾನ್ಸ್-ಆಲ್ಪೈನ್‌ಗಾಲ್ ರೋಮನ್ನರ ನೇರಾಳ್ವಿಕೆಗೆ ಸೇರಿದ್ದಿತು. ಸ್ಪೈನಿಗೆ ಹೋಗುವ ರಸ್ತೆಯನ್ನು ಕಾಪಾಡುವದು ಅನಾಗರಿಕರಾದ ಜರ್ಮನಿಸ್, ಟ್ಯೂಟನ್ಸ್ ಮತ್ತು ಸಿಂಬ್ರೈ ಜನರನ್ನು ಹತೋಟಿಯಲ್ಲಿಡುವದು ಅವಶ್ಯಕವಾಗಿದ್ದಿತು. ಇದಕ್ಕೆ ಉತ್ತರದಲ್ಲಿ ರೋಮನ್ನರ ಅಧಿಕಾರಕ್ಕೆ ಹೊರಗಾದ "ನಾನ್‌ರೋಮನ್ ಗಾಲಿ"ನಲ್ಲಿ ಮೂರು ಭಾಗಗಳಿದ್ದವು. ನೈಋತ್ಯದಲ್ಲಿ ಆಕ್ವಿಟೈನ್, ಮಧ್ಯದಲ್ಲಿ ಕೆಲ್ಟಿಕ ಬೆಲ್ಜಿಕ ಮತ್ತು ಈಗಿನ ಉತ್ತರ ಫ್ರಾನ್ಸ್, ಹಾಲೆಂಡ್ ಮತ್ತು ಬೆಲ್ಜಿಯಂ ರೋಮಿಗೆ ಮಿತ್ರನಾಗಿದ್ದ ಅರಿಯೋವಿಸ್ಟಸನು ಇಲ್ಲಿ ರಾಜನಾಗಿದ್ದನು.

ಕ್ರಿ ಪೂ. ೫೮ ರಲ್ಲಿ ರೋಮನ್ನು ಬಿಡುವದಕ್ಕೆ ಮುಂಚೆ ಸೀಸರನು ಸೆನೇಟಿನ ಕುಹಕದಿಂದ ತನ್ನ ಹಕ್ಕುಗಳಿಗೆ ಬಾಧಕಬರದಂತೆ ವ್ಯವಸ್ಥೆ ಮಾಡಿದನು. ಸಿಸಿರೊ ಪಾಂಪೆ ಮತ್ತು ಸೀಸರ್ ಮೇಲೆ ಪ್ರಜಾಪ್ರಭುತ್ವ ದ್ರೋಹಗಳೆಂಬ ಆಪಾದನೆ ತಂದನು ಆದರೆ ಸೀಸರನು ಸಿಸಿರೋಗೆ ಪ್ರತಿಸ್ಪರ್ಧಿಯಾಗಿ ಕ್ಲಾಡಿಯಸ್‌ನನ್ನು ನಿಲ್ಲಿಸಿ ಕಾನಸಲಾಗುವಂತೆ ಮಾಡಿದನು. ಕ್ಲಾಡಿಯಸ್ ಸನೇಟಿಗೆ ವಿರುದ್ಧವಾಗಿ ಕೆಲವು ಕಾನೂನುಗಳನ್ನು ಮಾಡಿ ಜನರ ಮೆಚ್ಚುಗೆ ಪಡೆದನು ಅನಂತರ ಕ್ಯಾಟಲೈನಿನ

ಒಳಸಂಚಿನಲ್ಲಿ ಸಿಸಿರೋ ನಿರಂಕುಶನಾಗಿ ವರ್ತಿಸಿದನೆಂಬ ಅಪವಾದನೆ ತಂದನು. ಸಿಸಿರೋ ರೋಷದಿಂದ ಓಡಿಹೋಗಲು ಅವನು ದೇಶ ದ್ರೋಹಿಯೆಂದು ಘೋಷಿಸಿದನು. ಆದರೆ ಇಬ್ಬರಲ್ಲಿ ಕ್ಲಾಡಿಯಸ್ ಪಾಂಪೆಗೆ ಅವಮಾನಮಾಡಲು ಪಾಂಪೆ ಸಿಸಿರೋನನ್ನು ಪುನಃ ಕರಿಸಿದನು. (ಕ್ರಿ ಪೂ ೫೭) ಕ್ಲಾಡಿಯಸ್ಸನು ಆಪ್ಟಿಮೇಟ್ ಪಾರ್ಟಿ ಮುಖಂಡನಾದ ಕೇಟೋನನ್ನು ಸೈಪ್ರಸ್ ರಾಜನಾದ ಟಾಲಮಿ ಮೇಲೆ ಕಳುಹಿಸಿ ಆಪ್ಟಿಮೇಟ್ ಪಾರ್ಟಿಗೆ ಮುಖಂಡರಿಲ್ಲದಂತೆ ಮಾಡಿದನು.

## ಸೀಸರನ ದಂಡಯಾತ್ರೆಗಳು (ಕ್ರಿ. ಪೂ. ೫೮-೫೦)

ಸೀಸರನು ಗಾಲಿನಲ್ಲಿ ಒಂಬತ್ತು ದಂಡಯಾತ್ರೆಗಳನ್ನು ಎಂಟು ವರ್ಷದಲ್ಲಿ ಪೂರೈಸಿದನು (೧) ಹೆಲ್ವಿಷಿಯೈ. ಈಗಿನ ಸ್ವಿಸರ್ಲೆಂಡ್ ಭಾಗದಲ್ಲಿದ್ದ ಹೆಲ್ವಿಷಿಯೈ ಜನಾಂಗದವರು ರೋಮನ್ನರ ಪ್ರಾಂತಗಳ ಮೂಲಕ ಪಶ್ಚಿಮಗಾಲಿಗೆ ವಲಸೆಹೋಗಲು ಯತ್ನಿಸುತ್ತಿದ್ದರು. ಸೀಸರನು ಇವರನ್ನು ಜೆನೀವಬಳಿ ತಡೆದು ಅವರನ್ನು ಬೈಜ್ರಾಕ್ಟೆ ಬಳಿಯಲ್ಲಿ ಸೋಲಿಸಿ ಹಿಂತಿರುಗುವಂತೆ ಮಾಡಿದನು (೨) ಗಾಲಿಯಬೆಲ್ಜಿಕ-ನೆರ್ವೈ ಕ್ರಿ. ಪೂ. ೫೭ ರಲ್ಲಿ ಸೀಸರನು ರೋಮಿನ ಮೇಲೆ ವಿರೋಧ ಮಾಡಿದ್ದ ಆರಿಯೊವಿಸ್ಟಸನನ್ನು ಸೋಲಿಸಿ ಈಶಾನ್ಯಗಾಲನ್ನು ಗೆದ್ದನು. ಆದರೆ ಬೆಲ್ಜೈ ಜನಾಂಗದವರಾದ ನೆರ್ವೈ ಜನರು ಪ್ರತಿಭಟಿಸಲು ಸೀಸರನು ಅವರನ್ನು ಸೋಲಿಸಿದನು. ಅದೇ ಸಮಯದಲ್ಲಿ ಕ್ರಾಸಸ್ ನಾರ್ಮಂಡಿ ಮತ್ತು ಬ್ರಿಟನಿ ಪ್ರಾಂತಗಳನ್ನು ಗೆದ್ದನು. (೩) ಮೂರನೆಯ ದಂಡಯಾತ್ರೆಯಲ್ಲಿ ಲಾಯರ್ ನದಿ ಹತ್ತಿರ ವೆನಿಷ್ಯೆ ಮತ್ತು ಆಕ್ವಿಟಾನೈ ಜನರು ಶರಣಾಗತರಾದರು. (೪) ಕ್ರಿ ಪೂ. ೫೫ ರಲ್ಲಿ ರ್ಹೈನ್ ನದಿ ಬಳಿಯಲ್ಲಿ ಜರ್ಮನರು ಸೋಲಿಸಲ್ಪಟ್ಟರು. ಗಾಲರಿಗೆ ಬ್ರಿಟಿಷಿನವರು ಸಹಾಯಮಾಡುತ್ತಿದ್ದುದರಿಂದ ಸೀಸರ್ ಸಮುದ್ರವನ್ನು ದಾಟಿ ಪ್ರಥಮತಃ ಇಂಗ್ಲೆಂಡಿನಲ್ಲಿ ಇಳಿದನು. ಆದರೆ ಒಂದು ತಿಂಗಳು ಮಾತ್ರ ಅಲ್ಲಿದ್ದು ಫ್ರಾನ್ಸಿಗೆ ಹಿಂತಿರುಗಿದನು. (೫) ಕ್ರಿ. ಪೂ ೫೪ ರಲ್ಲಿ ಎರಡನೇಯ

ಸಲ ಇಂಗ್ಲೆಂಡನ್ನು ದಾಳಿ ಮಾಡಿದನು. ಥೇಮ್ಸ್ ನದಿವರೆಗೆ ಹೋಗಿ ಕ್ಯಾಸ್ಸಿವೆಲಾನಸ್ ಮುಂತಾದ ಜನಾಂಗಗಳ ರಾಜರನ್ನು ಗೆದ್ದು ಫ್ರಾನ್ಸಿಗೆ ಹಿಂತಿರುಗಿದನು (೭) ನೆರ್ವೈ ಮತ್ತು ಟ್ರೆವಿರೈ (೫೩). ಗಾಲಿನಲ್ಲಿ ಈಶಾನ್ಯಭಾಗದ ಜನಾಂಗಗಳು ದಂಗೆ ಎದ್ದು ರೋಮನ್ನರ ದಂಡಿನ ಮೇಲೆ ದಾಳಿಮಾಡಿದ್ದರು. ನೆರ್ವೈ ಜನರನ್ನು ಸೋಲಿಸಿ ಸೈನ್ ನದಿ ಬಳಿ ಸೆನೋನಿಸ್ ಮತ್ತು ಕಾರ್ನೂಟಿಸ್ ಎಂಬವರನ್ನು ಅಣಗಿಸಿ ಈಗಿನ "ಪಾರಿಸ್" ಬಳಿ ಎಲ್ಲ ಗಾಲ್ ಜನಾಂಗಗಳನ್ನು ಕರಿಸಿ "ದರ್ಬಾರ್" ಮಾಡಿದನು. (೭) ಸೀಸರನು ಇಟಲಿಗೆ ಹಿಂತಿರುಗಲು ಗಾಲಿನ ಎಲ್ಲ ಜನಾಂಗಗಳು ೫೨ ರಲ್ಲಿ ವೆರ್ಸಿಂಜಟೋರಿಕ್ಸ್ ಎಂಬವನ ನೇತೃತ್ವದಲ್ಲಿ ದಂಗೆ ಎದ್ದರು. ಸೀಸರನು ಹಟಾತ್ತಾಗಿ ಇಟಲಿಯಿಂದ ಬಂದು ಆಲ್ಪ್ಸ್ ಪರ್ವತಗಳನ್ನು ದಾಟಿ ತನ್ನ ಸೇನೆಗಳನ್ನು ಸೇರಿ ದಂಗೆಗಾರರು ತಿಳಿಯುವದಕ್ಕೆ ಮುಂಚಿಯೇ ಅವರ ಮೇಲೆ ಬಿದ್ದು ಅನೇಕ ದುರ್ಗಗಳನ್ನು ವಶಮಾಡಿಕೊಂಡನು. ಕ್ರಿ ಪೂ. ೫೨ ರಲ್ಲಿ ಸೀಸರನಿಗೆ ಮಿತ್ರರಾದ ಎಡ್ಯುಯ್ಕೆ ಜನರೂ ದಂಗೆಗಾರರನ್ನು ಸೇರಿದರು. ಇವರೆಲ್ಲರೂ ಬೈಬ್ರಾಕ್ಟೆ ಬಳಿಯಲ್ಲಿ ಒಪ್ಪಂದಮಾಡಿಕೊಂಡು ತಮ್ಮ ಸೇನೆಗೆ ವೆರ್ಸಿಂಜಟೋರಿಕ್ಸ್‌ನನ್ನು ಸರ್ವಾಧಿಕಾರಿಮಾಡಿದರು. ಸೀಸರನು ಅವನನ್ನು ಸೋಲಿಸಿ ಆಲೀಸಿಯ ಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಗಾಲಿನ ಎಲ್ಲ ಜನಾಂಗಗಳು ೨,೫೦,೦೦೦ ಸಿಪಾಯಿ, ೮,೦೦೦ ಅಶ್ವಿಕ ಸೈನ್ಯ ಸೇರಿಸಿ ಸೀಸರನ ಸೈನ್ಯವನ್ನು ಸುತ್ತುಗಟ್ಟಿದರು. ಸೀಸರನ ಸ್ಥಿತಿಯು ಅಪಾಯುಕರವಾಗಿದ್ದರೂ ಧೈರ್ಯಗುಂದದೆ ಹೋರಾಡಿದನು. ಕೊನೆಗೆ ರೋಮನ್ ಯೋಧರ ಶಿಸ್ತು ವಿಜಯವನ್ನು ತಂದಿತು. ಗಾಲರೆಲ್ಲರೂ ಶರಣಾಗತರಾದರು. ವೆರ್ಸಿಂಜಿಟೋರಿಕ್ಸನನ್ನು ಬಂಧಿಸಿ ರೋಮಿನಲ್ಲಿ ಮೆರವಣಿಗೆ ಮಾಡಿಸಿ ಕೊಲ್ಲಿಸಿದನು. (೮–೯,) ಕ್ರಿ.ಪೂ. ೫೧–೫೦ ರಲ್ಲಿ ಸೀಸರನು ಸಣ್ಣ ಯುದ್ಧಗಳನ್ನು ಮಾಡಿ ರೋಮನ್ ಸಾಮ್ರಾಜ್ಯವನ್ನು ಗಾಲ್‌ನಲ್ಲಿ ವಿಸ್ತರಿಸಿದನು.

ಈ ದಂಡೆಯಾತ್ರೆಗಳಲ್ಲಿ ೧೦ ೦೦ ೦೦೦ ಜನ ಸತ್ತರು. ಗಾಲ್ ರೋಮನ್ನರ ಪ್ರಾಂತವಾಯಿತು. ಅಲ್ಲಿನ ಜನಾಂಗಗಳ ಸ್ವಾತಂತ್ರ್ಯವು ಅದೃಶ್ಯವಾಯಿತು. ಸೀಸರನು ಈ ಯುದ್ಧಗಳಲ್ಲಿ ಎಂಟು ವರ್ಷ ಕಳೆದಿದ್ದನು. ಇಷ್ಟರಲ್ಲಿ ರೋಮಿನಲ್ಲಿ ಇವನ ಹಕ್ಕಿಗೆ ಅಪಾಯ ಉಂಟಾಗುವ ಸೂಚನೆಗಳು ಕಂಡುಬಂದವು. ಇವನಿಗೂ ಪಾಂಪೆಗೂ ವೈಮನಸ್ಯವು ಅಧಿಕವಾಯಿತು. ಸೀಸರನ ವಿರೋಧಿಗಳು ಅವನನ್ನು ಶಿಕ್ಷಿಸಲು ಯತ್ನಿಸುತ್ತಿದ್ದರು. ಆದ್ದರಿಂದ ಸೀಸರನು ತನ್ನ ಸೇನೆಯೊಡನೆ ಗಾಲಿನಿಂದ ಹಿಂತಿರುಗಿ ಇಟಲಿ ಮೇಲೆಯೆ ದಂಡೆಯಾತ್ರೆ ಮಾಡಬೇಕಾಯಿತು. ಸೀಸರನ ದಂಡಯಾತ್ರೆಗಳ ಪರಿಣಾಮವಾಗಿ ದಕ್ಷಿಣ ಯುರೋಪ್ ಎಲ್ಲ ರೋಮನ್ ಸಂಸ್ಕೃತಿಯನ್ನು ಅಂಗೀಕರಿಸಿತು. ಸೀಸರನು ಜೀವಿಸಿದ್ದರೆ ಡಾನ್ಯೂಬ್ ವರೆಗೂ ಗೆಲ್ಲುತ್ತಿದ್ದನು. ಇಟಲಿಗೆ ಪೂರ್ವದಲ್ಲಿ ಏಡ್ರಿಯಾಟಿಕ್ ತೀರವು ವಶವಾಗಿದ್ದರೂ ಇಲ್ಲಿರಿಯ ಮತ್ತು ಮ್ಯಾಸಿಡೋನಿಯ ದೇಶಗಳು ಸಂಪೂರ್ಣವಾಗಿ ವಶವಾಗಿರಲಿಲ್ಲ.

## ರೋಮ್ ಚಕ್ರಾಧಿಪತ್ಯ

ಪಾಂಪೆ ಮತ್ತು ಸೀಸರನ ದಂಡಯಾತ್ರೆಗಳಿಂದ ರೋಮನ್ನರ ಆಳಿಕೆ ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಮುದ್ರ, ಉತ್ತರದಲ್ಲಿ ರೈನ್ ನದಿ, ಪೂರ್ವದಲ್ಲಿ ಯೂಫ್ರಟೀಸ್ ನದಿ, ದಕ್ಷಿಣದಲ್ಲಿ ಆಫ್ರಿಕ ತೀರದವರೆಗೂ ವ್ಯಾಪಿಸಿತು. ಆಫ್ರಿಕದಲ್ಲಿ ಈಜಿಪ್ಟ್, ನ್ಯೂಮಿಡಿಯ, ಮಾರಿಟೇನಿಯ ರೋಮನ್ನರಿಗೆ ವಿಧೇಯವಾಗಿದ್ದವು. ಸೈರೇನಿಕವು ಸಂಪೂರ್ಣವಾಗಿ ವಶವಾಗಿತ್ತು. ಆದರೆ ಈ ವಿಶಾಲ ಸಾಮ್ರಾಜ್ಯದಲ್ಲಿ ಅಂತರ್ಬಲವಿರಲಿಲ್ಲ. ರೋಮಿನಲ್ಲಿ ಅಂತರ್ಯುದ್ಧಗಳು ನಡೆದು ಚಕ್ರಾಧಿಪತ್ಯವೂ ಬಲಹೀನವಾಯಿತು. ಸ್ಪೈನ್ ಆಫ್ರಿಕ, ಏಷ್ಯ ಯೂರೋಪಿನಲ್ಲಿದ್ದ ಪ್ರಾಂತಾಧಿಕಾರಿಗಳು ಪ್ರತಿಷ್ಠೆ ಐಶ್ವರ್ಯ ಸಂಪಾದನೆಯಲ್ಲೇ ಆಸಕ್ತರಾಗಿದ್ದರು. ಜನರು ನಿರ್ಧನರು, ನ್ಯಾಯಾಧೀಶರು ಲಂಚಕೋರರು. ರೋಮನ್ ಲೇವಾದೇವಿ ಮಾಡುವವರು ದುರಾಸೆಗಾರರು ಆದ್ದರಿಂದ

ವಿಶಾಲ ಭಾಗಗಳು ಮರುಭೂಮಿಗಳಂತಾಗಿದ್ದವು. ಸೀಸರ್ ಮತ್ತು ಪಾಂಪೆಯಂತಹ ದೊಡ್ಡ ಸೇನಾಪತಿಗಳ ಕೈಗೆ ನಿರಂಕುಶಾಧಿಕಾರ ಐಶ್ವರ್ಯ ಬಂದಿದ್ದುದರಿಂದ ಅಂತರ್ಯುದ್ಧಗಳು ಆರಂಭವಾದವು.

---

## ಅಧ್ಯಾಯ ೧೭

### ಅಂತರ್ಯುದ್ಧ

ತ್ರಿಮೂರ್ತಿಗಳ ಅಧಿಕಾರ ಯಶಸ್ವಿಯಾಗಲಿಲ್ಲ. ಪಾಂಪೆಗೂ ಕ್ರಾಸಸ್ಸಿಗೂ ವೈಮನಸ್ಯ ಹುಟ್ಟಿತು. ಸಿಸಿರೋ ರೋಮಿಗೆ ಹಿಂತಿರುಗಿದ ಮೇಲೆ ಪಾಂಪೆಕಡೆ ಸೇರಿದನು. ಪಾಂಪೆಯು ಧಾನ್ಯ ಸಂಗ್ರಹಣಕ್ಕೆ ಸಿಸಿಲಿಗೆ ಹೋಗಿದ್ದಾಗ ಕ್ಲಾಡಿಯಸ್ ಅವನಮೇಲೆ ಆಪಾದನೆ ತಂದನು. ಮತ್ತು ಈಜಿಪ್ಟಿನಲ್ಲಿ ಆ ರಾಜ್ಯವನ್ನು ಪುನಃ ಟಾಲೆಮಿಗೆ ಕೊಡಿಸ ಬೇಕೆಂದು ಪಾಂಪೆ ಪ್ರಯತ್ನಿಸಿದ್ದನು. ಆದರೆ ಸೆನೇಟ್ ಅದನ್ನು ವಿರೋಧಿಸಿತು ಮತ್ತು ಸೀಸರನನ್ನು ಅವನು ಗಾಲಿನಲ್ಲಿ ಮಾಡಿದುದಕ್ಕಾಗಿ ಖಂಡಿಸಿತು. ಆದುದರಿಂದ ಕ್ರಿ.ಪೂ ೫೬ರಲ್ಲಿ ಪಾಂಪೆ, ಸೀಸರ್ ಮತ್ತು ಕ್ರಾಸಸ್ ಮತ್ತೊಂದು ಒಪ್ಪಂದ ಮಾಡಿಕೊಂಡರು. ಪಾಂಪೆ ಮತ್ತು ಕ್ರಾಸಸ್ ಕೂಡಲೆ ಕಾನ್ಸಲರಾಗಬೇಕು; ಸೀಸರನು ಕ್ರಿ ಪೂ. ೪೮ರಲ್ಲಿ ಕಾನ್ಸಲಾಗಬೇಕು. ಸೀಸರನಿಗೆ ಗಾಲ್, ಪಾಂಪೆಗೆ ಸ್ಪೈನ್ ಕ್ರಾಸಸ್ಸಿಗೆ ಸಿರಿಯ ಪ್ರಾಂತಾಧಿಕಾರಗಳು ಕೊಡಬೇಕು. ಆದರೆ ಈ ಏರ್ಪಾಟು ಜಾರಿಗೆ ಬರಲಿಲ್ಲ. ಸೀಸರನ ಮಗಳೂ ಪಾಂಪೆ ಹೆಂಡತಿಯೂ ಆದ ಜೂಲಿಯ ಸತ್ತುಹೋದಳು. ಆದ್ದರಿಂದ ಅವರಲ್ಲಿ ಮನಸ್ತಾಪ ಹುಟ್ಟಿತು. ಪಾರ್ಥಿಯನ್ನರೊಡನೆ ಯುದ್ಧಮಾಡುತ್ತ ಕಾರ್ಹೀ ಬಳಿ ಕ್ರಾಸಸ್ಸನು ಹತನಾದನು. ರೋಮಿನಲ್ಲಿ ಗಲಭೆಗಳು ಹೆಚ್ಚಾದುದರಿಂದ ಪಾಂಪೆ ತಾನೊಬ್ಬನೇ ಕಾನ್ಸಲಾಗಿ ಸೆನೇಟಿನಿಂದ ನೇಮಿತನಾದನು (ಕ್ರಿ.ಪೂ. ೫೨).

ಪಾಂಪೆ ಲಂಚವನ್ನು ಅಣಗಿಸಿ, ಪಂಚಾಯಿತರನ್ನು ಚುನಾಯಿಸುವ ರೀತಿಯಲ್ಲಿ ಬದಲಾವಣೆ ಮಾಡಿದನು. ರೋಮಿನಲ್ಲಿ ಕುತಂತ್ರ ತಪ್ಪಿಸಲು ಯಾವ ಕಾನ್ಸಲನೂ ಪ್ರಾಂತಾಧಿಕಾರಿಯಾಗಬೇಕಾದರೆ ಐದು ವರ್ಷಗಳಾದರೂ ಕಳೆದಿರಬೇಕೆಂದು ಕಾನೂನು ಮಾಡಿದನು. ಆದರೆ ಪಾಂಪೆ ವಿಷಯದಲ್ಲಿ ಮಾತ್ರ ಇದನ್ನು ಅನುಸರಿಸಲಿಲ್ಲ. ಅವನು ರೋಮಿನಲ್ಲಿ ಕಾನ್ಸಲಾಗಿದ್ದರೂ ಮತ್ತೆ ಐದು ವರ್ಷ ಸ್ಪೈನಿನ ಪ್ರೋ-ಕಾನ್ಸಲ್ಲಾಗಿ ನೇಮಿತನಾದನು. ಸ್ಪೈನಿನ ಆಡಳಿತಕ್ಕೆ ಮೂವರು ಲಿಗೇಟ್ಟೈ ಎಂಬ ಅಧಿಕಾರಿಗಳನ್ನು ನೇಮಿಸಿ ತಾನು ರೋಮಿನಲ್ಲೇ ಸೈನ್ಯ ಜಮಾವಣೆ ಮಾಡಲಾರಂಭಿಸಿದನು. ಮತ್ತು ಸೀಸರನಿಗೆ ಕೊಟ್ಟಿದ್ದ ಮೂರು ಲೀಜಿಯನ್ನುಗಳಲ್ಲಿ ಎರಡನ್ನು ವಾಪಸು ಕರೆಸಿದನು.

ಇದರಿಂದ ಸೀಸರನಿಗೆ ಉದ್ರೇಕವಾಯಿತು. ಕೂಡಲೆ ತಾನೂ ಗಾಲಿನಲ್ಲಿ ಹೆಚ್ಚು ಸೈನ್ಯ ಜಮಾವಣೆ ಮಾಡಲಾರಂಭಿಸಿದನು. ಕ್ರಿ.ಪೂ. ೪೯ ರಲ್ಲಿ ಸೀಸರನು ತಾನು ಪಾಂಪೆ ಇಬ್ಬರೂ ತಮ್ಮ ಸೈನ್ಯಗಳನ್ನು ಒಂದೇ ಸಮಯದಲ್ಲಿ ಚದುರಿಸಲು ಸೆನೇಟ್ ಆಜ್ಞೆಮಾಡಬೇಕೆಂದು ಸೆನೇಟಿಗೆ ಅಂತ್ಯಪತ್ರ ಕಳುಹಿಸಿದನು. ನ್ಯಾಯವಾಗಿ ಸೀಸರನು ಪ್ರೋಕಾನ್ಸಲ್ಲಾಗಿದ್ದರೂ ಸೆನೇಟ್ ಪಾಂಪೆ ಮಾತುಕೇಳಿ ಅವನ ಅಧಿಕಾರವನ್ನು ಕಸಿದುಕೊಳ್ಳಲು ಯತ್ನಿಸಿತು. ಸೀಸರನು ಮಾತ್ರ ಸೈನ್ಯವನ್ನು ಬಿಟ್ಟು ಶರಣಾಗತನಾಗಬೇಕೆಂದೂ ಪಾಂಪೆ ಹಾಗೆ ಮಾಡುವ ಆವಶ್ಯಕತೆಯಿಲ್ಲವೆಂದು ಸೆನೇಟ್ ಆಜ್ಞೆಮಾಡಿತು. ಸೀಸರನ ಸ್ನೇಹಿತರಾದ ಮಾರ್ಕ್ ಆಂಟೊನಿ ಮತ್ತು ಕ್ಯಾಸಿಯಸ್ ಟ್ರೈಬ್ಯೂನರಾಗಿದ್ದುದರಿಂದ ಆಜ್ಞೆಗೆ ನಿಷೇಧಪ್ರಯೋಗ (ವೀಟೊ) ಮಾಡಿ ರಾವೆನ್ನ ಬಳಿಯಲ್ಲಿದ್ದ ಸೀಸರನ ಹತ್ತಿರಕ್ಕೆ ಓಡಿಬಂದರು. ಸೀಸರನು ಕೂಡಲೆ ತನ್ನ ಪ್ರಾಂತಕ್ಕೂ ಇಟಲಿಗೂ ಸರಹದ್ದಾಗಿದ್ದ ರುಬಿಕನ್ ನದಿ ದಾಟಿ ಉತ್ತರದಲ್ಲಿದ್ದ ಪಟ್ಟಣಗಳನ್ನೆಲ್ಲ ಹಿಡಿದನು. ಪಾಂಪೆ ಇಟಲಿ ಮತ್ತು ಸಿಸಿಲಿಯನ್ನು ರಕ್ಷಿಸಲು ಗ್ರೀಸಿನಲ್ಲಿ ಸೈನ್ಯ ಜಮಾವಣೆಮಾಡುವುದಕ್ಕಾಗಿ ಅಲ್ಲಿಗೆ ಹೊರಟುಹೋದನು. ಸೀಸರನು ರೋಮನ್ನು ವಶಮಾಡಿ

ಕೊಂಡು ಅಲ್ಲಿ ಲೆಪಿಡಸನ್ನು ನೇಮಿಸಿ, ಇಟಲಿಯನ್ನು ಆಂಟೊನಿ ವಶಮಾಡಿ ಪಾಂಪೆ ಅಧಿಕಾರಿಗಳಿದ್ದ ಸ್ಪೈನ್ ಮತ್ತು ಮಾರ್ಸೈಲ್ಸ್‌ಗೆ ಮುತ್ತಿಗೆ ಹಾಕಿದ್ದನು. ಅಲ್ಲಿದ್ದ ಪಾಂಪೆ ಅಧಿಕಾರಿಗಳು (ಲೆಗೇಟ್ಸ್) ಶರಣಾಗತರಾದರು. ಹೀಗೆ ಸೀಸರನು ಕ್ರಿ.ಪೂ. ೪೯ ರಲ್ಲಿ ಸ್ಪೈನ್, ಗಾಲ್, ಸಾರ್ಡಿನಿಯು, ಸಿಸಿಲಿ ಮತ್ತು ನ್ಯೂಮಿಡಿಯ ಪ್ರಾಂತಗಳನ್ನೆಲ್ಲ ವಶಮಾಡಿಕೊಂಡನು.

ಸೀಸರನು ರೋಮಿಗೆ ಹಿಂತಿರುಗಿ ಕಾನ್ಸಲ್ಲಾಗಿ ಚುನಾಯಿತನಾದನು. ಸೆನೇಟ್ ಇವನ ದಾಸಿಯಾಯಿತು. ಪಾಂಪೆಯನ್ನು ನಾಶಮಾಡಲು ಸೀಸರನು ಎಪಿರಸ್ಸಿಗೆ ಹೊರಟನು. ಪಾಂಪೆಯ ನೌಕಾಬಲ ಅಡ್ಡಿಮಾಡಲು ಯತ್ನಿಸಿತು ಆದರೆ ಆಂಟೊನಿ ಸಹಾಯದಿಂದ ಗೆದ್ದು ಥೆಸಲಿಯನ್ನು ಆಕ್ರಮಿಸಿದನು. ಕೊನೆಗೆ "ಫಾರ್ಸೇಲಿಯ" ಕದನದಲ್ಲಿ ಪಾಂಪೆ ಪರಾಜಿತನಾಗಿ ಈಜಿಪ್ಟಿಗೆ ಓಡಿಹೋದನು ಅವನನ್ನು ಅಟ್ಟಿಕೊಂಡು ಸೀಸರನು ಈಜಿಪ್ಟಿಗೆ ಬಂದನು ಆದರೆ ಅಷ್ಟರಲ್ಲಿ ಪಾಂಪೆ ಅಲೆಕ್ಸಾಂಡ್ರಿಯ ಬಳಿ ರೋಮನ್ನರಿಂದ ಹತನಾಗಿದ್ದನು. ಅವನ ಸೈನ್ಯವು ಸೀಸರನಿಗೆ ಶರಣಾದವು.

ಪಾಂಪೆ ಬಹು ಪ್ರಾಮಾಣಿಕನೂ ಸಂಸ್ಕೃತನೂ ಆಗಿದ್ದನು. ಅವನಿಗೆ ಮಹತ್ವಾಕಾಂಕ್ಷೆ ಅಧಿಕವಾಗಿದಿತು. ಆದರೂ ಪ್ರಜಾಪ್ರಭುತ್ವವನ್ನು ಉಳಿಸಲು ಯತ್ನಮಾಡುತ್ತಿದ್ದನು. ಎರಡು ಪಾರ್ಟಿಯವರೂ ಅವನನ್ನು ಉಪಯೋಗಿಸಿಕೊಂಡರು. ಪಾಂಪೆ ದೊಡ್ಡ ಯೋಧನೂ ಸೇನಾಪತಿಯೂ ಆದರೂ ರಾಜಕೀಯವೇತ್ತನಾಗಿರಲಿಲ್ಲ ಸೀಸರಿನಂತೆ ಮನೋದಾರ್ಢ್ಯವನ್ನಾಗಲಿ ನಿರ್ದಿಷ್ಟವಾದ ಕಾರ್ಯಕ್ರಮವನ್ನಾಗಲಿ ಹೊಂದಿರಲಿಲ್ಲ.

**ಈಜಿಪ್ಟ್**—ಸೀಸರನು ಈಜಿಪ್ಟಿನಲ್ಲಿ ರಾಜನಾದ ಹನ್ನೆರಡನೆಯ ಟಾಲಮಿಗೂ ಅವನ ಸಹೋದರಿ ಮತ್ತು ಪತ್ನಿಯಾದ ಕ್ಲಿಯೋ

ಪಾಟ್ರೆಗೂ ನಡೆಯುತ್ತಿದ್ದ ಕಲಹವನ್ನು ತೀರಿಸಲು ಯತ್ನಿಸಿದನು. ಆದರೆ ಟಾಲಮಿಯು ಸೀಸರನ ಶತ್ರುಗಳ ಪಕ್ಷವನ್ನು ವಹಿಸಿದ್ದರಿಂದ ಅವನನ್ನು ಸೋಲಿಸಿ ಕೊಂದು ಅಲೆಕ್ಸಾಂಡ್ರಿಯುವನ್ನು ವಶಮಾಡಿ ಕೊಂಡನು. ಸೀಸರನು ಕ್ಲಿಯೋಪಾಟ್ರಳಲ್ಲಿ ವ್ಯಾಮೋಹಿತನಾಗಿ ಅವಳನ್ನು ರಾಣಿಮಾಡಿದನು. ಅವಳು ಮತ್ತೊಬ್ಬ ಸಹೋದರನನ್ನು ಮದುವೆಯಾಗಿ ಸ್ವಲ್ಪಕಾಲದಲ್ಲೆ ಅವನನ್ನು ಕೊಲ್ಲಿಸಿದಳು. ಹೀಗೆ ಸೀಸರ್ ಮತ್ತು ಕ್ಲಿಯೋಪಾಟ್ರ ಈಜಿಪ್ಟನ್ನು ವಶಮಾಡಿಕೊಂಡರು.

ಏಷ್ಯಾ—ರೋಮಿನಲ್ಲಿ ಅಧಿಕಾರಿಯಾಗಿದ್ದ ಆಂಟೊನಿ ಅಲ್ಲಿನ ಗಲಭೆಗಳನ್ನಡಗಿಸಲು ಶಕ್ತನಾಗಿರಲಿಲ್ಲ. ಆದ್ದರಿಂದ ಸೀಸರನು ಹಿಂತಿರು ಗಿದನು. ಅತಿ ತ್ವರೆಯಾಗಿ ಏಷ್ಯಾ ಮೂಲಕ ಹೊರಟು ಸಿರಿಯು ಸೈಲೀಷಿಯ ಮತ್ತು ಕ್ಯಾಪಡೋಷಿಯ ವ ಶ ಮಾ ಡಿ ಕೊ ೦ ಡ ನು. ಪಾಂಟಸ್‌ನಲ್ಲಿ ಮಿತ್ರಡಾಟಿಸನ ಮಗ ಫಾರ್ನಾಸಸ್ ಸ್ವತಂತ್ರನಾಗಲು ಯತ್ನಿಸುತ್ತಿದ್ದು ರೋಮನರನ್ನು ಸೋಲಿಸಿದ್ದನು. ಸೀಸರನು ಫಾರ್ನಾಸಸ್ಸನನ್ನು ಸೇಲ ಕದನದಲ್ಲಿ ಕ್ರಿ ಪೂ. ೪೭ರಲ್ಲಿ ಸೋಲಿಸಿದನು. "ಬಂದೆ, ನೋಡಿದೆ, ಗೆದ್ದೆ" (ವೆನ್ಯೆ ವಿಡ್ಯೆ ವಿಕ್ಸೆ) ಎಂದು ಘೋಷಿಸಿದನು.

ಕ್ರಿ.ಪೂ. ೪೭ ರಲ್ಲಿ ರೋಮಿಗೆ ಬಂದು ವ್ಯವಸ್ಥೆ ಮಾಡಿ ಪುನಃ ಆಫ್ರಿಕಕ್ಕೆ ಹೋಗಿ ಪಾಂಪೆ ಪಾರ್ಟಿಯ ಮುಖಂಡರನ್ನು ಸೋಲಿಸಿದನು. ಕ್ರಿ ಪೂ. ೪೬ ರಲ್ಲಿ ಪಾಂಪೆ ಮಾವನಾದ ಸಿಪಿಯೋನನ್ನು "ಥಾಪ್ಸಸ್" ಕದನಲ್ಲಿ ಸೋಲಿಸಿದನು. ಕ್ಯಾಟೋ ಆತ್ಮಹತ್ಯೆ ಮಾಡಿಕೊಂಡನು, ಇತರ ವಿರೋಧಿಗಳು ನಿರ್ಮೂಲಮಾಡಲ್ಪಟ್ಟರು. ಆಫ್ರಿಕ ವಶ ವಾಯಿತು. ನ್ಯುಮಿಡಿಯ ರೋಮನ್ ಪ್ರಾಂತವಾಯಿತು. ಈ ರೀತಿ ಸೀಸರನು ಕೇವಲ ಕಾನ್ಸಲ್ಲಾದರೂ ಸಮಸ್ತ ಸಾಮ್ರಾಜ್ಯಕ್ಕೂ ಒಡೆಯ ನಾದನು.

# ಅಧ್ಯಾಯ ೧೪

## ಸೀಸರನ ಆಳಿಕೆ (ಕ್ರಿ.ಪೂ. ೪೬-೪೪)

ಸೀಸರನು ಹತ್ತುವರ್ಷ "ಡಿಕ್ಟೇಟ"ರಾಗಿ ನೇಮಿತನಾದನು ವಾಸ್ತವವಾಗಿ ಅವನು ನಿರಂಕುಶ ಚಕ್ರವರ್ತಿ. ಪಾಂಟಸ್ ನ್ಯುಮಿಡಿಯ ಈಜಿಪ್ಟ್ ಮತ್ತು ಗಾಲಿನ ಮೇಲೆ ಜಯಶೀಲನಾದುದಕ್ಕಾಗಿ ರೋಮಿನಲ್ಲಿ ವಿಜಯೋತ್ಸವ (ಟ್ರೈಯಂಫ್) ನಡೆಸಿದನು. ಸ್ಪೈನಿನಲ್ಲಿ ಗ್ರೀಸಿನಲ್ಲಿ ಮಾತ್ರ ತನ್ನ ದೇಶದವರ ಮೇಲೆಯೇ ಯುದ್ಧ ಮಾಡಿದುದರಿಂದ ಆ ದೇಶಗಳ ವಿಜಯೋತ್ಸವವನ್ನು ನೆರವೇರಿಸಲಿಲ್ಲವಾದರೂ, ನಿಜವಾಗಿ ಪಾಂಪೆ ಮತ್ತು ಪ್ರಜಾಪ್ರಭುತ್ವ ಪತನಸೂಚಕವಾಗಿಯೇ ಈ ವಿಜಯೋತ್ಸವಗಳು ನಡೆದುವು.

## ಸೀಸರನ ಸುಧಾರಣೆಗಳು

೧ ಪಂಚಾಂಗದ ಸುಧಾರಣೆ. ಆದುವರೆಗೂ ರೋಮನ್ನರು ಚಾಂದ್ರಮಾನರೀತ್ಯಾ ಕಾಲಗಣನೆ ಮಾಡುತ್ತಿದ್ದರು. ಚಾಂದ್ರ ಮಾಸಕ್ಕೂ ಸೌರಮಾಸಕ್ಕೂ ಪ್ರತಿವರ್ಷವೂ ೧೦-೧೧ ದಿನ ವ್ಯತ್ಯಾಸ ವಿರುವುದರಿಂದ ಈ ವ್ಯತ್ಯಾಸವು ಕೂಡುತ್ತಬಂದು ೯೦ ದಿನ ಅಂತರ ವುಂಟಾಗಿದ್ದಿತು. ಇದರಿಂದ ಮತಾಚರಣೆಗಳೂ ದೇವತೆಗಳ ಉತ್ಸವ ಕಾಲಗಳೂ ಮೂರು ತಿಂಗಳು ಹಿಂದೆ ಬೀಳುತ್ತಿದ್ದವು. ಇದನ್ನು ಸರಿ ಪಡಿಸಲು ಸೀಸರನು ಪ್ರಸಿದ್ಧ ಜ್ಯೋತಿಷ್ಕರನ್ನು ಕರೆಸಿ ಲೆಕ್ಕ ಸರಿಪಡಿಸಿ ದನು. ಕ್ರಿ.ಪೂ. ೪೬ನೇ ಇಸವಿಯಲ್ಲಿ ೪೪೫ ದಿನ ಇರುವಂತೆ "ದೀರ್ಘ ಸಂವತ್ಸರ"ವನ್ನು ಮಾಡಿ ಕ್ರಿ.ಪೂ. ೪೫ರ ಜನವರಿ ೧ನೇ ತಾರೀಖಿನಿಂದ ಹೊಸ ವರ್ಷವನ್ನಾರಂಭಿಸಿದನು. ಇದರ ಸ್ಮಾರಕಕ್ಕಾಗಿ ಈ ಪಂಚಾಂಗಕ್ಕೆ "ಜೂಲಿಯನ್ ಕ್ಯಾಲೆಂಡರ್" ಎಂದು ಜೂಲಿಯಸ್ ಸೀಸರನ ಹೆಸರು ಬಂದಿತು ಮತ್ತು ಜುಲೈ ತಿಂಗಳಿಗೂ ಅವನ ಹೆಸರೇ ಕೊಡಲಾಯಿತು

೨. ಸೀಸರನು ಪ್ರೇಟೋರಿಯನ್ ಪ್ರಾಂತಗಳಮೇಲೆ ಅಧಿಕಾರವನ್ನು ಒಂದು ವರ್ಷಕ್ಕೂ, ಕಾನ್ಸುಲರ್ ಪ್ರಾಂತಾಧಿಕಾರವನ್ನು ಎರಡು ವರ್ಷಗಳಿಗೂ ಮಿತಿಮಾಡಿದನು. ೩. ಯಾವ ಸೆನೇಟರೂ ಇಟಲಿಯಿಂದ ಹೊರಗೆ ಮೂರು ವರ್ಷಕ್ಕಿಂತ ಹೆಚ್ಚಾಗಿ ಗೈರುಹಾಜರಿಯಾಗಿರಕೂಡದು. ೪. ಕುರಿಮಂದೆ ಬೆಳೆಸುವವರು ಗುಲಾಮರಲ್ಲದೆ ಕೂಲಿಗಾರರನ್ನೂ ನೇಮಿಸಬೇಕು. ೫. ನ್ಯಾಯಸ್ಥಾನಗಳಲ್ಲಿ ಪಂಚಾಯತರೆಲ್ಲ ಸೆನೇಟರರು ಈಕ್ವೈಟರೇ ಆಗಿರಬೇಕು. ೬ ಸೀಸರನು ಪ್ರಖ್ಯಾತ ವಿದ್ವಾಂಸರನ್ನು ಕರೆಸಿ ಆಶ್ರಯಕೊಟ್ಟು ಸಾಹಿತ್ಯಕಲೆಗಳಿಗೆ ಪ್ರೋತ್ಸಾಹಕೊಟ್ಟನು. ೭. ಜನಸಮ್ಮರ್ದನೆ ಮತ್ತು ಬಡತನವನ್ನು ಹೋಗಲಾಡಿಸಲು ಆಫ್ರಿಕ ಕಾರಿಂತ್ ಮತ್ತು ಗಾಲಿನಲ್ಲಿ ವಲಸೆಗಳನ್ನು ಸ್ಥಾಪಿಸಿದನು.

ಇಷ್ಟರಲ್ಲಿ ಪಾಂಪೆಯ ಇಬ್ಬರು ಮಕ್ಕಳು ಸ್ಪೈನಿಗೆ ಓಡಿಹೋಗಿ ದೊಡ್ಡ ಸೈನ್ಯವನ್ನು ನೌಕಾಬಲವನ್ನು ಸೇರಿಸಿ ದಂಗೆಎದ್ದರು. ಸೀಸರನು ಅವರಮೇಲೆ ಹೋಗಿ ಕ್ರಿ.ಪೂ. ೪೫ರಲ್ಲಿ "ಮುಂಡ" ಕದನದಲ್ಲಿ ಅವರನ್ನು ಸೋಲಿಸಿ ದಕ್ಷಿಣ ಸ್ಪೈನನ್ನು ವಶಮಾಡಿಕೊಂಡನು. ಹೀಗೆ ಎಲ್ಲ ಶತ್ರುಗಳನ್ನು ಗೆದ್ದು ಸೀಸರನು ಆಜೀವ ಡಿಕ್ಟೇಟರಾಗಿಯೂ, ಹತ್ತು ವರ್ಷ ಕಾನ್ಸಲಾಗಿಯೂ ನೇಮಿತನಾದನು. ಸೇನೆ ಮತ್ತು ಭಂಡಾರದ ಸಂಪೂರ್ಣಾಧಿಕಾರವು ಅವನದೇ ಆಯಿತು.

## ಇತರ ಸುಧಾರಣೆಗಳು

೮. ರೋಮ್ ಪಟ್ಟಣವನ್ನು ವಿಸ್ತರಿಸಿ ಚೌಗುಭಾಗಗಳನ್ನು ಉತ್ತಮಗೊಳಿಸಿದನು. ೯. ಫೋರಂ, ಕ್ಯೂರಿಯ, ನಾಟಕಶಾಲೆ, ದೇವಾಲಯಗಳೇ ಮುಂತಾದ ಸಾರ್ವಜನಿಕ ಕಟ್ಟಡಗಳನ್ನು ಕಟ್ಟಿಸಿದನು. ೧೦. ಒಂದು ದೊಡ್ಡ ಸಾರ್ವಜನಿಕ ಪುಸ್ತಕ ಭಾಂಡಾಗಾರವನ್ನು ಸ್ಥಾಪಿಸಿದನು ಮತ್ತು ಪ್ರಸಿದ್ಧ ನ್ಯಾಯವಾದಿಗಳ ಸಹಾಯದಿಂದ ಕಾನೂನುಗಳ ಸಂಗ್ರಹಣ(ಕೋಡ್) ಮಾಡಿಸಿದನು. ಇದರಿಂದ "ರೋಮನ್ ಲಾ"

ಮುಂದಿನ ಯೂರೋಪಿನ ನ್ಯಾಯರೀತಿಗೆ ಆದರ್ಶವಾಯಿತು. ೧೧. ಪಾಂಪ್ಟೈನ್ ಜೌಗುದೇಶದಲ್ಲಿ ದೊಡ್ಡ ನಾಲೆಯನ್ನು ಮಾಡಿಸಿ ನೀರು ಹೋಗುವಹಾಗೆ ಮಾಡಿದನು. ೧೨. ಆಸ್ಟಿಯ ರೇವನ್ನು ಉತ್ತಮಗೊಳಿಸಿ ಅಪಿನ್ನೈನ್ ಪರ್ವತಶ್ರೇಣಿ ದಾಟಿ ಏಡ್ರಿಯಾಟಿಕ್ ತೀರಕ್ಕೆ ಹೋಗಲು ರಸ್ತೆಯನ್ನು ಮಾಡಿಸಿದನು. ೧೩. ಚಕ್ರಾಧಿಪತ್ಯ ದಲ್ಲೆಲ್ಲ ಅನೇಕ ವಲಸೆಗಳನ್ನು ಸ್ಥಾಪಿಸಿದನು.

## ಸೀಸರನ ಹತ್ಯೆ

ಸೀಸರನಿಗೆ ಸರ್ವ ವಿಷಯಗಳಲ್ಲೂ ನಿರಂಕುಶಾಧಿಕಾರವಿದ್ದಿತು. ಪ್ರಾಂತಾಧಿಕಾರಿಗಳೂ ನ್ಯಾಯಾಧೀಶರೂ ಎಲ್ಲ ಅಧಿಕಾರಿಗಳೂ ಅವನ ಶಿಫಾರಿಸಿನಿಂದಲೇ ನೇಮಿತರಾಗಬೇಕು. ಸೆನೇಟಿನಲ್ಲಿ ಅವನ ಅನುಚರರೇ ೯೦೦ ಜನರಿದ್ದರು ಅವನ ಸ್ನೇಹಿತರಲ್ಲಿ ಕೆಲವರು ಹಲವು ಸಲ ಅವನಿಗೆ ಕಿರೀಟವನ್ನು ಅರ್ಪಿಸಿ ರಾಜ(ರೆಕ್ಸ್) ನನ್ನಾಗಿ ಮಾಡಲೂ ಯತ್ನಿಸಿದರು. ಆದರೆ ಸೀಸರನು ಸಮ್ಮತಿಸಲಿಲ್ಲ. ನೆಪಮಾತ್ರಕ್ಕೆ ಪ್ರಜಾಪ್ರಭುತ್ವವಿರುತ್ತಿದ್ದರೂ ತನ್ನ ವಂಶವನ್ನು ಭದ್ರಗೊಳಿಸುತ್ತಿದ್ದನು. ತನ್ನ ಸೋದರಳಿಯ ಮೊಮ್ಮಗನಾದ ಆಕ್ಟೇವಿಯನ್ನನು ತನ್ನ ಅನಂತರ ರಾಜ್ಯವಾಡುವಂತೆ ಯತ್ನಿಸುತ್ತಿದ್ದನು. ಸೀಸರನು ಹೊಗಳುಬಂಟರಿಂದಲೂ ಸ್ವಾರ್ಥಪರರಿಂದಲೂ ಪರಿವೃತನಾಗಿರುತ್ತಿದ್ದನು. ಇದನ್ನು ಸಹಿಸದ ಬ್ರೂಟಸ್ ಮತ್ತು ಕ್ಯಾಸಿಯಸ್ ಎಂಬವರು ಒಳಸಂಚು ಮಾಡಿದರು. ಇವರು ಪಾಂಪೆ ಪಕ್ಷದವರಾಗಿದ್ದು ಅನಂತರ ಸೀಸರ್‌ನಿಂದ ಕ್ಷಮೆ ಪಡೆದಿದ್ದರು. ಸೀಸರನು ಬ್ರೂಟಸನನ್ನು ಮಗನಂತೆ ಪ್ರೀತಿಯಿಂದ ಕಾಣುತ್ತಿದ್ದನು. ಅವನನ್ನು ಮ್ಯಾಸಿಡೋನಿಯಕ್ಕೂ ಕ್ಯಾಸಿಯಸ್‌ನನ್ನು ಸಿರಿಯಾಕ್ಕೂ ಪ್ರಾಂತಾಧಿಕಾರಿಗಳಾಗಿ ನೇಮಿಸಿದ್ದನು. ಆದರೆ ಅವರು ಪ್ರಜಾಪ್ರಭುತ್ವದ್ರೋಹಿಯೆಂದು ಬಗೆದು ಸೀಸರನು ಸೆನೇಟಿನಲ್ಲಿದ್ದಾಗ ಅರ್ಜಿ ಸಲ್ಲಿಸುವ ನೆಪದಿಂದ ಹತ್ತಿರಕ್ಕೆ ಬಂದು ಬಾಕಿನಿಂದ ತಿವಿದರು ಸೀಸರನು ಕೆಳಕ್ಕೆಬಿದ್ದು ಏಳಲು ಯತ್ನಿ

ಸಿದನು. ಆಗ ಬ್ರೂಟಸ್ಸನು ಪುನಃ ತಿವಿಯಲು ಸೀಸರನು "ನೀನು ಕೂಡ ಬ್ರೂಟಸ್ ! ನನ್ನ ಮಗನೆ !" ಎಂದು ಗತಪ್ರಾಣನಾದನು.

ಸೀಸರನ ಹತ್ಯೆಯು ಪರಿಣಾಮವಾಗಿ ರೋಮಿನಲ್ಲಿ ಎರಡು ಯುದ್ಧ ಶಿಬಿರಗಳುಂಟಾದವು. ಮುಖ್ಯ ನ್ಯಾಯಾಧೀಶನಾದ ಮಾರ್ಕ್ ಆಂಟೊನಿ, ಬ್ರೂಟಸ್ ಮತ್ತು ಕ್ಯಾಸಿಯಸ್ಸರಿಗೆ ಕೊಟ್ಟಿದ್ದ ಪ್ರಾಂತಾಧಿಕಾರಗಳನ್ನು ಸೆನೇಟ್ ರದ್ದುಮಾಡಬೇಕೆಂದು ಕೇಳಿದನು. ಆದರೆ ಅವರು ಪ್ರತಿಭಟಿಸಿ ತಮ್ಮ ಪ್ರಾಂತಗಳಿಗೋಸ್ಕರ ಯುದ್ಧವನ್ನಾರಂಭಿಸಿದರು. ಇಷ್ಟರಲ್ಲಿ ಜೂಲಿಯಸ್ ಸೀಸರನ ಉತ್ತರಾಧಿಕಾರಿಯಾದ ಆಕ್ಟೇವಿಯನ್ (ಆಗಸ್ಟಸ್) ರೋಮಿಗೆ ಬಂದನು. ಅವನಿಗೆ ಕೇವಲ ೧೮ ವರ್ಷವಾಗಿದ್ದರೂ ಬಹಳ ನಿಪುಣನಾಗಿದ್ದನು. ಸೀಸರನ ಹತ್ಯಕ್ಕೆ ಪ್ರತೀಕಾರಮಾಡುವುದೇ ಅಲ್ಲದೆ ಆಂಟೊನಿ ಪ್ರಬಲನಾಗದಂತೆ ಮಾಡುವದೇ ಅವನ ಉದ್ದೇಶ್ಯವಾಗಿತ್ತು. ಗ್ಯಾಲಿಯಸಿಸ್ ಆಲ್ಪೈನಿಯ ಪ್ರಾಂತಾಧಿಕಾರವನ್ನು ತನಗೆ ಕೊಡಬೇಕೆಂದು ಒತ್ತಾಯಪಡಿಸಲು ಆಂಟೊನಿ ಮ್ಯಾಸಿಡೋನಿಯದಿಂದ ಸೈನ್ಯಗಳನ್ನು ತರಿಸಿದನು. ಆಕ್ಟೇವಿಯನ್ ಅವನನ್ನು ಎದುರಿಸಿ "ಮ್ಯುಟಿನ" ಕದನದಲ್ಲಿ ಕ್ರಿ. ಪೂ. ೪೩ ರಲ್ಲಿ ಸೋಲಿಸಿದನು. ಆದರೆ ಆಂಟೊನಿ ತಪ್ಪಿಸಿಕೊಂಡು ಓಡಿಹೋದನು. ಆಕ್ಟೇವಿಯನ್ ರೋಮಿಗೆ ಬಂದು ಕಾನ್ಸಲ್ಲಾದನು. ಆಕ್ಟೇವಿಯನ್ ತಮ್ಮ ಪಕ್ಷವನ್ನು ವಹಿಸುವನೆಂದು ಆಪ್ಟಿಮೇಟರು ನಿರೀಕ್ಷಿಸಿದರು. ಆದರೆ ಅವನು ಸೀಸರನನ್ನು ಹತ್ಯಮಾಡಿದವರನ್ನೆಲ್ಲ ನಿರ್ಮೂಲಮಾಡಲು ಪ್ರತಿಜ್ಞೆಮಾಡಿದನು. ಕ್ಯಾಸಿಯಸ್ಸನು ಸಿರಿಯವನ್ನು, ಬ್ರೂಟಸ್ಸನು ಮ್ಯಾಸಿಡೋನಿಯವನ್ನು ಹಿಡಿದಿದ್ದರು. ಅಲ್ಲದೆ ಅವರಿಗೆ ಪಾಂಪೆ ಮಗನಾದ ಸೆಕ್ಸ್ಟಸ್ ಪಾಂಪೆಯ ಬಲವಾದ ನೌಕೆಗಳ ಸಹಾಯವು ಇದ್ದಿತು ಆದ್ದರಿಂದ ಆಕ್ಟೇವಿಯನ್ ಮಾರ್ಕ್ ಆಂಟೊನಿಯೊಡನೆ ರಾಜಿಮಾಡಿಕೊಂಡು ಲೆಪಿಡಸ್ಸಿನೊಡನೆ ಸೇರಿ ಮೂವರು ಐದು ವರ್ಷದ ತ್ರಿಮೂರ್ತ್ಯಧಿಕಾರವನ್ನು ಸ್ಥಾಪಿಸಿದರು. ಲೆಪಿಡಸ್ಸಿಗೆ ದಕ್ಷಿಣಗಾಲ್ ಮತ್ತು ಸ್ಪೈನ್, ಆಂಟೊನಿಗೆ ಮಿಶ್ರಗಾಲ್,

ಆಕ್ಟೇವಿಯನ್ನಿಗೆ ಆಫ್ರಿಕ ಸಿಸಿಲಿ ಹಂಚಲ್ಪಟ್ಟವು ತಾತ್ಕಾಲಿಕವಾಗಿ ಲೆಪಿಡಸ್ ರೋಮಿನ ಆಡಳಿತ ನೋಡಿಕೊಳ್ಳಬೇಕು. ಮೂವರು ಒಂದು ಗೂಢ ಕರಾರಿನ ಪ್ರಕಾರ ಸೀಸರನ ಹತ್ಯಕಾರರನ್ನು ಅಪ್ಟಿ ಮೇಟರ ಮುಖಂಡರನ್ನು ಕೊಲ್ಲಲು ಪ್ರತಿಜ್ಞೆಮಾಡಿದರು ತಕ್ಷಣವೇ ಸಿಸಿರೋನನ್ನು ಕೊಲ್ಲಿಸಿದರು. ಸೆನೇಟರರಲ್ಲಿ ೧೫೦ ಜನರನ್ನೂ ಇನ್ನೂ ಅನೇಕ ಇತರ ಜನರನ್ನು ಮರಣದಂಡನೆಗೆ ಗುರಿಮಾಡಿದರು. ಕೆಲವರು ತಪ್ಪಿಸಿಕೊಂಡು ಹೋಗಿ ಬ್ರೂಟಸನನ್ನು ಸೇರಿದರು.

ಕ್ರಿ.ಪೂ. ೪೨ ರಲ್ಲಿ ಆಕ್ಟೇವಿಯನ್ ಮತ್ತು ಆಂಟೊನಿ ಮ್ಯಾಸಿಡೋನಿಯ ಪ್ರವೇಶಿಸಿ ಫಿಲಿಪೈ ಯುದ್ಧದಲ್ಲಿ ಬ್ರೂಟಸ್ ಮತ್ತು ಕ್ಯಾಸಿಯಸ್ಸರನ್ನು ಕೊಂದರು. ಹೀಗೆ ಅವರಿಬ್ಬರು ಚಕ್ರಾಧಿಪತ್ಯದಲ್ಲೆಲ್ಲ ಪ್ರಬಲರಾಗಿ ಸಾಮ್ರಾಜ್ಯವನ್ನು ಹಂಚಿಕೊಂಡರು ಇಟಲಿ ಇಬ್ಬರಿಗೂ ಸಮಾನವಾಗಿರಬೇಕು ಆಂಟೊನಿಗೆ ಗಾಲ್ ಮತ್ತು ಆಫ್ರಿಕ, ಆಕ್ಟೇವಿಯನ್ನಿಗೆ ಸ್ಪೈನ್ ಮತ್ತು ನ್ಯುಮಿಡಿಯ ವಿಭಾಗವಾಯಿತು. ಆಂಟೊನಿ ಏಷ್ಯಕ್ಕೆ ಹೊರಟನು. ಆಕ್ಟೇವಿಯನ್ ರೋಮಿಗೆ ಹಿಂತಿರುಗಿದನು.

---

# ಅಧ್ಯಾಯ ೧೯

## ಆಕ್ಟೇವಿಯನ್ ಅಗಸ್ಟಸ್ ಸೀಸರ್

ಪೂರ್ವದೇಶಗಳನ್ನು ಆಂಟೊನಿ ಪಾಶ್ಚಾತ್ಯದೇಶಗಳನ್ನು ಅಗಸ್ಟಸ್ ಸೀಸರ್ ಹಂಚಿಕೊಂಡರು. ಆದರೆ ಸೀಸರನಿಗೆ ಆಂಟೊನಿಯ ತಮ್ಮನೇ ವಿರುದ್ಧನಾಗಿ ರೋಮಿನಲ್ಲಿ ಅತೃಪ್ತರಾದ ಸಿಪಾಯಿಗಳನ್ನು ಎತ್ತಿಕಟ್ಟಿದನು ಈ ಲೂಸಿಯಸ್ಆಂಟೊನಿಯನ್ನು ಕ್ರಿ.ಪೂ. ೪೦ ರಲ್ಲಿ ಪೆರುಸಿಯ ಕದನದಲ್ಲಿ ಅಗಸ್ಟಸ್ ಸೋಲಿಸಿದನು. ಆದರೆ ಲೂಸಿಯಸ್

ಆಂಟೊನಿ ತಪ್ಪಿಸಿಕೊಂಡು ಹೋದನು. ಮಾರ್ಕ್ ಆಂಟೊನಿ ಮತ್ತು ಅಗಸ್ಟಸ್ ಪುನಃ ಒಪ್ಪಂದಮಾಡಿಕೊಂಡರು ಮಾರ್ಕ್ ಆಂಟೊನಿ ಏಷ್ಯಾದೇಶಗಳನ್ನು ಸರಿಯಾಗಿ ನೋಡಿಕೊಳ್ಳದೆ ಕ್ಲಿಯೋಪಾಟ್ರ ಮೋಹಕ್ಕೆ ಸಿಕ್ಕಿ ಅಲೆಕ್ಸಾಂಡ್ರಿಯದಲ್ಲೇ ಇರುತ್ತಿದ್ದನು. ಪಾರ್ಥಿಯನ್ನರು ಸಿರಿಯದೇಶದಮೇಲೆ ದಾಳಿಮಾಡಿದರು. ಅಗಸ್ಟಸ್ ಸೀಸರನು ಆಂಟೊನಿಯೊಡನೆ ಪುನಃ ಬ್ರುಂಡಸಿಯಂ (ಬ್ರಿಂಡಿಸಿ) ಬಳಿಯಲ್ಲಿ ಒಪ್ಪಂದಮಾಡಿಕೊಂಡು ಏಡ್ರಿಯಾಟಿಕ್ ಸಮುದ್ರಕ್ಕೆ ಪೂರ್ವದಲ್ಲಿರುವ ದೇಶಗಳೆಲ್ಲ ಆಂಟೊನಿಯದೆಂದು ಪಶ್ಚಿಮಭಾಗಗಳೆಲ್ಲ ಸೀಸರನದೆಂದು ತೀರ್ಮಾನಿಸಿದರು ಈ ಸೌಹಾರ್ದಸೂಚಕವಾಗಿ ಆಂಟೊನಿ ಸೀಸರನ ಸಹೋದರಿ ಆಕ್ಟೇವಿಯ ಎಂಬುವಳನ್ನು ಮದುವೆಯಾದನು.

ಪಶ್ಚಿಮದಲ್ಲಿ ಅಹೆನೊಬಾರ್ಬಸ್ ಮತ್ತು ಪಾಂಪೆಯ ಮಗ ಸೆಕ್ಸ್‌ಟಸ್ ನೌಕಾಬಲವನ್ನು ಹೊಂದಿ ಸೀಸರನ್ನು ಎದುರಿಸಿದರು. ಆಂಟೊನಿ ಮತ್ತು ಸೀಸರ್ ಕ್ರಿ ಪೂ. ೩೯ರಲ್ಲಿ ಮೈಸಿನಂಬಳಿ ಸೆಕ್ಸ್ಟಸ್ನೊಡನೆ ಒಪ್ಪಂದಮಾಡಿಕೊಂಡು ಅವನಿಗೆ ಸಾರ್ಡಿನಿಯ, ಕಾರ್ಸಿಕ, ಸಿಸಿಲಿ ಮತ್ತು ದಕ್ಷಿಣ ಗ್ರೀಸ್ ಬಿಟ್ಟುಕೊಡಬೇಕಾಯಿತು ಕ್ರಿ ಪೂ. ೩೮–೩೭ ರಲ್ಲಿ ಸೀಸರನು ಇಟಲಿಯಲ್ಲಿ ತನ್ನ ಬಲವನ್ನು ಹೆಚ್ಚಿಸುತ್ತ ಬಂದನು. ಸೆಕ್ಸ್ಟಸನು ಮೈಸಿನಂ ಒಪ್ಪಂದವನ್ನು ಸೀಸರನು ಮುರಿದನೆಂದು ಇಟಲಿಗೆ ಮುತ್ತಿಗೆಹಾಕಿ ಈಜಿಪ್ಟ್ ಮುಂತಾದ ದೇಶಗಳಿಂದ ಬರುತ್ತಿದ್ದ ಧಾನ್ಯಸರಬರಾಜಿಗೆ ಅಡ್ಡಿಹಾಕಿದನು. ರೋಮಿನಲ್ಲಿ ಜನರು ತಿಂಡಿಯಿಲ್ಲದೆ ಸಾಯುವಸ್ಥಿತಿ ಬಂದಿತು. ಕೊನೆಗೆ ಕ್ರಿ ಪೂ. ೩೬ ರಲ್ಲಿ ಅಗಸ್ಟಸ್ ಸೀಸರನು ಅವನನ್ನು ಸೋಲಿಸಲು ಏಷ್ಯಕ್ಕೆ ಓಡಿಹೋದನು. ಅಲ್ಲಿ ಆಂಟೊನಿ ಅವನನ್ನು ಹಿಡಿದು ಕೊಲ್ಲಿಸಿದನು. ಅಗಸಸ್ಟಿಗೆ ಆಪ್ತನಾದ ಆಗ್ರಿಪ ಗಾಲನ್ನು ಹತೋಟಿಗೆ ತಂದನು. ಅಗಸ್ಟಸ್ಸನೇ ಇಲ್ಲಿರಿಯವನ್ನು ಗೆದ್ದುದರಿಂದ ರೋಮ್ ಉಳಿದುಕೊಂಡಿತು. ತ್ರಿಮೂರ್ತಿಗಳಲ್ಲಿ ಮೂರನೆಯವನಾದ ಲೆಪಿಡಸ್ ಸಿಸಿಲಿಯನ್ನು ವಶಮಾಡಿ

ಕೊಳ್ಳಲು ಯತ್ನಿಸಿದನೆಂಬ ಆಪಾದನೆಯಮೇಲೆ ಅಧಿಕಾರ ಕಳೆದು ಕೊಳ್ಳಬೇಕಾಯಿತು. ಸೆನೇಟಿನವರು "ಅಗಸ್ಟಸ್ ಸೀಸರ್" ಎಂಬ ರಾಜಗೌರವಗಳನ್ನು ಆಕ್ಟೇವಿಯಸ್ಸಿಗೆ ಕೊಟ್ಟರು.

ಕ್ರಿ.ಪೂ ೩೮-೩೬ ರಲ್ಲಿ ಆಂಟೋನಿ ಸಿರಿಯದಿಂದ ಪಾರ್ಥಿಯನ್ನ ರನ್ನು ಓಡಿಸಿ, ಸೈಲೀಷಿಯಾ ಮತ್ತು ಪಾಲೆಸ್ಟೈನನ್ನು ವಶಮಾಡಿ ಕೊಂಡು ಆರ್ಮೀನಿಯಮೇಲೆ ದಾಳಿಮಾಡಿದನು. ಆದರೆ ಪುನಃ ಕ್ಲಿಯೋಪಾಟ್ರಳ ಸೌಂದರ್ಯಕ್ಕೆ ಮನಸೋತು ಸೋಮಾರಿ ಸುಖ ಲಾಲಸನಾಗಿ ಅಗಸ್ಟಸ್ಸನ ಸಹೋದರಿ ತನ್ನ ಹೆಂಡತಿಯಾದ ಆಕ್ಟೇವಿ ಯಳನ್ನು ಅವಮಾನನೆಗೆ ಕಳುಹಿಸಿಬಿಟ್ಟನು. ಇದರಿಂದ ವೈಮನಸ್ಯವು ಬೆಳೆಯಲಾರಂಭಿಸಿತು ಕ್ರಿ ಪೂ ೩೭ ರಿಂದ ೩೩ ರ ವರೆಗೆ ತ್ರಿಮೂ ರ್ತ್ಯಧಿಕಾರವು ಪುನಃ ಮುಂದುವರಿಸಲ್ಪಟ್ಟಿತ್ತು. ಆದರೆ ಲೆಪಿಡಸ್ಸನನ್ನು ಅಧಿಕಾರರಹಿತನಾಗಿ ಮಾಡಿಬಿಟ್ಟಿದ್ದರು. ಆಂಟೋನಿ ಕ್ಲಿಯೋಪಾಟ್ರಳ ಮಕ್ಕಳಿಗೆ ಕೆಲವು ದೇಶಗಳನ್ನು ಹಂಚಿದನು. ರೋಮಿನ ಸೆನೇಟ್ ಆಂಟೋನಿಯ ಕಾರ್ಯ (ಆಕ್ಟ್) ಗಳನ್ನು ಅನುಮೋದಿಸಲು ತಿರಸ್ಕ ರಿಸಿತು ಆಂಟೋನಿಯು ಸೀಸರ್ ಅನ್ಯಾಯವಾಗಿ ಲೆಪಿಡಸ್ಸಿನ ಅಧಿಕಾರ ಕಿತ್ತುಕೊಂಡನೆಂದು ಆಪಾದಿಸಿ ಆಫ್ರಿಕದಲ್ಲಿ ಸಿಪಾಯಿಗಳನ್ನು ಜಮಾ ಯಿಸಲು ಆರಂಭಿಸಿದನು ಇದಕ್ಕೆ ಪ್ರತಿಯಾಗಿ ಅಗಸ್ಟಸ್ ಆಂಟೋನಿ ದೇಶದ್ರೋಹಿ ಎಂದೂ ಕ್ಲಿಯೋಪಾಟ್ರಳ ಗುಲಾಮನೆಂದೂ ಆಪಾದಿ ಸಿದನು. ಕ್ರಿ ಪೂ. ೩೨ ರಲ್ಲಿ ಈ ಜಗಳ ಬಹಿರಂಗವಾಯಿತು. ಆಂಟೋನಿ ಇಟಲಿಯನ್ನು ಗೆಲ್ಲಲು ಸೈನ್ಯ ಸೇರಿಸಿದನು. ಅಗಸ್ಟಸ್ ಆಂಟೋನಿ ಯನ್ನು ಜನತಾದ್ರೋಹಿ ಎಂದು ಘೋಷಿಸಿ ನೆಪಮಾತ್ರಕ್ಕೆ ಕ್ಲಿಯೋ ಪಾಟ್ರಳಮೇಲೆ ಯುದ್ಧವನ್ನಾರಂಭಿಸಿದನು. ಆಂಟೋನಿಗೆ ಈಜಿಪ್ಟ್ ಮತ್ತು ಪೂರ್ವದೇಶಗಳ ಬೆಂಬಲವಿದ್ದರೂ ಆಂಟೋನಿ ಜಾಗರೂಕತೆ ತೋರಿಸಲಿಲ್ಲ. ಕ್ರಿ.ಪೂ. ೩೧ ರಲ್ಲಿ "ಆಕ್ಟಿಯಂ" ನೌಕಾಕದನದಲ್ಲಿ ಆಂಟೋನಿಗೆ ಮೊದಲು ಜಯವಾದರೂ ವಿನಾ ಕಾರಣ ಹೆದರಿ ಅವನೂ ಕ್ಲಿಯೋಪಾಟ್ರಳೂ ಈಜಿಪ್ಟಿಗೆ ಓಡಿಹೋದರು. ಆಂಟೋನಿಯ ಭೂಸೈನ್ಯ

ಶರಣಾಗತವಾಯಿತು. ಪುನಃ ಆಂಟೊನಿ ಅಗಸ್ಟಸ್ಸಿನ ಸೈನ್ಯವನ್ನು ಕ್ರಿ.ಪೂ ೩೦ ರಲ್ಲಿ ಪೆಲುಸಿಯುಂ ಬಳಿ ಎದುರಿಸಿ ಸೋತನು. ಆದ್ದರಿಂದ ತನ್ನ ಕತ್ತಿಯಮೇಲೆ ಬಿದ್ದು ಆತ್ಮಹತ್ಯೆ ಮಾಡಿಕೊಂಡನು. ಇಷ್ಟರಲ್ಲಿ ಅಗಸ್ಟಸ್ ಈಜಿಪ್ಟಿನಲ್ಲಿ ಇಳಿದನು. ಕ್ಲಿಯೋಪಾಟ್ರ ಅವನಮೇಲೂ ಮೋಹನಾಸ್ತ್ರ ಪ್ರಯೋಗಮಾಡಿದಳು. ವ್ಯರ್ಥವಾಗಲು ಸೆರೆಸಿಕ್ಕುವದಕ್ಕಿಂತ ಮರಣವೇ ಲೇಸೆಂದು ಒಂದು ವಿಷಸರ್ಪವನ್ನು ತನ್ನ ಎದೆಗೆ ಅಪ್ಪಿ ಕಚ್ಚಿಸಿ ಪ್ರಾಣವನ್ನು ತ್ಯಜಿಸಿದಳು.

---

## ಅಧ್ಯಾಯ ೨೦

### ಅಗಸ್ಟಸ್ ಸೀಸರ್ (ಕ್ರಿ.ಪೂ. ೩೦ ಕ್ರಿ.ಶ. ೧೪)

**ಪ್ರಿನ್ಸಿಪೇಟ್**—ಕ್ರಿ.ಪೂ. ೩೦ ರಲ್ಲಿ ಅಲೆಕ್ಸಾಂಡ್ರಿಯ ವಶಮಾಡಿಕೊಂಡು ಅಗಸ್ಟಸ್, ರೋಮನ್ ಪ್ರಜಾಪ್ರಭುತ್ವ ಮತ್ತು ಸಾಮ್ರಾಜ್ಯದ ರಕ್ಷಕನೆಂಬ ಕೀರ್ತಿಪಡೆದು ಇಟಲಿಗೆ ಹಿಂತಿರುಗಿದನು. ಜಮೀನುಗಳನ್ನು ಕ್ರಯಕ್ಕೆ ಕೊಂಡು ತನ್ನ ಸಿಪಾಯಿಗಳಿಗೆ ಹಂಚಿ ಸೈನಿಕರ ಮೆಚ್ಚುಗೆ ಪಡೆದನು. ಆಂಟೊನಿಯ ಕಡೆಯವರನ್ನೂ ಗೌರವಿಸಿ ಸ್ನೇಹ ಮಾಡಿಕೊಂಡನು. ತೆರಿಗೆಗಳ ಬಾಕಿ ವಜಾಮಾಡಿ ಪೈಬಿಯನ್ನರಿಗೆ ಹಣವನ್ನು ದಾನಮಾಡಿ ಅವರ ಪ್ರೀತಿಯನ್ನು ಸಂಪಾದಿಸಿದನು. ಸ್ವಾಭಾವಿಕವಾಗಿ ಅವನು ಮಧ್ಯಮ ವರ್ಗದವರ ಪರವಾಗಿದ್ದುದರಿಂದ ಏಕ ವ್ಯಕ್ತಿಯ ಅಧಿಕಾರವನ್ನೂ ಪ್ರಜಾಪ್ರಭುತ್ವವನ್ನೂ ಸಮನ್ವಯ ಮಾಡಿ, ಇಟಲಿಯನ್ನು ಏಕೀಕರಣ ಮಾಡುವುದೇ ಅವನ ಧ್ಯೇಯವಾದುದರಿಂದಲೂ, ಬಹಳ ಜಾಗರೂಕನೂ ಆತ್ಮಸಂಯಮನವುಳ್ಳವನೂ ಆದ್ದರಿಂದಲೂ ಎಲ್ಲರೂ ಅವನಲ್ಲಿ ವಿಶ್ವಾಸವಿಟ್ಟರು.

## ರಾಜಕೀಯ ವ್ಯವಸ್ಥೆ (ಕ್ರಿ.ಪೂ. ೨೭)

ಸೆನೇಟಿನಲ್ಲಿ ಅನರ್ಹರಾದವರನ್ನು ತೆಗೆದುಹಾಕಿ ದೇವಾಲಯಗಳ ಪುನರುದ್ಧಾರ ಮಾಡಿದನು. ತ್ರಿಮೂರ್ತ್ಯಧಿಕಾರಕ್ರಮ ನ್ಯಾಯವಲ್ಲವೆಂದು ಅದನ್ನು ರದ್ದುಮಾಡಿ ಕ್ರಿ ಪೂ. ೨೭ ಜನವರಿ ೧ನೇ ತಾರೀಖು ತನ್ನ ವಿಶೇಷಾಧಿಕಾರಗಳನ್ನು ಹಿಂತಿರುಗಿ ಕೊಟ್ಟನು. ಇದಕ್ಕೆ ಪ್ರತಿಯಾಗಿ ಸೆನೇಟ್ ಅವನಿಗೆ ೧೦ ವರ್ಷ ಸರ್ವಾಧಿಕಾರ (ಇಂಪಿರಿಯಂ), ಸಂಪೂರ್ಣ ಸೈನ್ಯಾಧಿಕಾರ, ಹೊಸ ಸೈನ್ಯವನ್ನು ಜಮಾಯಿಸುವ ಅಧಿಕಾರ, ಕೌಲು ಕರಾರು ಮಾಡುವ ಹಕ್ಕುಗಳನ್ನು ಕೊಟ್ಟಿತು. ವಿದೇಶ ವ್ಯವಹಾರಗಳಲ್ಲಿ ಅವನು ಕಾನ್ಸಲ್ ಮತ್ತು ರೋಮಿನಲ್ಲಿ ಅತ್ಯುತ್ತಮ ನ್ಯಾಯಾಧೀಶ. "ಅಗಸ್ಟಸ್" ಎಂಬ ಗೌರವ ಸೂಚಕವಾದ ಬಿರುದು ಅವನಿಗೆ ಕೊಡಲಾಯಿತು ಪ್ರಜಾಪ್ರಭುತ್ವವನ್ನು ಅಧಿಕಾರಯುಕ್ತವಾಗಿ ಕ್ರಿ.ಪೂ ೨೭ ಜನವರಿ ೧೩ ನೇ ತಾರೀಖಿನಲ್ಲಿ ಪುನಃ ಸ್ಥಾಪಿಸಿದನು. ಅವನ ನಾಣ್ಯಗಳಮೇಲೆ "ರೋಮನ್ ಜನರ ಸ್ವಾತಂತ್ರ್ಯ ರಕ್ಷಕ"ನೆಂದು ಹಾಕಿಸಿಕೊಂಡನು. ಆದರೆ ವಾಸ್ತವವಾಗಿ ಸೆನೇಟ್, ಪ್ರಜಾಸಭೆ ಮತ್ತು ಚುನಾಯಿತ ಅಧಿಕಾರಿಗಳು ಇದ್ದರೂ ತಾನೇ ಪ್ರಪಂಚಕ್ಕೆಲ್ಲ ಅಧಿಕಾರಿ ಎಂದರೆ "ನಾಗರಿಕರಲ್ಲಿ ಪ್ರಥಮ" (ಪ್ರಿನ್ಸೆಪ್ಸ್ ಸಿವಿಟಾಟಿಸ್); ರಾಜ ಅಥವಾ ಡಿಕ್ಟೇಕ್ಟರ್ ಅಥವಾ ತ್ರಿಮೂರ್ತ್ಯಧಿಕಾರಿ (ಟ್ರಿಯುಂವೀರ್) ಅಲ್ಲ. ಆದ್ದರಿಂದ ಅವನ ಆಳ್ವಿಕೆಗೆ "ಪ್ರಿನ್ಸಿಪೇಟ್" ಎಂದು ಹೆಸರಾಯಿತು. ಆದರೂ ಅವನ ಅಧಿಕಾರಕ್ಕೆ ಮೇರೆ ಇರಲಿಲ್ಲ. ಕ್ರಿ.ಪೂ. ೨೩ರಲ್ಲಿ ಕಾನ್ಸಲ್ ಪದವಿಯನ್ನು ಬಿಟ್ಟುಕೊಟ್ಟಮೇಲೆ ನ್ಯಾಯವಾಗಿ ರೋಮ್ ನಗರದಲ್ಲಿ ಅವನಿಗೆ ಏನೂ ಅಧಿಕಾರವಿಲ್ಲ. ಇತರ ನ್ಯಾಯಾಧೀಶರಿಗಿಂತ ಗೌರವಾರ್ಹನೂ ಅಲ್ಲ ಆದರೂ ಅನೇಕ ಹೊಸ ಕಾನೂನುಗಳು ವಿಶೇಷಾಧಿಕಾರ ಕೊಟ್ಟವು ರೋಮಿನಲ್ಲೆ "ಇಂಪೀರಿಯಂ" ಹೊಂದಿರಬಹುದು. ಸೆನೇಟ್ ಸಮಾವೇಶ ಮಾಡಬಹುದು. ಚುನಾವಣೆಗಳನ್ನು ನಡೆಸಬಹುದು ವಿಶೇಷ ಕಾನೂನುಗಳನ್ನು ಜಾರಿಗೆ ತರಬಹುದು. ಅವನ ದರ್ಜೆಯು

ಕಾನ್ಸಲ್ಗಳ ಮಟ್ಟಕ್ಕೆ ಏರಿಸಲ್ಪಟ್ಟಿತು. ರೋಮ್ ನಗರವನ್ನು ಪ್ರಾಂತಾಧಿಕಾರಿ (ಪ್ರೋಕಾನ್ಸಲ್) ಆಳುವುದಕ್ಕೆ ಅಧಿಕಾರವಿಲ್ಲದ್ದರಿಂದ ಅವನಿಗೆ "ಟ್ರಿಬ್ಯೂನಿಶಿಯಂ ಪೊಟೆಸ್ಟಾಸ್" ಎಂಬ ಹೊಸ ಅಧಿಕಾರವನ್ನು ನಿರ್ಮಾಣಮಾಡಿ ಅನನ್ಯ ಸಾಮಾನ್ಯವಾದ ಗೌರವಗಳನ್ನು ಸಲ್ಲಿಸಲಾಯಿತು.

ಬಾಹ್ಯರೂಪದಲ್ಲಿ "ಪ್ರಿನ್ಸಿಪೇಟ್" ಪ್ರಜಾಪ್ರಭುತ್ವ ತತ್ತ್ವಕ್ಕೆ ವಿರುದ್ಧವಾಗಿರಲಿಲ್ಲ. ಪ್ರತಿನಿಧಿ ಸಭೆಗಳು ಒಬ್ಬ ವ್ಯಕ್ತಿಗೆ ತಾತ್ಕಾಲಿಕವಾಗಿ ಅಧಿಕಾರ ಕೊಡುತ್ತಿದ್ದವು ನ್ಯಾಯವಾಗಿ ಇಂತಹ ಅಧಿಕಾರ ಅವನ ಜೀವನದೊಡನೆ ಸಮಾಪ್ತಿ ಹೊಂದುವುದು. ಪುನಃ ಮತ್ತೊಬ್ಬನಿಗೆ ಸಭೆಗಳು ಹೊಸ ಕಾನೂನು ಮಾಡಿ ಅಧಿಕಾರ ಕೊಡಬೇಕಾಗಿದ್ದಿತು. ಆದರೆ ಈ ಹದ್ದು ವ್ಯವಹಾರಕ್ಕೆ ತರಲು ಅಡಚಣೆಗಳಿದ್ದವು ೧. ಸರ್ಕಾರದ ಅಧಿಕಾರ ಚಕ್ರಾಧಿಪತ್ಯದ ಮೇಲೆಲ್ಲ ವಿಸ್ತರಿಸಿದ ಹಾಗೆ ಮುಖ್ಯ ವಿಷಯಗಳಲ್ಲಿ ಅವನ ಕೈವಾಡ ಹೆಚ್ಚಾಯಿತು. ೨ ಅವನಿಗೆ ಕಾನ್ಸಲ್‌ಗಳು ಹೊರತು ಇತರ ಎಲ್ಲ ನ್ಯಾಯಾಧೀಶರ ಮೇಲೂ ಮೇಲ್ವಿಚಾರಣೆ (ಮೇಜಸ್ ಇಂಪೀರಿಯಂ) ಹಕ್ಕು ಇದ್ದಿತು ಆದ್ದರಿಂದ ನ್ಯಾಯದೃಷ್ಟಿಯಿಂದ ರೋಮಿನ ಪ್ರೇಟಾರರು. ಪ್ರಾಂತಾಧಿಕಾರಿಗಳು ಅವನ ಸಮಾನ ಸ್ಕಂಧರಾಗಿದ್ದರೂ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡರು ಅಗಸ್ಟಸ್ ಸೀಸರನು ಪ್ರಜಾಪ್ರಭುತ್ವ ಬಿರುದುಗಳನ್ನು ಹೊಂದಿದ ರಾಜನು. ಆಜೀವ್ ಟ್ರಿಬ್ಯೂನ್, ಪ್ರತಿವರ್ಷ ಕಾನ್ಸಲ್ ಕ್ರಿಮಿನಲ್ ವ್ಯವಹಾರಗಳಲ್ಲಿ ಅಧಿಕಮತ (ಕ್ಯಾಸ್ಟಿಂಗ್ ಓಟ್) ಕೊಡಬಹುದು. ಸೆನೇಟ್ ಮುಖಂಡನು (ಪಿನ್‌ಸೆಪ್ಸ್ ಸೆನೇಟಸ್). ಸೈನ್ಯಗಳಿಗೆಲ್ಲ ಶಾಶ್ವತಾಧಿಕಾರಿ. ಪ್ರಾಂತಾಡಳಿತಕ್ಕೆ ಸರ್ವಾಧಿಕಾರಿ. ತನ್ನ ಪ್ರೇಟಾರರನ್ನೇ ನೇಮಿಸಬಹುದು (ಇಂಪೀರಿಯಂ ಕಾನ್ಸುಲರೆ). ಕಪ್ಪ ಕಾಣಿಕೆಗಳನ್ನು ವಸೂಲು ಮಾಡಲು ತನ್ನ ಜನರನ್ನೇ "ಪ್ರೊಕ್ಯುರೇಟರ್" ಗಳಾಗಿ ನೇಮಿಸಬಹುದು. ಎಲ್ಲ ಇಲಾಖೆಗಳಿಗೂ ಮುಖ್ಯನು (ಪ್ರಿನ್ಸೆಪ್ಸ್).


## ಚಕ್ರಾಧಿಪತ್ಯ

ರೋಮನ್ ಚಕ್ರಾಧಿಪತ್ಯ ಏಷ್ಯಾ, ಯೂರೋಪ್, ಆಫ್ರಿಕ ಮೂರು ಖಂಡಗಳಲ್ಲಿಯೂ ವ್ಯಾಪಿಸಿದ್ದಿತು ಆರು ಮೂಲ ಪ್ರಾಂತ ಗಳಿದ್ದವು—ಸ್ಪೈನ್, ಗಾಲ್, ಸಿರಿಯ, ಸೈಲೀಷಿಯ, ಸೈಪ್ರಸ್ ಮತ್ತು ಈಜಿಪ್ಟ್ ಹೊಸದಾಗಿ ಸೇರಿಸಿದ ಪ್ರಾಂತಗಳು–ಗಲಾಟಿಯ, ವೈಸಿಯ, ಸಮುದ್ರತೀರದ ಆಲ್ಪ್ಸ್ (ಮ್ಯಾರಿಟೈನ್ ಆಲ್ಪ್ಸ್), ಮಧ್ಯಮ ಮತ್ತು ಪಶ್ಚಿಮ ಆಲ್ಪ್ಸ್. ಈ ಪ್ರಾಂತಗಳಿಗೆ ತನ್ನ ಅನುಮತಿಯಿಲ್ಲದೆ ಯಾವ ಸೆನೇಟರನೂ ಹೋಗಕೂಡದು. ಕಂದಾಯಗಳನ್ನು ತನ್ನ ಅಧಿಕಾರಿಗಳೇ ವಸೂಲಿ ಮಾಡುತ್ತಿದ್ದರು ಯೂರೋಪಿನಲ್ಲಿ ರೈನ್ ನದಿ ಮೇರೆ ಯಾಗಿದ್ದಿತು ಚಕ್ರಾಧಿಪತ್ಯದ ಮೇರೆಗಳನ್ನು ಸ್ಥಿಮಿತಮಾಡಿ, ಅವುಗಳ ರಕ್ಷಣೆಗಾಗಿ ಸೇನೆಗಳನ್ನು ಇಟ್ಟು ವ್ಯವಸ್ಥೆ ಮಾಡಿದನು **ಪಶ್ಚಿಮದಲ್ಲಿ** ಬ್ರಿಟನ್ ರೋಮನ್ನರಿಗೆ ಸೇರಿರಲಿಲ್ಲ. **ದಕ್ಷಿಣದಲ್ಲಿ** ಈಜಿಪ್ಟ್ ಮತ್ತು ನ್ಯೂಮಿಡಿಯ ಕ್ರಿ ಪೂ. ೩೦–೨೫ ರಲ್ಲಿ ಸೇರಿಸಲ್ಪಟ್ಟವು. ತೀರಗಳು ರೋಮನ್ ಅಧಿಕಾರದಲ್ಲಿದ್ದವು ಅಥವಾ ಮಾರಿಟೇನಿಯದಂತೆ ರಕ್ಷಣೆಗೆ ಒಳಗಾಗಿದ್ದವು ಇಥಿಯೋಪಿಯ ಕ್ರಿ ಪೂ. ೨೨ ರಲ್ಲಿ ವಶವಾಯಿತು. ಮರುಭೂಮಿಯ ಜನರೊಡನೆ ಆಗಾಗ ಯುದ್ಧಗಳಾಗುತ್ತಿದ್ದವು **ಪೂರ್ವ ದಲ್ಲಿ** ಕೆಲವು ಯುದ್ಧಗಳು ನಡೆದುವು. ರೋಮನ್ ರಾಜ್ಯವು ಪಾರ್ಥಿಯ ಸರಹದ್ದನ್ನು ಮುಟ್ಟಿದ್ದಿತು. ಪಾರ್ಥಿಯ ರಾಜನು ರೋಮನರನ್ನು ಪ್ರತಿಭಟಿಸಿ ಕ್ರಿ ಪೂ. ೪೦ ರಲ್ಲಿ ಏಷ್ಯಾ ಮೈನರ್ ಮೇಲೆ ದಾಳಿಮಾಡಿ ಕ್ರಿ ಪೂ ೩೬ ರಲ್ಲಿ ಆಂಟೊನಿಯನ್ನು ಸೋಲಿಸಿದ್ದನು. ಆಗಸ್ಟಸ್ ಕ್ರಿ. ಪೂ. ೨೪ ರಲ್ಲಿ ಅರೇಬಿಯ ಗೆದ್ದು ಕ್ರಿ. ಪೂ. ೨೦ ರಲ್ಲಿ ಪಾರ್ಥಿಯ ರಾಜ ಫ್ರಾಟೀಸನೊಡನೆ ಒಪ್ಪಂದಮಾಡಿಕೊಂಡನು. ಏಷ್ಯಾ ಮೈನರಿ ನಲ್ಲಿ ರೋಮನ್ ಪ್ರಾಂತಗಳಾದ ಬೈಥಿನಿಯ, ಗಲಾಟಿಯ, ಸೈಲೀಷಿಯ ಮತ್ತು ಯೂಫ್ರಟೀಸ್ ನದಿ ಮಧ್ಯೆ ಮೂರು ನದೀ ಮಧ್ಯರಾಷ್ಟ್ರಗಳು (ಪಾಂಟಸ್, ಕಾಪಡೋಷಿಯ, ಕೊಮ್ಯಾಜಿನ್ಸ್) ದೇಶೀಯ ರಾಜ

ಆಳಿಕೆಯಲ್ಲಿದ್ದವು ಯೂಫ್ರಟಿಸಿಗೆ ಉತ್ತರದಲ್ಲಿ ಕ್ರಿ ಪೂ. ೨೦ ರಿಂದ ೪೦ ರ ವರೆಗೆ ದಂಡಯಾತ್ರೆಗಳನ್ನು ಮಾಡಿ ರೋಮನ್ನರ ಅಧಿಕಾರವು ಆರ್ಮೇನಿಯದಲ್ಲಿ ವ್ಯಾಪಿಸಿತು. ಈ ಸರಹದ್ದನ್ನು ರಕ್ಷಿಸಲು ಕ್ರಿ ಪೂ. ೨೩–೧೩ ರ ವರೆಗೆ ಅಗ್ರಿಪ್ಪ ನೇಮಿತನಾಗಿದ್ದನು **ಉತ್ತರದಲ್ಲಿ** ರೋಮನ್ನರು ಹೊಸ ರಾಷ್ಟ್ರಗಳನ್ನು ಸೇರಿಸಿಕೊಂಡು ರ್ಹೈನ್ ಮತ್ತು ಮತ್ತು ಡಾನ್ಯೂಬಿನಿಂದ ಜರ್ಮನ್ ಸಮುದ್ರ ಮತ್ತು ಕಪ್ಪುಸಮುದ್ರದ ವರೆಗೆ ವ್ಯಾಪಿಸಿದರು ಜಿಲ್ಲಿಕ (ಕ್ರಿ ಪೂ ೧೫), ನಾರಿಕಂ (ಕ್ರಿ.ಪೂ. ೧೫), ಪಾನೋನಿಯ (ಕ್ರಿ ಪೂ. ೧೦), (ಮೈಸಿಯ ಕ್ರಿ.ಶ. ೬) ಸ್ಥಾಪಿತ ವಾದವು. ಅಗಸ್ಟಸ್ಸನ ಮಲಮಕ್ಕಳಾದ ಡ್ರೂಸಸ್ ಮತ್ತು ಟೈಬೀರಿಯಸ್ ಕ್ರಿ ಪೂ. ೧೩ ರಿಂದ ಕ್ರಿ.ಶ ೬ ರ ವರೆಗೆ ಯುದ್ಧಯಾತ್ರೆ ಮಾಡಿ ಎಲ್ಬ್‌ನದಿವರೆಗೂ ರೋಮನ್ ಸಾಮ್ರಾಜ್ಯವನ್ನು ವಿಸ್ತರಿಸಿದರು. ಕ್ರಿ ಶ ೯ ರಲ್ಲಿ ರ್ಹೈನ್‌ನದಿಗೆ ಆಚೆ ರೋಮನ್ ಪ್ರಾಂತಾಧಿಕಾರವು ಸ್ಥಾಪಿತವಾಯಿತು. ಆದರೆ ಜರ್ಮನ್ನರು ಒಟ್ಟುಗೂಡಿ ಕ್ರಿ.ಶ ೯ ರಲ್ಲಿ ವಾರಸ್‌ನನ್ನು ಸೋಲಿಸಿದುದರಿಂದ ರೋಮನ್ನರು ರ್ಹೈನ್‌ನದಿಯನ್ನೇ ಸರಹದ್ದಾಗಿ ಇಟ್ಟುಕೊಳ್ಳಬೇಕಾಯಿತು. ರ್ಹೈನ್‌ದೇಶದ ಅಧಿಕಾರ ವನ್ನು ಮೂರು ಗಾಲ್ ಪ್ರಾಂತಗಳ ಮತ್ತು ಡಾನ್ಯೂಬ್ ಪ್ರಾಂತಗಳ ಅಧಿಕಾರವನ್ನು ಒಬ್ಬನಿಗೇ ಒಪ್ಪಿಸಲಾಯಿತು. ಅನಂತರ ಅಗಸ್ಟಸ್ ಹೊಸ ರಾಜ್ಯಗಳನ್ನು ಗೆಲ್ಲುವ ಹವ್ಯಾಸಕ್ಕೆ ಹೋಗಲಿಲ್ಲ. ತಾನು ಸ್ಥಾಪಿಸಿದ ಸಾಮ್ರಾಜ್ಯದ ಮೇರೆಗಳನ್ನು ಮೀರಕೂಡದೆಂದು ಆಜ್ಞೆ ಮಾಡಿದನು. ಮೇರೆಗಳನ್ನು ರಕ್ಷಿಸಿಕೊಂಡುಬಂದು ಒಳಾಡಳಿತವನ್ನು ಭದ್ರಪಡಿಸಿ ತನ್ನ ಪ್ರಜೆಗಳ ಸುಖಸಂಪತ್ತನ್ನು ಹೆಚ್ಚಿಸುವುದೇ ಧ್ಯೇಯ ವಾಗಿದ್ದಿತು.

## ಪ್ರಾಂತಾಧಿಕಾರಪದ್ಧತಿ

ಕ್ರಿ.ಪೂ ೨೭–೧೯ ರಲ್ಲಿ ಅಗಸ್ಟಸ್ ಪ್ರಾಂತಗಳ ಸರ್ಕಾರವನ್ನು ಸ್ಥಿಮಿತವಮಾಡಿದನು ಪ್ರಾಂತಗಳಲ್ಲಿ ಸ್ವಂತ ಮತ್ತು ಸಾರ್ವಜನಿಕ ಎಂಬೆರಡು ವರ್ಗಗಳಿದ್ದವು.


ಜರ್ಮಾನಿಯ
ಸಾರ್ಮ್ಯೇಷಿಯ
ಬೆಲ್ಜಿಕ
ಅಗ್ಲುನೆಂಸಿಸ್
ಗಾಲಿಯ
ರೇಟಿಯ
ನಾರಿಕಂ
ಪಾನ್ನೋನಿಯ
ಡೇಸಿಯ
ಕಾಕಸಸ್
ಟರ್ರಕಾನ
ಹಿಸ್ಪೇನಿಯ
ಅಕ್ವಿಟಾನಿಯ
ನಾರ್ಬೋನೆನ್ಸಿಸ್
ಇಟಾಲಿಯ
ಕಪ್ಪುಸಮುದ್ರ
ಪಾಂಟಕ
ಲುಸಿಟಾನಿಯ
ಗಾಡಿಸ್ ಬೇಟಿಕ
ಮಾಸಿಡೋನ್
ಪ್ರಿಜಯ
ಪಾಪ್ಲಗೋನಿಯ
ಕಪಾಡ್ಡೋಶಿಯ
ಲೈಕೋನಿಯ
ಪಾರ್ಥಿಯ
ಮ್ಯೆಸಿಯ
ಅಡಿಯ
ಕೇರಿಯ
ಮೈಗ್ಡೋನಿಯ
ಮಾರಿಟೇನಿಯ
ಸ್ಯುಮಿಡಿಯ
ಸಿಸಿಲಿಯ
ಕ್ರೀಟ
ಸೈಪ್ರಸ್
ಟ್ರಿಪಾಲಿಟಾನ
ಸೈರನಿಕ
ಈಜಿಪ್ಟ್
ಅರೇಬಿಯ

ಸ್ವಂತ ಪ್ರಾಂತಗಳಲ್ಲಿ ಸುಧಾರಣೆಗಳು (೧) ಈಜಿಪ್ಟ್, ಆಫ್ರಿಕ ತೀರ, ಎರಡು ಸ್ಪೈನ್ ಭಾಗಗಳು, ಲ್ಯುಸಿಟಾನಿಯ, ಗಾಲಿನಲ್ಲಿ ಮೂರು—ಆಕ್ವಿಟೇನಿಯ, ಲುಗುಡುನೆನ್ಸಿಸ್. ಬೆಲ್ಜಿಕ, ಸ್ಸಿಲೀಷಿಯ, ಗಲಾಟಿಯ, ಪಾಂಫಿಲಿಯ, ಸಿರಿಯ, ಪನ್ನೋನಿಯ, ನಾರಿಕಂ ಮತ್ತು ರೆಯ್ಷಿಯ ಎಂಬ ಪ್ರಾಂತಗಳು ವಿಭಜಿಸಲ್ಪಟ್ಟವು. (೨) ಈ ಪ್ರಾಂತಗಳೆಲ್ಲ ತನ್ನ ಇಲಾಖೆಗಳಾದವು, ತಾನೇ ಸಂಪೂರ್ಣಾಧಿಕಾರಿ. (೩) ಇಲ್ಲಿನ ಅಧಿಕಾರಿಗಳು—ಕಾನ್ಸಲ್ ಅಥವಾ ಪ್ರೇಟಾರ್ ದರ್ಜೆಯ ಸೆನಟರರನ್ನು ತನ್ನ ಪ್ರತಿನಿಧಿ (ಲೆಗಾಟೈ)ಗಳಾಗಿ, ಅವರ ಕೆಳಗೆ ಪ್ರೊಕ್ಯುರೇಟರ್ ಎಂಬ ತನ್ನ ನಿಯೋಗಿಗಳು, ಸರ್ಕಾರದ ಆಸ್ತಿ ಮತ್ತು ಹಣಕಾಸು ವಿಭಾಗಕ್ಕಾಗಿ ಅಧಿಕಾರಿಗಳು, ಈಜಿಪ್ಟಿನಲ್ಲಿ ಹಿಂದಿನ ರಾಜರ ಸ್ಥಾನದಲ್ಲಿ ತನ್ನ ಪ್ರಿಫೆಕ್ಟರು—ಎಲ್ಲರೂ ತನ್ನಿಂದಲೇ ನೇಮಿತರಾಗುತ್ತಿದ್ದರು. (೪) ಪ್ರತಿಪ್ರಾಂತದಲ್ಲೂ ಅಧಿಕಾರವರ್ಗ (ಸಿವಿಲ್ ಸರ್ವಿಸ್) ಸ್ಥಾಪಿಸಿ ಅವರು ತನಗೆ ಜವಾಬ್ದಾರರಾಗಿ ತಮ್ಮ ಸೈನ್ಯಬಲವನ್ನು ತನ್ನ ಆಜ್ಞೆಯಿಂದಲೇ ಉಪಯೋಗಿಸಬೇಕೆಂದು ನೇಮಿಸಿದನು. ನಿಯೋಗಿಯು (ಲಿಗೇಟ್) ತನ್ನ ಆಜ್ಞೆ ನೆರವೇರಿಸಬೇಕು. ಅವನ ಮೇಲೆ ಬಂದ ಆಪಾದನೆಗಳನ್ನು ಸೀಸರೆನೇ ವಿಚಾರಿಸಬೇಕು. ಲಿಗೇಟಿನ ಆರ್ಥಿಕಾಧಿಕಾರವು ತನ್ನಿಂದ ನೇಮಿತನಾದ ಪ್ರೊಕ್ಯುರೇಟರೆಂಬವನಿಗೆ ಕೊಡಲಾಯಿತು.

ಸಾರ್ವಜನಿಕ ಪ್ರಾಂತಗಳಲ್ಲಿ ಸೀಸರ್ ನೇರವಾಗಿ ಕೈವಾಡ ತೋರಿಸಲು ಅವಕಾಶವಿರಲಿಲ್ಲ. ಆದರೂ ಈ ಪ್ರಾಂತಾಧಿಕಾರಿಗಳು (ಪ್ರೋ ಕಾನ್ಸಲ್) ಒಂದು ವರ್ಷಕ್ಕೆ ಮಾತ್ರ ನೇಮಿತರಾಗುತ್ತಿದ್ದರು. ಆಗಲೂ ಅವರ ಮೇಲೆ ಹತೋಟಿಗಾಗಿ ಕ್ವೆಸ್ಟಾರ್ ಮತ್ತು ಲೆಗೇಟ್ ಇರುತ್ತಿದ್ದರು ಕಾನೂನಿನ ಪ್ರಕಾರ ಈ ಪ್ರಾಂತಾಧಿಕಾರಿಗಳು ಕಾನ್ಸಲ್ ಮತ್ತು ಸೆನೇಟಿಗೆ ಮಾತ್ರ ಜವಾಬ್ದಾರರು ಆದರೆ ಅಗಸ್ಟಸನ ಅಧಿಕಾರವು ವಿಶೇಷವಾಗಿದ್ದುದರಿಂದಲೂ, ಪ್ರಾಂತದ ಸರಹದ್ದುಗಳ ಮೇಲ್ವಿಚಾರಣೆ ತನ್ನ ಕೈಲಿದ್ದುದರಿಂದ ಈ ಪ್ರಾಂತಾಧಿಕಾರಿಗಳು ತಮ್ಮ

ಸೈನ್ಯಾಧಿಕಾರ ಮತ್ತು ವಿದೇಶ ವ್ಯವಹಾರಾಧಿಕಾರಗಳನ್ನು ಕಳೆದು ಕೊಂಡರು. ಇವರ ಆರ್ಥಿಕಾಧಿಕಾರವೂ ಸಂಕುಚಿತವಾಯಿತು ಸೀಸರನಿಗಾಗಿ ಪ್ರತ್ಯೇಕ ಇಟ್ಟ ಹಣವನ್ನು ಸೀಸರನ ಪ್ರೊಕ್ಯೂರೇಟರೇ ವಿನಿಯೋಗಿಸುತ್ತಿದ್ದನು. ಮತ್ತು ಸೀಸರನಿಗೆ ಇತರ ಕಾನ್ಸಲ್ಗಳ ಮೇಲೆ ಪರಮಾಧಿಕಾರ (ಮೇಜಸ್ ಇಂಪೀರಿಯಂ) ಇದ್ದುದರಿಂದ ಅಗಸ್ಟಸ್ಸನೇ ಈ ಸಾರ್ವಜನಿಕ ಪ್ರಾಂತಗಳಲ್ಲಿಯೂ ನಿರಂಕುಶನಾಗಿದ್ದನು

## ಆರ್ಥಿಕ ಸುಧಾರಣೆ

ಸಾಮ್ರಾಜ್ಯಕ್ಕೆ ಭದ್ರವಾದ ಆರ್ಥಿಕ ತಳಹದಿ ಹಾಕಲು ಅಗಸ್ಟಸ್ ಸಮಸ್ತ ಆದಾಯದ ಗಣನೆ ಮಾಡಿಸಿದನು (೧) ಪ್ರತಿ ಪ್ರಾಂತದಲ್ಲಿಯೂ ಇರುವ ಜನಾಂಗಗಳ ತನಿಖೆ ನಡಿಸಿದನು (೨) ಸಾಮ್ರಾಜ್ಯದಲ್ಲೆಲ್ಲ ಜನಗಣನೆ ನಡಿಸಿ ಆದರ ಆಧಾರದ ಮೇಲೆ ಹಿಂದಿನ ಚಿಲ್ಲರೆ ತೆರಿಗೆಗಳನ್ನು ರದ್ದುಮಾಡಿ ಎರಡು ತೆರಿಗೆಗಳನ್ನು ಮಾತ್ರ ವಿಧಿಸಿದನು— ಜಮೀನಿನ ಮೇಲೆ (ಟ್ರಿಬ್ಯೂಟಂಸೊಲೈ) ಮತ್ತು ವ್ಯಕ್ತಿಗಳ ಸ್ವಂತ ಆಸ್ತಿ ಮೇಲೆ (ಟ್ರಿಬ್ಯೂಟಂ ಕ್ಯಾಪಿಟಾಸ್) (೩) ಪ್ರತಿವರ್ಷವೂ ಲೆಖ್ಖಪತ್ರಗಳನ್ನು ಪ್ರಕಟಿಸಿದನು. (೪) ಅಧಿಕಾರಿಗಳಿಗೆ ಕ್ಲುಪ್ತವಾದ ಸಂಬಳಸಾರಿಗೆ ನಿಶ್ಚಯಿಸಿದನು. (೫) ಆರ್ಥಿಕಸ್ಥಿತಿಯನ್ನು ಉನ್ನತಿಗೊಳಿಸಲು ಸಾರ್ವಜನಿಕ ಕಾರ್ಯಗಳನ್ನು ಆರಂಭಿಸಿದನು. (೬) ರೋಮನ್ ನಾಗರೀಕರು ಕೆಲವು ತೆರಿಗೆಗಳನ್ನು ಕೊಡಬೇಕೆಂದು ವಿಧಿಸಿದನು. ಮತ್ತು ಕೈಗಾರಿಕೆ ವ್ಯಾಪಾರಗಳ ಮೇಲೆ ನಿರ್ಬಂಧಗಳನ್ನು ತೆಗೆದುಹಾಕಿದನು

## ಸಾಮಾಜಿಕ ಸುಧಾರಣೆ (ಕ್ರಿ.ಪೂ. ೧೯–೧೪)

ರೋಮನ್ ಜನರಿಗೆ ಹೊಸಯುಗವಾರಂಭವಾಯಿತು ರೋಮನ್ ಸಮಾಜವು ಸಂಸ್ಕರಿಸಲ್ಪಟ್ಟಿತು. (೧) ಪ್ರಾಚೀನ ಸಂಸ್ಥೆಗಳು ಇದ್ದವು. ಆದರೆ ಅವುಗಳ ಅಧಿಕಾರವು ಸಂಕುಚಿತವಾಯಿತು. ಪ್ಲೆಬಿಯನ್ನರು

ನ್ಯಾಯಾಧೀಶರನ್ನು ಚುನಾಯಿಸಿ ಕಾನೂನು ಮಾಡುತ್ತಿದ್ದರು ಆದರೆ ಲಂಚತನವನ್ನು ಹತೋಟಿಯಲ್ಲಿಟ್ಟು ರಾಜಕೀಯ ಸಂಸ್ಥೆಗಳನ್ನು ಅಣಗಿಸಿದನು. ಸೀಸರನು ನೇಮಿಸುದವರನ್ನೇ ಪ್ಲೆಬಿಯನ್ನರು ಚುನಾಯಿಸಬೇಕು. ಅವನು ಅನುಮೋದಿಸಿದ ಕಾನೂನುಗಳನ್ನೇ ಸಭೆಯಲ್ಲಿ ಮಂಡಿಸಬೇಕು. (೨) ಜನರಿಂದ ಪ್ರತಿ ವರ್ಷ ಚುನಾಯಿತರಾದ ಅಧಿಕಾರಿಗಳ ಗೌರವಕ್ಕೆ ಕುಂದಿಲ್ಲದಿದ್ದರೂ ಅವರೆಲ್ಲ ಸೀಸರನಿಗೆ ಅಧೀನರು. ಪ್ರಾಂತಗಳ ಮೇಲಾಗಲೀ ವಿದೇಶ ವ್ಯವಹಾರಗಳಲ್ಲಾಗಲೀ ಅವರಿಗೆ ಪ್ರವೇಶವಿರಲಿಲ್ಲ ತಿನ್ನುವ ಆಹಾರ, ಕುಡಿಯುವ ನೀರು, ನಗರರಕ್ಷಣೆ, ರಸ್ತೆಗಳು, ಸರಹದ್ದು ಕಾಪಾಡುವದು ಎಲ್ಲವೂ ಸೀಸರನ ಕೈಯಲ್ಲಿತ್ತು (೩) ಸೆನೇಟನ್ನು ಸುಧಾರಿಸಿ, ಅವರ ಗೌರವ ಹಕ್ಕುಗಳು ಹಿಂದಿನಂತೆ ಇದ್ದರೂ ನಿಜವಾದ ಅಧಿಕಾರವನ್ನು ತೆಗೆದುಕೊಂಡನು. ಸೆನೇಟ್ ಚುನಾವಣೆಗೆ ತನ್ನ ಅನುಮತಿ ಪಡೆಯಬೇಕು. ಸೆನೇಟ್ ಸದಸ್ಯರ ಪಟ್ಟಿಗಳನ್ನು ಮೂರುಸಲ ಬದಲಾಯಿಸಿದನು ಮತ್ತು ತನಗೆ ವಿರೋಧವಾದವರನ್ನು ವಜಾ ಮಾಡಬಹುದು ಪ್ರಾಚೀನ ಪೇಟ್ರೀಷಿಯನ್ ಮತ್ತು ನೋಬೈಲರಿಗೆ ಬದುಲಾಗಿ ಒಂದು ಹೊಸ ವರ್ಗವು ಸ್ಥಾಪಿತವಾಯಿತು. ನೋಬಲರಲ್ಲಿ ಕ್ವೆಸ್ಟಾರರಿಂದ ಒಂದು ಅಗಲವಾದ ಕೆಂಪು ವಸ್ತ್ರವನ್ನು (ಲಾಟಸ್‌ಕ್ಲಾವಸ್) ಪಡೆದವರೇ ಸೆನೇಟರಾಗಬಹುದು ಸೆನೇಟ್ ಕೇವಲ ಸಲಹಾಸಮಿತಿಯಾಗಿ ಅದರ ವ್ಯವಹಾರಗಳನ್ನು ಸೀಸರನು ತನಗೆ ಇಷ್ಟಬಂದಾಗ ನಿಲ್ಲಿಸಬಹುದು. (೪) ಮತವಿಷಯಗಳಲ್ಲಿ ರೋಮನ್ನರು ಬಹಳ ಉದಾಸೀನರಾಗುತ್ತಿದ್ದರು. ರೋಮನ್ ಸಾಮ್ರಾಜ್ಯ ಹರಡಿದಂತೆ ಆಫ್ರಿಕ ಏಷ್ಯಾ ಖಂಡಗಳ ಪುರಾತನ ಮತಗಳೆಲ್ಲ ರೋಮಿನಲ್ಲಿ ಆಶ್ರಯಪಡೆದವು. ತಮ್ಮ ಆರ್ಯ ಮತಗಳನ್ನು ಬಿಟ್ಟು ರೋಮನ್ನರು ಈಜಿಪ್ಟಿನ ಐಸಿಸ್, ಒಸೈರಿಸ್, ಸಿರಿಯ ದೇಶದ ಕೈಬಿಲೆ, ಆಟಿಸ್, ಪರ್ಷಿಯದ ಮಿತ್ರ, ಯಹೂದ್ಯರ ಯಾಕ್ವೆ, ಇತ್ಯಾದಿ ಅನೇಕ ದೇವತೆಗಳ ದೇವಾಲಯಗಳೂ ಪುರೋಹಿತ ವರ್ಗವೂ ಸಾಮ್ರಾಜ್ಯದಲ್ಲೂ ನಗರದಲ್ಲೂ ಅನೇಕ ರೋಮನ್ನರನ್ನು

ಆಕರ್ಷಿಸಿದವು ಯಹೂದ್ಯರಲ್ಲಿ ಆಗಾಗ ಪ್ರವಾದಿಗಳು ತಮ್ಮನ್ನು ಬಿಡುಗಡೆಮಾಡಿ ಉದ್ಧರಿಸುವ ಅವತಾರ ಪುರುಷನು ಶೀಘ್ರದಲ್ಲಿಯೇ ಬರುವನೆಂದು ಜನರಲ್ಲಿ, ಅದರಲ್ಲಿಯೂ ಕೀಳುದರ್ಜೆಯ ಬೆಸ್ತರು ಗುಲಾಮರೇ ಮುಂತಾದವರಲ್ಲಿ ಆಂದೋಳನೆ ಮಾಡುತ್ತಿದ್ದರು. ಅನೇಕರು ತಾವೇ ಇಂತಹ ಅವತಾರಪುರುಷರೆಂದು ಹೇಳಿಕೊಂಡು ತಿರುಗುತ್ತಿದ್ದರು. ಕ್ರಿ.ಪೂ ೬ ಅಥವ ೪ನೇ ವರ್ಷದಲ್ಲಿ ಏಸುಕ್ರಿಸ್ತನು ಹುಟ್ಟಿ ಅಗಸ್ಟಸ್ಸನ ಮರಣಕಾಲಕ್ಕೆ ಸುಮಾರು ಇಪ್ಪತ್ತು ವರ್ಷದ ಯುವಕನಾಗಿದ್ದನು. ಇನ್ನೂ ತನ್ನ ಮತಪ್ರಚಾರ ಆರಂಭಿಸಿರಲಿಲ್ಲ. ಅಗಸ್ಟಸ್ಸನ ಅನಂತರ ಟೈಬೀರಿಯಸ್ಸನ ಕಾಲದಲ್ಲಿ ಇವನ ಮತವೂ ರೋಮಿನ ಗುಲಾಮ, ಸೇವಕ ವರ್ಗದವರಲ್ಲಿ ಪ್ರಚಾರವಾಗಲು ಆರಂಭಿಸಿತು. ಸೀಸರನು ಈ ವಿದೇಶೀಯ ಮತಗಳು ರೋಮನ್ನರ ಪ್ರಾಚೀನ ಮತಕ್ಕೆ ವಿರುದ್ಧವೆಂದು, ನೈತಿಕ ಸ್ಥಿತಿಯನ್ನು ಶಿಥಿಲಪಡಿಸುವವೆಂದು, ರೋಮನ್ನರು ತಮ್ಮ ಔನ್ನತ್ಯವನ್ನು ಕಾಪಾಡಿಕೊಳ್ಳಬೇಕಾದರೆ ರೋಮನ್ ಪೂಜಾ ಪದ್ಧತಿಯನ್ನು ಆಡಂಬರವಿಲ್ಲದ ಉಡುಪು ಆಹಾರ ಜೀವನ ಕ್ರಮವನ್ನನುಸರಿಸಬೇಕೆಂದು ವಿಧಿಸಿದನು ಉತ್ತಮ ದರ್ಜೆಯವರಲ್ಲಿ ದಾಂಪತ್ಯ ವಿಚ್ಛೇದವು ಬಹಳ ಹೆಚ್ಚುತ್ತಿದ್ದು ಕುಟುಂಬಗಳು ಶಿಥಿಲವಾಗುತ್ತಿದ್ದವು. ದಾಂಪತ್ಯನೀತಿ, ಕುಟುಂಬ ವ್ಯವಸ್ಥೆಗಳೇ ದೇಶದ ಅಭ್ಯುದಯಕ್ಕೆ ತಳಹದಿಯಾದ್ದರಿಂದ ಮತದ ವಿಷಯದಲ್ಲಿ ಜಾಗರೂಕರಾಗಿರಬೇಕೆಂದು ವಿಧಿಸಿದನು ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರಮಾಡಿ ಉತ್ಸವಗಳನ್ನು ಏರ್ಪಡಿಸಿದನು.

ಸೀಸರನೇ ಪ್ರತ್ಯಕ್ಷ ದೇವತೆಯೆಂದು ಒಂದು ಹೊಸ ಮತವು ಮೊದಲು ಪ್ರಾಂತಗಳಲ್ಲಿಯೂ ಅನಂತರ ರೋಮಿನಲ್ಲೂ ಆರಂಭವಾಯಿತು. ಇದರಿಂದ ಸಾಮ್ರಾಜ್ಯಕ್ಕೆಲ್ಲ ರಾಜಕೀಯವಾದ ಒಂದೇ ಮತ ಸ್ಥಾಪಿತವಾಗಿ ರೋಮನ್ನರ ಸರ್ವಾಧಿಕಾರ ಸೂಚನೆಗೆ ಪ್ರತ್ಯಕ್ಷ ನಿದರ್ಶನವಾಯಿತು. ಪ್ರತಿ ಪ್ರಾಂತದಲ್ಲೂ ಸೀಸರನ ಪ್ರತಿಮೆಯನ್ನು ಸ್ಥಾಪಿಸಿ ಆದರ ಆರಾಧನೆಗೆ ದೇವಾಲಯಗಳು. ಪಂಚಾಯತಿ ಸಭೆ.

ಪೂಜಾವಿಧಾನ, ಅರ್ಚಕವರ್ಗ ಉತ್ಸವಗಳೂ ನೇಮಿತವಾದವು

೫ ರೋಮನ್ನರ ಸುಖ ಲಾಲಸೆಯನ್ನು ಕಡಿಮೆಮಾಡಲು ಸ್ತ್ರೀ ಪುರುಷರ ಉಡುಪುಗಳು ಮಾನಮರ್ಯಾದೆಗೆ ತಕ್ಕಂತಿರಬೇಕೆಂದು, ಸಮಾರಾಧನೆ ಭೋಜನ ಕೂಟಗಳಲ್ಲಿ ಆಹಾರವು ಅತ್ಯಂತ ಹಿತೋಕ್ತಿಯಲ್ಲಿರಬೇಕೆಂದು, ಸಾರ್ವಜನಿಕರ ರಜಾದಿನಗಳಲ್ಲೂ ವ್ಯಾಯಾಮ ಪ್ರದರ್ಶನಗಳಲ್ಲೂ ಜನರು ತಮ್ಮ ನಡತೆಯಲ್ಲಿ ಜಾಗರೂಕರಾಗಿರಬೇಕೆಂದು ವಿಧಿಸಿದನು.

೬ ವಿವಾಹ ಸಂಬಂಧವಾದ ಕಾನೂನುಮಾಡಿ ಉತ್ತಮ ವರ್ಗದ ಪ್ರತಿ ಒಬ್ಬರೂ ಮದುವೆ ಮಾಡಿಕೊಂಡು ಅಧಿಕಾರ ವರ್ಗ, ಜನಸಂಖ್ಯೆ ಹೆಚ್ಚಿಸುವುದು, ದೇಶಭಕ್ತರ ಕರ್ತವ್ಯವೆಂದು, ಎಂಟು ಹತ್ತು ವರ್ಷದ ಮಕ್ಕಳಿಗೇ ವಿವಾಹವಾಗಬೇಕೆಂದು, ವಿವಾಹವನ್ನು ತಪ್ಪಿಸಿಕೊಂಡು ಬ್ರಹ್ಮಚಾರಿಗಳಾಗಿ ತಿರುಗುವವರಮೇಲೆ ಕಂದಾಯವನ್ನು ವಿಧಿಸಿ ಅವರ ನಾಗರಿಕ ಹಕ್ಕುಗಳನ್ನೂ ಕಿತ್ತುಕೊಳ್ಳುವದಾಗಿ ಹೆದರಿಸುತ್ತಿದ್ದನು. ಇದರಿಂದ ಸಮಾಜದಲ್ಲಿ ಒಂದು ರೀತಿಯಾದ ವರ್ಣ ವಿಭಾಗ ಉಂಟಾಯಿತು. ಅತ್ಯುತ್ತಮ ವರ್ಗದವರು ಸೆನೇಟರರು. ಅನಂತರ ಸೀಸರನ ಅನುಗ್ರಹಕ್ಕೆ ಪಾತ್ರರಾದ ಈಕ್ವೈಟರು. ಇವರ ಅಧಿಕಾರವು ವಂಶಾನುಗತವಾದುದಲ್ಲವಾದ್ದರಿಂದ ಇವರು ಸೀಸರನ ಅನುಚರರಾದರು. ಸೀಸರನು ಇವರನ್ನು ತನ್ನ ಅಂಗರಕ್ಷಕರನ್ನಾಗಿಯೂ, ಪ್ರಾಂತಾಧಿಕಾರಿಗಳನ್ನಾಗಿಯೂ, ರೋಮಿನ "ಪ್ರೆಟೋರಿಯನ್ ಗಾರ್ಡ್" ಸೈನ್ಯದ ಪ್ರಿಫೆಕ್ಟರಾಗಿಯೂ, ನೌಕಾಬಲದ ಅಧಿಕಾರಿಗಳನ್ನಾಗಿಯೂ, ರೋಮ್ ನಗರಕ್ಕೆ ಧಾನ್ಯ ಮತ್ತು ನೀರು ಒದಗಿಸುವವರನ್ನಾಗಿಯೂ ನೇಮಿಸುತ್ತಿದ್ದನು ಮೂರನೆಯ ವರ್ಣದವರು ಪ್ಲೆಬಿಯನ್ನರು. ನಗರದ "ಪ್ಲೆಬ್ಸ್ ರೊಮಾನ". ವಿದೇಶಿಯರು ಸೇರಿದ್ದರಿಂದ ಹೆಚ್ಚಾಗಿದ್ದರು ಆದ್ದರಿಂದ ಸೀಸರನು ಗುಲಾಮರ ಬಿಡುಗಡೆಯಲ್ಲಿ ಅನೇಕ ನಿಯಮಗಳನ್ನು ಮಾಡಿದನು. ಮತ್ತು ಸ್ವಾತಂತ್ರ್ಯ ಪಡೆದ ಗುಲಾ

ಮರು ದುರ್ನಡತೆಯಿಂದ ತಮ್ಮ ಹಕ್ಕುಗಳನ್ನು ಕಳೆದುಕೊಳ್ಳಬಹುದು. ಪ್ಲಿಬಿಯನ್ನರು ರಾಜಕೀಯ ವಿಷಯಗಳಲ್ಲಿ ಹೆಚ್ಚಾಗಿ ಪ್ರವೇಶಿಸಕೂಡ ದೆಂದು ಅವರಿಗೆ ಧಾನ್ಯ ಧನ ಮತ್ತು ವಿನೋದಗಳನ್ನು ಹಚ್ಚಿಸಿದನು. ಸಮಾಜದಲ್ಲಿ ಕೊನೆಯವರ್ಗದವರು ಗುಲಾಮರು ಅಧಿಕರಾಗಿಯೂ ಕೆಲವು ಸಮಯಗಳಲ್ಲಿ ಪ್ರಬಲರಾಗಿಯೂ ಕಲಾಕೌಶಲ್ಯ ಪಡೆದವ ರಾಗಿರುತ್ತಿದ್ದರು.

## ಸೈನ್ಯ ಸುಧಾರಣೆಗಳು

ರೋಮಿನ ಪ್ರಾಚೀನ ಸಾರ್ವಜನಿಕ ಸೇನೆಯು ಶಾಶ್ವತ ಸೈನ್ಯ ವಾಗಿ ಪರಿಣಮಿಸಿದ್ದಿತು ನಿವೃತ್ತ ಸಿಪಾಯಿಗಳಿಗೆ ವಿರಾಮವೇತನ ವಿಲ್ಲದ್ದರಿಂದ ಅವರು ಪ್ರಸಿದ್ಧ ಸೇನಾಪತಿಗಳನ್ನಾಶ್ರಯಿಸಬೇಕಾಗಿ ದ್ದಿತು ಮತ್ತು ಸೈನ್ಯದಮೇಲೆಲ್ಲ ಸರ್ವಾಧಿಕಾರ ಪಡೆದ ಒಬ್ಬ ಅಧಿಕಾರಿ ಇರಲಿಲ್ಲ ಅಂತರ್ಯುದ್ಧಗಳ ಪರಿಣಾಮವಾಗಿ ಸೈನ್ಯವು ೫೦ ಲೀಜಿಯನ್ನಳಷ್ಟು ಹೆಚ್ಚಿದ್ದವು ಆದ್ದರಿಂದ ಸೀಸರನು ಅನೇಕ ಮಾರ್ಪಾಟುಮಾಡಬೇಕಾಯಿತು (೧) ಆಗಸ್ಟಸ್ ಲೀಜಿಯನ್ನಳನ್ನು ೨೫ ಕ್ಕೆ ಇಳಿಸಿ ನಿವೃತ್ತರಾದವರಿಗೆ ಜಮೀನು ಅಥವಾ ಹಣವನ್ನು ಕೊಟ್ಟನು (೨) ೨೫ ಲೀಜಿಯನ್ನಳು ತನ್ನ ಅಧಿಕಾರಕ್ಕೆ ಒಳಪಟ್ಟಿದ್ದವು. ತನಗೆ ವಿಧೇಯರಾಗಿರುತ್ತೇವೆಂದು ಸಿಪಾಯಿಗಳು ಪ್ರತಿಜ್ಞೆಮಾಡ ಬೇಕಾಗಿದ್ದಿತು (೩) ರೋಮ್ ನಾಗರಿಕರು ಮಾತ್ರ ಲೀಜಿಯನ್ನ ಳನ್ನು ಸೇರಬಹುದು ಆದರೆ ಸ್ವೇಚ್ಛೆಯಾಗಿ ಸೈನ್ಯಕ್ಕೆ ಸೇರುವುದು ಪದ್ಧತಿಯಾಯಿತು. (೪) ಸಿಪಾಯಿಗಳು ೧೬ ವರ್ಷ ಯುದ್ಧರಂಗ ದಲ್ಲಿಯೂ ೪ ವರ್ಷ ಆಪತ್ಕಾಲಕ್ಕಾಗಿ (ರಿಸರ್ವ್) ಸೇವೆಮಾಡಬೇಕು. ಇವರು ನಿವೃತ್ತರಾದಮೇಲೆ ಸೈನ್ಯಭಂಡಾರದಿಂದ ಹಣವನ್ನು ಬಹು ಮಾನವಾಗಿ ಪಡೆಯುತ್ತಿದ್ದರು ಇದರಲ್ಲಿ ಕ್ರಿ ಶ. ೬ರಲ್ಲಿ ಆಗಸ್ಟಸ್ ಕೆಲವು ವಿಶೇಷ ತೆರಿಗೆಗಳನ್ನು ಹಾಕಿದನು (೫) ಪ್ರತಿ ಲೀಜಿಯನ್ನಿಗೂ ಪ್ರತ್ಯೇಕವಾದ ಸಂಖ್ಯೆ, ಹೆಸರು ಮುಂತಾದವಿದ್ದವು. ಅವರ ಅಧಿಕಾರಿ

ಯಾದ ಲೆಗೇಟನನ್ನು ಅಗಸ್ಟಸ್ಸನೇ ನೇಮಿಸುತ್ತಿದ್ದನು (೬) ಈ ಲೀಜಿಯನ್ನುಗಳಲ್ಲದೇ ಪ್ರಾಂತಗಳು, ಅಧೀನರಾಷ್ಟ್ರಗಳು, ಸರಹದ್ದಿನ ಜನಾಂಗಗಳು ಕಳುಹಿಸುತ್ತಿದ್ದ ಸೈನ್ಯಗಳು ರೋಮನ್ ಅಧಿಕಾರಿಗಳ ಕೈಕೆಳಗೆ ಇರುತ್ತಿದ್ದವು ಈ "ಮಿತ್ರ" ಸೇನೆಗಳ ಸಿಪಾಯಿಗಳು ೨೫ ವರ್ಷ ಸೇವೆಮಾಡಿದನಂತರ ಸಂಪೂರ್ಣ ನಾಗರಿಕ ಹಕ್ಕುಗಳನ್ನು ಪಡೆಯುತ್ತಿದ್ದರು. ಈ ರೋಮನ್ ಸೈನ್ಯವು ವಿಶೇಷವಾಗಿ ಯೂರೋಪಿನ ಸರಹದ್ದು, ಸಿರಿಯ, ಈಜಿಪ್ಟ್, ಆಫ್ರಿಕ ಮತ್ತು ಸ್ಪೈನ್ ದೇಶಗಳಲ್ಲಿಯೇ ಇರುತ್ತಿದ್ದವು. ಸೀರ್ಗಳ್ಳರನ್ನು ಅಡಗಿಸಿ ವ್ಯಾಪಾರವನ್ನು ರಕ್ಷಿಸಲು ಮೂರು ನೌಕಾಪಡೆಗಳು ಇದ್ದವು.

## ನಗರ ಸುಧಾರಣೆಗಳು

ರೋಮ್ ನಗರವನ್ನು ೧೪ ಪ್ರಾಂತಗಳು ಮತ್ತು ೨೬೫ ಮೊಹಲ್ಲಾಗಳಾಗಿ ವಿಭಾಗಿಸಿದನು. ಪ್ರತಿ ಮೊಹಲ್ಲಾಕ್ಕೂ ಪ್ರತಿವರ್ಷ ಚುನಾಯಿತನಾದ "ಮ್ಯಾಜಿಸ್ಟರೇಟ್" ಮುಖಂಡನಿದ್ದನು ನಾಗರಿಕರ ಚಟುವಟಿಕೆಗಳಿಗೆ ಮೊಹಲ್ಲಾಗಳೂ ಕೇಂದ್ರಗಳಾದವು ವರ್ತಕಶ್ರೇಣಿಗಳು (ಕಾಲೇಜಿಯ) ಸೆನೇಟಿನ ಅನುಮತಿ ಪಡೆಯಬೇಕು ರಾಜಕೀಯವಲ್ಲದ ಸಂಘಗಳಿಗೆ ಪ್ರೋತ್ಸಾಹ ಕೊಡುತ್ತಿದ್ದನು. ಪ್ಲಿಬಿಯನ್ನರು ತಮ್ಮ ಧಾನ್ಯ ಮತ್ತು ವ್ಯಾಯಾಮ ಪ್ರದರ್ಶನಗಳಿಗಾಗಿ ಸೀಸರನನ್ನು ಆಶ್ರಯಿಸಬೇಕಾಗಿದ್ದುದರಿಂದ ಅವನ ಕಕ್ಷಿದಾರ (ಕ್ಲೈಂಟ್) ರೆಂದು ಕರೆಯಲ್ಪಟ್ಟರು.

ರೋಮಿನಲ್ಲಿ ೧೦ ಲಕ್ಷ ಜನಸಂಖ್ಯೆ ಇದ್ದರೂ ಸರಿಯಾದ ನಗರ ರಕ್ಷಕರೂ, (ಪೊಲೀಸ್) ನೀರು ಮತ್ತು ಧಾನ್ಯ ಸರಬರಾಜಿರಲಿಲ್ಲ ಆದ್ದರಿಂದ ಸೀಸರನೇ ಆಡಳಿತವಹಿಸಿಕೊಂಡು ಬದಲಾವಣೆ ಮಾಡಿದನು. (೧) ಕ್ರಿ ಪೂ. ೨೨ ರಲ್ಲಿ ಧಾನ್ಯ ಸರಬರಾಜನ್ನು ಪ್ರತಿ ತಿಂಗಳೂ ಬಡವರಿಗೆ ಧಾನ್ಯ ಹಂಚುವದನ್ನೂ (ಕ್ಯೂರ ಅನ್ನೊನೈ) ತಾನೇ ವಹಿಸಿಕೊಂಡನು. ಇದಕ್ಕಾಗಿ ಒಬ್ಬ ಪ್ರಿಫೆಕ್ಟನನ್ನು ನೇಮಿಸಿದನು.

(೨) ಕ್ರಿ.ಪೂ ೩೩ ರಲ್ಲಿ ಆಗ್ರಿಪ್ಪ ನೀರಿನ ಸರಬರಾಜಿಗೆ ನಾಲೆಗಳನ್ನು ಮಾಡಿಸಿದ್ದನು. ಕ್ರಿ.ಪೂ ೧೨ರಲ್ಲಿ ಇದಕ್ಕಾಗಿ ಒಬ್ಬ ಕಮಿಷನರ್ ನೇಮಿಸಲ್ಪಟ್ಟು ನಾಲೆಗಳ ದುರಸ್ತು ಮಾಡಲಾಯಿತು (೩) ದೇವಾಲಯ ಸಾರ್ವಜನಿಕ ಕಟ್ಟಡಗಳು, ಟೈಬರ್ ನದಿ ಮೇಲ್ವಿಚಾರಣೆಗೆ ಕಮಿಷನರನ್ನು ನೇಮಿಸಲಾಯಿತು. (೪) ನಗರದ ಬಂದೋಬಸ್ತಿಗಾಗಿ ಒಬ್ಬ ಪ್ರಿಫೆಕ್ಟನು ಅವನ ಕೈಕೆಳಗೆ ಪೊಲೀಸ್ ಅಧಿಕಾರಿಗಳು (ಪ್ರಿಫೆಕ್ಟಸ್ ವಿಜಿಲಂ) ನೇಮಿತರಾದರು ಕ್ರಿ ಪೂ ೨೨ರಲ್ಲಿ ಬೆಂಕಿಯಿಂದುಂಟಾಗ ಬಹುದಾದ ಅನಾಹುತ ತಪ್ಪಿಸಲು "ಫೈರ್‌ಫೈಟಿಂಗ್" ಸಂಸ್ಥೆಯನ್ನು ಮಾಡಿ ಅದಕ್ಕೆ ಒಬ್ಬ ಅಧಿಕಾರಿಯನ್ನು ಕ್ರಿ ಪೂ ೭ರಲ್ಲಿ ನೇಮಿಸಿದನು. ಕ್ರಿ.ಪೂ ೬ರಲ್ಲಿ ಕಳ್ಳರನ್ನು ಹಿಡಿಯಲು ಪೊಲೀಸರನ್ನು ನೇಮಿಸಿ ಅವರ ಅಧಿಕಾರಿಯಾಗಿ ಒಬ್ಬ ಪ್ರಿಫೆಕ್ಟ್‌ನನ್ನು ಇಟ್ಟನು. (೫) ಸಾರ್ವಜನಿಕರ ಉಪಯೋಗಕ್ಕಾಗಿ ಹೊಸ ದೇವಾಲಯಗಳನ್ನು ನಾಟಕಶಾಲೆಗಳನ್ನು ನಿರ್ಮಿಸಿದನು ಇಟ್ಟಿಗೆಯ ರೋಮ್ ಶಿಲಾಮಯಮಾಡಿದನು. ರಸ್ತೆಗಳನ್ನು ಉತ್ತಮಪಡಿಸಿದನು. (೬) ರಕ್ಷಣೆಗಾಗಿ ಇಟಲಿಯನ್ನು ೧೧ ಭಾಗಗಳಾಗಿ ಮಾಡಿ ಹಳೆಯ ನಗರಗಳನ್ನು ವಲಸೆಗಳನ್ನು ಜೀರ್ಣೋದ್ಧಾರಮಾಡಿದನು. ಇಟಲಿ ಸರಹದ್ದಿನಲ್ಲಿ ಸೈನ್ಯ ಶಿಬಿರಗಳನ್ನು ಸ್ಥಾಪಿಸಿ ರಸ್ತೆಗಳನ್ನು ದುರಸ್ತುಮಾಡಿಸಿ ಕಳ್ಳಕಾಕರರನ್ನು ಅಡಗಿಸಿದನು ಬಲವಂತವಾಗಿ ಜಮೀನುಗಳನ್ನು ವಶಪಡಿಸಿಕೊಳ್ಳದೆ ಕೊಂಡುಕೊಂಡು ಹೊಸ ವಲಸೆಗಳನ್ನು ಸ್ಥಾಪಿಸಿದನು. ಬಂಜರು ಭೂಮಿಗಳನ್ನು ವ್ಯವಸಾಯಮಾಡುವಂತೆ ಪ್ರೋತ್ಸಾಹಿಸಿದನು (೭) ಹಳ್ಳಿಗಳಲ್ಲಿ ಸೈನ್ಯದವರು ಕಾವಲು ತಿರುಗುತ್ತಿದ್ದರು. ಮತ್ತು ಪ್ರಾಂತಿಕ ಮುನಿಸಿಪಲ್ ವ್ಯವಸ್ಥೆಯು ವಿಸ್ತರಿಸಲ್ಪಟ್ಟಿತು. "ಲೆಕ್ಸ್‌ಜೂಲಿಯ ಮುನಿಸಿಪಾಲಿಸ್" ಎಂಬ ಕಾನೂನು ಇಟಲಿ ಮತ್ತು ಗಾಲಿನಲ್ಲಿ ಪ್ರಚಾರಕ್ಕೆ ಬಂದಿತು. "ಅಗಸ್ಟಾಲಿಸ್" ಎಂಬುದು ಒಂದು ವಿಶಿಷ್ಟ ವ್ಯವಸ್ಥೆ. ಸ್ವತಂತ್ರಪಡೆದ ಗುಲಾಮರು ಮುನಿಸಿಪಲ್ ಅಧಿಕಾರಗಳನ್ನು ಪಡೆಯಲು ಅರ್ಹರಲ್ಲ. ಆದ್ದರಿಂದ ಅವರಿಗೆ ಪ್ರತ್ಯೇಕವಾದ ಸಭೆ ಮತ್ತು ಅಧಿಕಾರಿವರ್ಗ

ಸ್ಥಾಪಿಸಿ ಮುನಿಸಿಪಲ್ ತೆರಿಗೆಗಳನ್ನು ಕೊಟ್ಟರೆ ಕೆಲವು ಗೌರವ ಹಕ್ಕುಗಳನ್ನು ಕೊಡುವಂತೆ ಕಾನೂನು ಮಾಡಿದನು. ಸ್ಥಳೀಯ ಸೆನೇಟ್ ಇಂತಹ ನಿವೃತ್ತ ಗುಲಾಮರನ್ನು ಒಂದು ವರ್ಷ ಅಧಿಕಾರಿಗಳಾಗಿ ನೇಮಿಸಬಹುದು. ಹೀಗೆ ಮುನಿಸಿಪಾಲಿಟಿಯ ಡೆಕೂರಿಯನ್ನರಿಂ ನಾಗರಿಕವರ್ಗಕ್ಕೆ ಕೆಳದರ್ಜೆಯವರಾಗಿ ಈ ನಿವೃತ್ತ ಗುಲಾಮರ ಅಗಸ್ಟಸ್ಸನಿಗೆ ಅತ್ಯಂತ ವಿಧೇಯರಾದ ವರ್ಗವಾದರು.

## ರೋಮನ್ ಸಂಸ್ಕೃತಿ. "ಅಗಸ್ಟಸ್ ಯುಗ"

ಅಗಸ್ಟಸ್ ಮತ್ತು ಧನಿಕರಾದ ಅನೇಕರು ಲ್ಯಾಟಿನ್ ಸಾಹಿತ್ಯವನ್ನು ಪ್ರೋತ್ಸಾಹಿಸಿದುದರಿಂದ ಲ್ಯಾಟಿನ್ ಸಾಹಿತ್ಯಚರಿತ್ರೆಯಲ್ಲಿ ಅಗಸ್ಟಸ್ಸನ ಕಾಲವನ್ನು "ಸುವರ್ಣ ಯುಗ" ವೆಂದು ಕರೆಯಲಾಯಿತು ಗ್ರೀಕರ ಮೇಲ್ಪಙ್ತಿಯನ್ನು ಬಿಟ್ಟು ಸ್ವತಂತ್ರವಾದ ರೀತಿಯ ಲ್ಲಿ ಪಾಲ್ಲಿಯೋ, ಮೆಸ್ಸಾಲ, ಪಾಂಪೆಯಸ್ ಟ್ರೋಗಸ್ ಮತ್ತು ಲಿವಿ ರೋಮನ್ನರ ಚರಿತ್ರೆಗಳನ್ನು ರಚಿಸಿದರು. ಕವಿಗಳಲ್ಲಿ ಅತ್ಯಂತ ಪ್ರಖ್ಯಾತನಾದವನು ವಿರ್ಜಿಲ್. ಇವನೂ ಹೊರೇಸ್ ಎಂಬ ಕವಿಯೂ ಮೇಸಿನಾಸ್ ಎಂಬ ಸುಸಂಸ್ಕೃತ ಮತ್ತು ಅತ್ಯಂತ ಧನಾಢ್ಯನಾದವನ ಆಶ್ರಯ ಪಡೆದಿದ್ದರು. ವಿರ್ಜಿಲ್ (ಕ್ರಿ.ಪೂ. ೭೦–೧೯) ರೋಮ್ ನಗರಾರಂಭ ವಿಷಯಕವಾದ ಈನೀಡ್ ಎಂಬ ಮಹಾ ಕಾವ್ಯವನ್ನು, "ಜಾರ್ಜಿಕ್ಸ್" ಎಂಬ ವ್ಯವಸಾಯ ಸಂಬಂಧವಾದ ಕಾವ್ಯವನ್ನು ರಚಿಸಿ ಹೋಮರ್ ಮುಂತಾದ ಪ್ರಾಚೀನ ಕವಿಗಳಿಗೆ ಸಮಾನನೆನಿಸಿಕೊಂಡನು. ಹೋರೆಸನು ವಿಡಂಬನ ಕಾವ್ಯಗಳನ್ನೂ ಖಂಡಕಾವ್ಯಗಳನ್ನೂ ರಚಿಸಿರುವನು. ಟೈಬುಲಸ್ ಮತ್ತು ಪ್ರಾಪರ್ಟಿಯಸ್ ಹಾಡುಗಳನ್ನು ರಚಿಸಿದರು. ಆವಿಡ್ ರೋಮನ್ನರ ಚರಿತ್ರೆಯಲ್ಲಿನ ಮುಖ್ಯ ಘಟನೆಗಳ ವಿಷಯವಾಗಿ ಫಾಸ್ಟೈ ಅಥವಾ ಕ್ಯಾಲೆಂಡರ್ ಎಂಬ ಗ್ರಂಥವನ್ನು ರಚಿಸಿರುವನು. ಇನ್ನೂ ಅನೇಕ ವಿದ್ವಾಂಸರು ಜ್ಯೋತಿಷ, ವ್ಯಾಕರಣ, ಚರಿತ್ರೆ, ವೈದ್ಯ, ಪ್ರವಾಸ, ಕಥೆ, ಇತ್ಯಾದಿ ರಚಿಸಿರುವರು

## ಆಗಸ್ಟಸ್ಸಿನ ವ್ಯಕ್ತಿತ್ವ ಮತ್ತು ಅಂತ್ಯದಿವಸಗಳು

ಅಗಸ್ಟಸ್ಸನಿಗೆ ಪ್ರಾಣಪ್ರಿಯರಾದ ಸ್ನೇಹಿತರು ಮಂತ್ರಿಗಳು ಇದ್ದರು ಆಗ್ರಿಪ್ಪನು ಆಪ್ತಸ್ನೇಹಿತನೂ ಪ್ರಖ್ಯಾತ ಸೇನಾಪತಿಯೂ ಆಗಿದ್ದನು. ಮೆಕೀನಾಸನು ಕವಿಗಳಿಗೆ ಆಶ್ರಯವನ್ನು ಕೊಟ್ಟಿದ್ದನು. ಅಗಸ್ಟಸ್ಸನಿಗೆ ಜೂಲಿಯು ಎಂಬ ಒಬ್ಬಳೇ ಮಗಳು, ಆಗ್ರಿಪ್ಪನಿಗೆ ಕೊಟ್ಟು ಮದುವೆಯಾಗಿತ್ತು. ಅವಳ ಮಕ್ಕಳನ್ನು ಅಗಸ್ಟಸ್ಸನು ದತ್ತು ತೆಗೆದುಕೊಂಡಿದ್ದನು. ಆದರೆ ಅವರು ಸತ್ತುಹೋಗಲು ಅಗಸ್ಟಸ್ ತನ್ನ ಹೆಂಡತಿ ಸ್ಕ್ರಿಬೋನಿಯುಳನ್ನು ದಾಂಪತ್ಯವಿಚ್ಛೇದಮಾಡಿ ಲಿವಿಯ ಎಂಬವಳನ್ನು ಮದುವೆಯಾದನು. ಲಿವಿಯ ಮಗನಾದ ಟೈಬೀರಿಯಸ್ಸನನ್ನು ತನಗೆ ಉತ್ತರಾಧಿಕಾರಿಯೆಂದು ದತ್ತು ತೆಗೆದುಕೊಂಡನು. ಕೊನೆಯ ದಿನಗಳಲ್ಲಿ ಸಾಮ್ರಾಜ್ಯದಲ್ಲೆಲ್ಲ ಶಾಂತಿ ಇದ್ದರೂ ಜರ್ಮನಿ ಸರಹದ್ದಿನಲ್ಲಿ ರೋಮನ್ನರಿಗೆ ಅಪಜಯಗಳಾಗುತ್ತಿದ್ದವು. ಇದಕ್ಕಾಗಿ ತಕ್ಕ ವ್ಯವಸ್ಥೆ ಮಾಡುತ್ತಿದ್ದಾಗ ನೋಲ ಪಟ್ಟಣದಲ್ಲಿ ಕ್ರಿ.ಪೂ. ೧೪ರಲ್ಲಿ ಆಗಸ್ಟ್ ೧೯ನೇ ತಾರೀಖು ಅಗಸ್ಟಸ್ಸನು ದೈವಾಧೀನನಾದನು.

ಅಗಸ್ಟಸ್ಸನು ಕೇವಲ ಹದಿನೆಂಟು ವರ್ಷ ಬಾಲಕನಾಗಿದ್ದಾಗ ಶತ್ರುಗಳನ್ನೆದುರಿಸಿ ಅಧಿಕಾರಕ್ಕೆ ಬಂದು ತನ್ನ ೭೫ನೇ ವರ್ಷದವರೆಗೂ ಸತತವೂ ಸಾಮ್ರಾಜ್ಯ ಕ್ಷೇಮಕ್ಕಾಗಿ ದುಡಿಯುತ್ತಿದ್ದನು. ನಲವತ್ತೊಂದು ವರ್ಷ ಪ್ರಜಾಪ್ರಭುತ್ವ ಮತ್ತು ರಾಜತತ್ತ್ವಗಳೆರಡಕ್ಕೂ ಸಮನ್ವಯವಾಗುವಂತೆ ಆಳುತ್ತಿದ್ದನು. ಎಲ್ಲ ವರ್ಗದವರೂ ಇವನಲ್ಲಿ ವಿಶ್ವಾಸವಿಟ್ಟು ಸಜೀವ ಪ್ರತ್ಯಕ್ಷದೇವತೆಯೆಂದು ಪೂಜಿಸುತ್ತಿದ್ದರು. ಅವನ ಕಾರ್ಯಗಳ ಚರಿತ್ರೆಯನ್ನು ಕಂಚಿನ ಹಲಗೆಗಳ ಮೇಲೆ ಕೆತ್ತಿಸಲಾಯಿತು. ಅವನ ಪ್ರಯತ್ನದಿಂದ ರೋಮನ್ ಸಾಮ್ರಾಜ್ಯವು ಬಹಳ ವಿಸ್ತರಿಸಿದ್ದುದೇ ಅಲ್ಲದೆ ಅನೇಕ ದೇಶಭಾಷೆ ಜನಾಂಗ ಮತಗಳನ್ನು ಒಳಗೊಂಡಿತ್ತು. ಕ್ರಿ.ಪೂ. ೨೮ರಲ್ಲಿ ನಡಿಸಿದ ಜನಗಣನೆ ಪ್ರಕಾರ ಸಂಪೂರ್ಣ ನಾಗರಿಕ ಹಕ್ಕುಗಳನ್ನು ಪಡೆದವರು ೪೦ ಲಕ್ಷ ಮಾತ್ರ. ಆದರೆ ಎಲ್ಲ ಜನಾಂಗ

ಗಳಿಗೂ ನ್ಯಾಯ ಮತ್ತು ರಕ್ಷಣೆ ಸಮವಾಗಿ ಸಿಕ್ಕುತ್ತಿದ್ದವು. ರೋಮನ್ ಪ್ರಜಾಪ್ರಭುತ್ವದ ಅಧಿಕಾರಕ್ಕಿಂತಲೂ ಅಗಸ್ಟಸ್ಸನ ಅಧಿಕಾರವೇ ಜನರಿಗೆ ಹಿತಕರವಾಗಿತ್ತು ಎಲ್ಲೆಲ್ಲೂ "ರೋಮನ್‌ಶಾಂತಿ" (ಪ್ಯಾಕ್ಸ್‌ರೊಮಾನ) ಸ್ಥಾಪಿತವಾಗಿತ್ತು. ಆದರೆ ಇದಕ್ಕಾಗಿ ಹೆಚ್ಚು ಸೇನೆಗಳನ್ನು ಇಟ್ಟು ತೆರಿಗೆ ಕಂದಾಯಗಳಿಂದ ಜನರನ್ನು ಹಿಂಸಿಸುತ್ತಿರಲಿಲ್ಲ. ಆದ್ದರಿಂದ ಅಗಸ್ಟಸ್ಸನನ್ನು "ಶಾಂತಿ ಮತ್ತು ರಕ್ಷಣಾ ದೇವತೆ" ಎಂದು ಗಣಿಸುತ್ತಿದ್ದರು. ಬಹಳ ಕುಶಲನಾದ ರಾಜಕೀಯವೇತ್ತನು. ವಿರೋಧಾಭಿಪ್ರಾಯ ಸೂಚಿಸಿದವರನ್ನೂ ಗೌರವಿಸುತ್ತಿದ್ದನು. ಆದರೆ ಸಮಯಕ್ಕನುಸಾರವಾಗಿ ನಿರ್ದಾಕ್ಷಿಣ್ಯವಾಗಿ ಶಿಕ್ಷೆ ಮಾಡುವನು. ಪಾರ್ಟಿ ಜಗಳಗಳು ಅವನು ಬದುಕಿರುವವರೆಗೂ ಈಚೆಗೆ ಬರಲು ಅವಕಾಶ ಕೊಡುತ್ತಿರಲಿಲ್ಲ. ಆದರೆ ಅವನ ಮರಣಾನಂತರ ಸೋಮಾರಿಗಳಾದ ರೋಮನ್ ಪುಂಡ ಜನರು ಯಾರ ಭಯವೂ ಇಲ್ಲದೆ ಗಲಭೆಗಳನ್ನಾರಂಭಿಸಿದರು. ಇದರ ಪರಿಣಾಮವಾಗಿ ಕೊನೆಗೆ ರೋಮ್ ಸಾಮ್ರಾಜ್ಯವೇ ನಾಶವಾಯಿತು.

ಶ್ರೀ ಪರಿಮಳ ಪವರ್ ಪ್ರೆಸ್, ಮೈಸೂರು.

*By the same Author*

# Sources of Karnataka History

(Vol. I)

Published by the University of Mysore.

It is a very useful and interesting book containing extracts from all relevent sources of information.

—Dr. R C. Majumdar.

The book is indispensable to scholars and very interesting to the general reader. It is sure to arouse great interest. —Hon'ble Sri R. R. Divakar, Modern Review.

This handy volume is a precious possession for the students of Karnataka History. We sincerely thank Prof. Sastri. —New Indian Antiquary.

## PROTO-INDIC RELIGION.

Prof. Sastriar's book contains a very learned Samskritic and anthropological study of the nature of Proto-Indic Religion. Even for specialists it is perhaps too learned........a mass of detailed learning. This kind of careful, solid, objective study is a credit to Indian Scholarship. —Madras Mail.

Few doctorate theses in India or Great Britain reach its level of erudition and critical scholarship. He has attacked the problem with a remarkable knowledge not only of Vedic literature and its exegesis but of History and Archaeology.

—Rao Bahadur K. V. Rangaswami Iyengar.

## ICONOGRAPHY OF SRI VIDYARNAVATANTRA.

Prof. Sastri has to be congratulated on this excellent piece of research. —Dr. R. Nagaraja Sarma.

His method is worthy of being followed by other research scholars. —Prof. P. K. Gode.

*In Preparation*

The Early History of the Gangas of Talkad.

The History of Greece (in Kannada).

# ನಮ್ಮ ಪ್ರಕಟನೆಗಳು

| | | | | |
|---|---|---|---|---|
| ೧. | ಚಂದ್ರಗುಪ್ತವಿಜಯ : ಎಚ್. ಎಂ. ಶಂಕರನಾರಾಯಣರಾವ್, ಎಂ ಎ. | ೧ | ೮ | ೦ |
| ೨ | ಕಥಾವಲ್ಲರಿ : ತ ಸು. ಶಾಮರಾಯ, ಬಿ ಎ.(ಆನರ್ಸ್) | ೧ | ೮ | ೦ |
| ೩. | ಪ್ರಸಾರ ನಾಟಕಗಳು : ಎಚ್. ಕೆ. ರಂಗನಾಥ್ | ೧ | ೮ | ೦ |
| ೪ | ಲಕೀ ಲಕ್ಸ್ಟ್ರನ್ಸ್ : ಕ್ಷೀರಸಾಗರ | ೦ | ೧೦ | ೦ |
| ೫. | ಆದಿಪರ್ವಸಂಗ್ರಹ | ೧ | ೮ | ೦ |
| ೬ | ಸಭಾಪರ್ವಸಂಗ್ರಹ | ೨ | ೦ | ೦ |
| ೭. | ಅರಣ್ಯಪರ್ವಸಂಗ್ರಹ | (ಅಚ್ಚಿನಲ್ಲಿ) | | |
| ೮. | ವಿರಾಟಪರ್ವಸಂಗ್ರಹ | ,, | | |
| ೯ | ಉದ್ಯೋಗಪರ್ವಸಂಗ್ರಹ | ೧ | ೮ | ೦ |
| ೧೦. | ಭೀಷ್ಮಪರ್ವಸಂಗ್ರಹ | (ಅಚ್ಚಿನಲ್ಲಿ) | | |
| ೧೧. | ಪ್ರಾಚೀನಸಾಹಿತ್ಯ : ಟಿ. ಎಸ್. ವೆಂಕಣ್ಣಯ್ಯ | ೧ | ೮ | ೦ |
| ೧೨. | ಭಾಷಣಗಳು ಮತ್ತು ಲೇಖನಗಳು : ಭಾಗ ೧ | ೩ | ೦ | ೦ |
| | ಭಾಗ ೨ | ೪ | ೦ | ೦ |
| ೧೩. | ಭಾಸಕವಿ : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. | (ಅಚ್ಚಿನಲ್ಲಿ) | | |
| ೧೪. | ಉಂಗುರ : ಕೆ. ಎಸ್. ನರಸಿಂಹಸ್ವಾಮಿ | ೧ | ೪ | ೦ |
| ೧೫ | ಗ್ರೀಕರ ಚರಿತ್ರೆ : ಡಾ॥ ಎಸ್ ಶ್ರೀಕಂಠಶಾಸ್ತ್ರೀ, ಎಂ.ಎ. ಡಿ.ಲಿಟ್. | ೨ | ೦ | ೦ |
| ೧೬. | ಕಾವ್ಯತತ್ವಾಲೋಕ : ಡಾ॥ ಕೆ. ಕೃಷ್ಣಮೂರ್ತಿ. | (ಅಚ್ಚಿನಲ್ಲಿ) | | |
| ೧೭ | ಯಶೋಧರಚರಿತೆಯ ಸಂಗ್ರಹದ ವಿವರಣೆ | ೧ | ೦ | ೦ |
| ೧೮ | ಹರಿಶ್ಚಂದ್ರಕಾವ್ಯ ಸಂಗ್ರಹದ ಕೈಗನ್ನಡಿ | (ಅಚ್ಚಿನಲ್ಲಿ) | | |
| ೧೯. | ರೋಮಿಯೊ ಮತ್ತು ಜೂಲಿಯೆಟ್ | ೦ | ೧೨ | ೦ |
| ೨೦. | ಕರ್ಣ : ಎಂ ಎಸ್. ಅನಂತಪದ್ಮನಾಭರಾವ್. | (ಅಚ್ಚಿನಲ್ಲಿ) | | |
| ೨೧. | ಕನ್ನಡ ಗದ್ಯಸಂಗ್ರಹ : ಡಿ ಎಲ್.ಎನ್., ತ. ಸು. ಶಾ. ಎಚ್.ಎಂ.ಎಸ್. | ,, | | |
| ೨೨. | ಪಾಠ್ಯ ಶಿಕ್ಷಣ ಸಮಿತಿಯ ವರದಿ | ,, | | |

**ಎಚ್. ಎಮ್. ಶಂಕರನಾರಾಯಣರಾವ್,** ಎಂ.ಎ.

ಶಾರದಾವಿಲಾಸ ಕಾಲೇಜು, ಕೃಷ್ಣಮೂರ್ತಿಪುರಂ, ಮೈಸೂರು.